ಕುರುಕ್ಷೇತ್ರ

CC-0. In Public Domain. Digitized by eGangotri

ಬಿ. ಪುಟ್ಟಸ್ವಾಮಯ್ಯ



Sri Vidyabharathi Book Centre, Sringeri

★ ಬಿ. ಪುಟ್ಟಸ್ವಾಮಯ್ಯನವರ - ಕುರುಕ್ಷೇತ್ರ

CC-O. In Public Domain. Digitized by eGangotri

ಇದುವರೆಗೆ ನಾಟಕೋಪಜೀವಿಗಳು ರಂಗಭೂಮಿಯನ್ನು ಮುಟ್ಟುತ್ತಿದ್ದ ನಾಟಕಗಳ ಸಾಹಿತ್ಯಕ್ಕೂ "ಕುರುಕ್ಷೇತ್ರ" ದ ಸಾಹಿತ್ಯಕ್ಕೂ ಬಹಳ ವ್ಯತ್ಯಾಸವಿದೆ. ನಾಟಕಕರ್ತರ ಭಾಷೆಯಲ್ಲಿರುವ ಕಾವ್ಯಮಾಧುರ್ಯ, ತೇಜಃಪುಂಜತೆ, ಗಾಂಭೀರ್ಯ ಶಕ್ತಿ ಮುಂದೆ ನಾಟಕೋಪಜೀವಿಗಳಿಗೆ, ನಾಟಕ ಬರೆದು ಕೊಡುವವರಿಗೆ ಮೇಲ್ಪಂಕ್ತಿಯಾಗಲು ಅರ್ಹವಾಗಿದೆ ಎಂದು ಹೇಳಬಹುದು. ಮಹಾಭಾರತದ ಯೋಗ್ಯತೆಗೆ ತಕ್ಕ ಉತ್ತಮ ನಾಟಕವನ್ನು ಸೃಷ್ಟಿಸಬೇಕೆಂಬ ಹಂಬಲ ಹೆಜ್ಜೆ ಹೆಜ್ಜೆಗೂ ಕಾಣಬರುತ್ತದೆ. ಕೀಳು ಅಭಿರುಚಿಗೆ ಸೊಪ್ಪು ಹಾಕುವುದೇ ತಮ್ಮ ಕರ್ತವ್ಯವೆಂದು ಬಗೆದು ಆ ಅಭಿರುಚಿಗೆ ತಕ್ಕಂತೆ ಬರೆಯುವವರಿಗೂ 'ನಾಲ್ಕಾಣೆ' ಯ ಜನತೆಯನ್ನು ತಮ್ಮ ಹಂತಕ್ಕೆ ಎತ್ತಲು ಪ್ರಯತ್ನಿಸದೆ, ಅವರಿಗೆ ತಕ್ಕ ನಾಟಕಗಳನ್ನು ಬರೆಯಬೇಕು ಎಂದು ವಾದಿಸುವವರಿಗೂ 'ಕುರುಕ್ಷೇತ್ರ' ತಕ್ಕ ಉತ್ತರವಾಗಿದೆ. ಕುಶಲನಾದ ಕವಿ ತನ್ನ ಪ್ರತಿಭೆಯಿಂದ ಸಾಮಾನ್ಯರಲ್ಲಿಯೂ ಸುಪ್ತವಾಗಿರುವ ಕಲಾ ಚೇತನವನ್ನು ಹೇಗೆ ಜಾಗೃತಗೊಳಿಸಬಲ್ಲನೆಂಬುದಕ್ಕೆ ಪುಟ್ಟಸ್ವಾಮಯ್ಯನವರ 'ಕುರುಕ್ಷೇತ್ರ' ವೇ ಸಾಕ್ಷಿ.

ಕಾಲಕ್ಕೆ ಅನುಗುಣವಾಗಿ ರಂಗದ ರುಚಿಯನ್ನು ಬದಲಾಯಿಸಿ, ಅಭಿನಯ, ಸಂಗೀತ, ರಂಗ ಪರಿಕರಗಳ ಅಳವಡಣೆಗೆ ಅಪಾರವಾದ ಅವಕಾಶ ಮಾಡಿಕೊಡುವ ಕಥಾನಕಗಳನ್ನು ಆಯ್ದು, ನವೀನವಾದ ರೀತಿಯಲ್ಲಿ ದೃಶ್ಯಗಳ ಸಂಯೋಜನೆ ಮಾಡಿ ಪುಟ್ಟಸ್ವಾಮಯ್ಯನವರು ಅತ್ಯಂತ ಯಶಸ್ವಿಯಾದ ಆಧುನಿಕ ನಾಟಕಕಾರರೆನಿಸಿಕೊಂಡರು.

— ಅ. ನ. ಕೃ. ವಿಮರ್ಶೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕುರುಕ್ಷೇತ್ರ

ನಾಟಕ

ರಚನೆ :

ಬಿ. ಪುಟ್ಟಸ್ವಾಮಯ್ಯ

ಶಾರದಾ ಪ್ರಕಾಶನ

ಗಾಂಧಿನಗರ : ಬೆಂಗಳೂರು-೫೬೦ ೦೦೯

Sri Vidyabharathi Book Centre, Sringeri

CC-O. In Public Domain. Digitized by eGangotri

ಹನ್ನೆರಡನೆಯ ಮುದ್ರಣ ೧೯೮೨
ಹದಿಮೂರನೆಯ ಮುದ್ರಣ ೧೯೮೫
ಹದಿನಾಲ್ಕನೆಯ ಮುದ್ರಣ ೧೯೮೭

ಮುದ್ರಣ :
ಎಮ್ ಎಮ್ ಪ್ರಿಂಟಿಂಗ್ ವರ್ಕ್ಸ್
ಬೆಂಗಳೂರು-೫೬೦ ೦೦೪

ಈ ನಾಟಕದ ಎಲ್ಲ ಹಕ್ಕುಗಳನ್ನೂ ಸಂರಕ್ಷಿಸಲಾಗಿದೆ. ನಾಟಕವನ್ನು ಅಭಿನಯಿಸಲು ಅಪೇಕ್ಷಿಸುವವರು ಶ್ರೀಮತಿ ಉಷಾ, ನಂಬರ್ ೪೪, ಶ್ರೀರಾಮಪುರ, ಬೆಂಗಳೂರು-೨೧. ಇವರಿಗೆ ಒಂದು ಸಾರಿಗೆ ರೂ. ೫೦/- ರಂತೆ ಗೌರವಧನವನ್ನು ಪಾವತಿಮಾಡಿ ಅನುಮತಿ ಪಡೆಯತಕ್ಕದ್ದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ರಂಗಭೂಮಿಯ
ಅಭ್ಯುದಯ ಪ್ರಗತಿಗಳಿಗಾಗಿ
ಅವಿಶ್ರಾಂತವಾಗಿ ಪರಿಶ್ರಮಿಸಿದ
ವಿಖ್ಯಾತ ನಟರೂ, ಸುಪ್ರಸಿದ್ಧ ಪ್ರಯೋಕ್ತೃಗಳೂ
ಕಲಾಭಿಮಾನಿಗಳೂ ಆದ

ಶ್ರೀಮಾನ್ ನಾಟಕರತ್ನ ಗುಬ್ಬಿ ಹಂಪಣ್ಣನವರ

ವೀರಣ್ಣನವರಿಗೆ

ಈ ನಾಟಕವನ್ನು
ಆದರಪೂರ್ವಕವಾಗಿ ಸಮರ್ಪಿಸಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾತ್ರಗಳು

ಪುರುಷರು :

ಶ್ರೀ ಕೃಷ್ಣ
ಅರ್ಜುನ
ದುರ್ಯೋಧನ
ದುಶ್ಯಾಸನ
ಶಕುನಿ
ಧೃತರಾಷ್ಟ್ರ
ಭೀಮ
ಕರ್ಣ
ಯುಧಿಷ್ಠಿರ
ಭೀಷ್ಮ
ಅಭಿಮನ್ಯು
ಸೈಂಧವ
ಶಿಖಂಡಿ
ದ್ರೋಣ
ಅಶ್ವತ್ಥಾಮ
ಕೃಪಾಚಾರ್ಯ

ಸ್ತ್ರೀಯರು :

ರುಕ್ಮಿಣಿ
ಗಾಂಧಾರಿ
ಕುಂತಿ
ದ್ರೌಪದಿ
ಉತ್ತರೆ
ಸುಭದ್ರೆ
ಸಖಿಯರು

(ವಿ. ಸೂ : ಬಹುಮಂದಿ ವಾಚಕರ, ಅಭಿನೇತೃಗಳ ಮತ್ತು ಪ್ರಯೋಕ್ತೃಗಳ ಸಲಹೆಯಂತೆ ಈ ಅವತರಣದಲ್ಲಿ ಕೆಲವು ಹೊಸ ಹಾಡುಗಳು ಸೇರಿಸಲ್ಪಟ್ಟಿವೆ.)

Sri Vidyabharathi Book Centre, Sringeri

CC-O. In Public Domain. Digitized by eGangotri

ಕುರುಕ್ಷೇತ್ರ

ಪ್ರಥಮಾಂಕ

ಶ್ರೀಮತ್ ಶೈಲಸುತಾ ಮುಖಾಂಬುಜ ಸುಧಾಪಾನೈಕಶೀಲಂ ಸುರ ।
ಸ್ತೋಮಾರಾಧಿತ ಪಾದಪದ್ಮಯುಗಳಂ, ಸನ್ಮುಕ್ತಿ ಭಕ್ತಿಪ್ರದಂ ॥
ಕಾಮಾರಾತಿ ಭಯಾಪಹ ತ್ರಿಣಯನಂ ಕ್ಷೇಮಂಕರಂ ಶಂಕರಂ ।
ಪ್ರೇಮಂಬೆತ್ತಮಗೀಗೆ ಮಂಗಳ ಮಹಾಸಾಮ್ರಾಜ್ಯಮುಂ ಸಂತತಂ ॥

ದೃಶ್ಯ ೧

(ದ್ವಾರಕೆಯಲ್ಲಿ ಶ್ರೀಕೃಷ್ಣನ ಶಯನಗೃಹ. ಸುತ್ತಲೂ ಸುಸಜ್ಜಿತವಾದ ಆಸನಗಳು. ರುಕ್ಮಿಣಿಯು ಶ್ರೀಕೃಷ್ಣನನ್ನು ಎದುರುಗೊಂಡು ತಲ್ಪದ ಮೇಲೆ ಬಿಜಯಗೈಸುವಳು–ನೃತ್ಯಗೀತೆ)

ರುಕ್ಮಿಣಿ : ವಾಸುದೇವ ದ್ವಾರಕಿಗೆ ಸುಸ್ವಾಗತ. ವಿರಾಟನಗರದಲ್ಲಿ ಪಾಂಡವರ ಸಮಾಚಾರವೇನು ?

ಕೃಷ್ಣ : ಹನ್ನೆರಡು ವರ್ಷ ವನವಾಸವನ್ನೂ, ಒಂದು ವರ್ಷ ಅಜ್ಞಾತವಾಸವನ್ನೂ ಮುಗಿಸಿಕೊಂಡು ಪಾಂಡವರು ಹಸ್ತಿನಾವತಿಗೆ ಹಿಂದಿರುಗಿದರು. ವಿರಾಟನ ಪುತ್ರಿಯಾದ ಉತ್ತರೆಯೊಡನೆ ಅಭಿಮನ್ಯುವಿನ ವಿವಾಹವಾಯಿತು. ತಮಗೆ ಬರಬೇಕಾದ ಅರ್ಧರಾಜ್ಯವನ್ನು ಕೊಡುವಂತೆ ಕೇಳಲು ಯುಧಿಷ್ಠಿರನು ಕುಲಪುರೋಹಿತನಾದ ಧೌಮ್ಯನನ್ನು ಕಳುಹಿಸಿದನು. ಆದರೆ ಧುರ್ಯೋಧನನು ಸಂಧಿಗೆ ಸಮ್ಮತಿಸಲಿಲ್ಲ. ರುಕ್ಮಿಣಿ, ಯುದ್ಧವು ಅನಿವಾರ್ಯವಾಗಿ ಬಂದೊದಗಿದಂತಿದೆ.

ರುಕ್ಮಿಣಿ : ಪುನಃ ಯುದ್ಧ ! ಹಾಗಾದರೆ ನಿನ್ನ ವಿಶ್ರಾಂತಿಯ ದಿನಗಳಿನ್ನು ಕಳೆದುಹೋದವು ! ಗೋಪಾಂಗನೆಯರ ಕಟಾಕ್ಷ ಚಂದ್ರಿಕೆಯಿಂದ ತೊಯ್ದು, ದ್ವಾರಕಿಯ ಕುಸುಮಶಯನದಲ್ಲಿ ಮಲಗಿ ಅರೆಮುಚ್ಚಿದ ಕಣ್ಣುಗಳಿಂದ ಅನಂತ ಭೋಗದ ಹಗಲು ಕನಸನ್ನು ಕಾಣುವುದು ನಿನಗಿನ್ನು ಸಾಧ್ಯವಿಲ್ಲ.

ಕೃಷ್ಣ : ಪ್ರಿಯತಮೆ, ಲೋಕಸೇವೆಯ ಹರಕೆಯನ್ನು ಹೊತ್ತಾಗಲೇ ನನ್ನ ವಿಶ್ರಾಂತಿ ಕೊನೆಗೊಂಡಿತು. ನಾನು ಅದಕ್ಕಾಗಿ ಚಿಂತಿಸುತ್ತಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ರುಕ್ಮಿಣಿ : ಹಾಗಾದರೆ ಈ ಪ್ರಶಾಂತವಾದ ಮುಖಭಂಗಿಯೇಕೆ? ಯುದ್ಧದ ಸಮಾಚಾರವನ್ನು ಕೇಳಿ ವೀರರ ಹೃದಯವು ನರ್ತಿಸುವುದು ಸಹಜ. ಏಳು, ಶಿಶುಪಾಲಾದಿ ದಾನವರನ್ನು ಸಂಹರಿಸಿದ ನಿನ್ನ ಚಕ್ರದ ರಕ್ತತೃಷೆ ಪುನಃ ಜಾಗರಿತವಾಗಲಿ. ಜಗತ್ತಿನ ಯಾವ ಮೂಲೆಯಲ್ಲಿ ಯಾರು ಜನ್ಮಿಸಿರುವರೋ ಅದರ ತೀಕ್ಷ್ಣಧಾರೆಗೆ ಆಹುತಿಯಾಗಲು ?

ಕೃಷ್ಣ : ಯುದ್ಧವೇನೋ ಒದಗಿದಂತಿದೆ. ಆದರೆ ಆ ಯುದ್ಧದಲ್ಲಿ ನಿನ್ನ ಪತಿಯು ನಿರಸ್ತ್ರನು. ರುಕ್ಮಿಣಿ, ಈ ಯುದ್ಧದಲ್ಲಿ ನಾನು ಆಯುಧಗಳನ್ನು ಧರಿಸಿ ಯಾರ ಪಕ್ಷವಾಗಿಯೂ ಕಾದಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವೆನು.

ರುಕ್ಮಿಣಿ : ಈ ಶಯನಾಗಾರದ ಹೊಸತಿಲನ್ನು ದಾಟದಿರಲು ಒಂದು ಅನುಕೂಲ ಕಾರಣ ದೊರೆತಂತಾಯಿತು. ವಾಸುದೇವ, ನಿನ್ನ ರಾಜನೀತಿಯ ಕೌಶಲವನ್ನು ಈಗ ತಿಳಿದೆನು.

ಕೃಷ್ಣ : ಇದು ಪರಿಹಾಸವಲ್ಲ, ರುಕ್ಮಿಣಿ. ಗೋಪಿಕಾಂಗನೆಯರಿಂದ ಪರಿವೇಷ್ಟಿತನಾಗಿ ಮಧುರವೇಣುಗಾನದಿಂದ ವಿಶ್ವಸೃಷ್ಟಿಯನ್ನು ನಲಿಸಿದ ಲಲಿತ ಕೃಷ್ಣನ ಮಧುರ ರೂಪವನ್ನು ಜನರು ನೋಡಿರುವರು. ಕಂಸ ಶಿಶುಪಾಲಾದಿ ದಾನವರನ್ನು ಲೀಲಾಮಾತ್ರದಿಂದ ಸದೆಬಡಿದ ಅವನ ಪ್ರಚಂಡ ಅಟ್ಟಹಾಸದಿಂದ ಜಗತ್ತಿನ ಹೃದಯವು ಕಂಪಿಸುತ್ತಿರುವುದು. ಆದರೆ ಈ ಸಾರಿ ಯುದ್ಧವು ಪ್ರಾರಂಭವಾದಾಗ ಇವೆರಡರಿಂದ ವಿಭಿನ್ನನಾದ ಬೇರೊಬ್ಬ ಕೃಷ್ಣನನ್ನು ಅವರು ನೋಡುವರು......... ನಾನು ನಿರಸ್ತ್ರನು. ಆದರೆ ಕುರುಕ್ಷೇತ್ರದ ಯುದ್ಧಸೂತ್ರವು ನನ್ನ ಕೈಯಲ್ಲಿ. ಚದುರಂಗದ ದಾಳಗಳಂತೆ ಈ ದರ್ಪಾಂಧ ಕ್ಷತ್ರಿಯ ವೀರರನ್ನು ನಾನು ಅಲ್ಲಿಂದಿಲ್ಲಿಗೆ ನಡೆಸುವೆನು. ಶಸ್ತ್ರಾಸ್ತ್ರಗಳ ಸಂಗ್ರಹವೇ ಪೌರುಷದ ಪರಮಾವಧಿಯೆಂದು ಜನರೀಗ ತಿಳಿದಿರುವರು. ನಾನು ಆ ಅಜ್ಞಾನವನ್ನು ಹರಿಸುವೆನು. ಮಾನವನ ಆತ್ಮಶಕ್ತಿಯು ಶತಕೋಟಿ ಶಸ್ತ್ರಗಳನ್ನು ಪರಾಭವಿಸಿ ವಿಜಯದ ಭದ್ರಪೀಠವನ್ನೇರಬಲ್ಲುದೆಂಬುದನ್ನು ತೋರಿಸುವೆನು. ಸತ್ಯದ ಚಿರಪ್ರಕಾಶದಿಂದ ಜಗತ್ತನ್ನು ಬೆಳಗಿಸುವೆನು. ಕುರುಕ್ಷೇತ್ರದ ರಕ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಳಯದಲ್ಲಿಯೂ ನನ್ನ ಕೈಗಳು ಸ್ವಚ್ಛ ಹಿಮದಂತೆ ನಿರ್ಲಿಪ್ತವಾಗಿ ಬೆಳಗುವುದನ್ನು ನೀನು ನೋಡುವೆ.

ರುಕ್ಮಿಣಿ : ಇಂತಹ ಅಪೂರ್ವ ಸಾಧನೆಯ ಉದ್ದೇಶವೇನು, ನಾಥ ?

ಕೃಷ್ಣ : ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ. ರುಕ್ಮಿಣಿ, ಭಾರತ ವರ್ಷದಲ್ಲಿ ಜಗತ್ತಿಗೆ ಆದರ್ಶಭೂತವಾದ ಧರ್ಮರಾಜ್ಯವೊಂದನ್ನು ಸ್ಥಾಪಿಸುವುದೇ ನನ್ನ ಜೀವನದ ಏಕಮಾತ್ರ ಧ್ಯೇಯ, ನನ್ನ ನಿರಂತರ ಪರಿಶ್ರಮದ ಸವಿಗನಸು. ಯೌವನವು ಕಳೆದು ವಾರ್ಧಿಕ್ಯದ ಮೊದಲ ಹಂತದಲ್ಲಿ ಕಾಲಿಟ್ಟಿನಾದರೂ ನನ್ನ ಆ ಕನಸು ಇನ್ನೂ ಕನಸಾಗಿಯೇ ಉಳಿದಿರುವುದು. ಹಿಂಸಾಪ್ರಿಯರಾದ ಅಸಂಖ್ಯ ದಾನವರನ್ನು ಅದಕ್ಕಾಗಿ ಸಂಹರಿಸಿದೆನು. ಆದರೆ ನನ್ನ ಉದ್ದೇಶವು ಸಫಲವಾಗಲಿಲ್ಲ. ಮಾನವನೇ ಮಾನವ ಜಾತಿಯ ಪರಮಶತ್ರುವೆಂದು ಈಗ ತಿಳಿದೆನು. ಮುಂದಿನ ಯುದ್ಧದಲ್ಲಿ ಮಾನವ ಪ್ರಗತಿಗಾಗಿ ಮಾನವನಿಂದಲೇ ಮಾನವನನ್ನು ನಾಶಗೊಳಿಸುವೆನು. ಇನ್ನು ನೀನು ಹೋಗು, ಪ್ರೇಯಸಿ. ನಾನು ಕ್ಷಣಕಾಲ ನಿದ್ರಿಸುವೆನು. ಪುನಃ ಎಚ್ಚರಗೊಳ್ಳುವುದರೊಳಗಾಗಿ ಭಾರತದ ಯುದ್ಧ ಅಥವಾ ಶಾಂತಿಯ ಪ್ರಶ್ನೆಯು ಈ ಮಂದಿರದಲ್ಲಿ ನಿರ್ಣಯಿಸಲ್ಪಡಬೇಕಾಗಿದೆ. (ಮಲಗುವನು)

ರುಕ್ಮಿಣಿ : ಸ್ವಾಮಿಯು ನಿದ್ರಿಸಿದಂತಿದೆ. ನಾನು ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುವೆನು. (ಹೋಗುವಳು)

ಪ್ರವೇಶ : ದುರ್ಯೋಧನ, ಸಾತ್ಯಕಿ

ಸಾತ್ಯಕಿ : ಕುರುರಾಜ, ಶ್ರೀಕೃಷ್ಣನು ನಿದ್ರಿಸುತ್ತಿದ್ದಾನೆ. ಈ ಆಸನದಲ್ಲಿ ಕುಳಿತುಕೊ. ಇನ್ನೇನು ಎಚ್ಚರಗೊಳ್ಳುವನು.

ದುರ್ಯೋಧನ : ಒಂದು ಮಾತಿದೆ, ಸಾತ್ಯಕಿ. ಪಾಂಡವರಿಗೂ ನಮಗೂ ಯುದ್ಧವು ಪ್ರಾರಂಭವಾಗುವುದು. ಆಗ ನೀವು ನಮ್ಮ ಪಕ್ಷವನ್ನು ವಹಿಸಬೇಕು.

ಸಾತ್ಯಕಿ : ಇದಕ್ಕೆ ನಾನೀಗ ಉತ್ತರ ಕೊಡುವುದು ಸಾಧ್ಯವಿಲ್ಲ, ಮಹಾರಾಜ. ನಾವು ಕೃಷ್ಣನ ಅಧೀನರು. ಶ್ರೀಕೃಷ್ಣನು ಎಲ್ಲಿರುವನೋ ನಾವು ಅಲ್ಲಿರುವೆವು.

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ : ಸರಿಯಾದ ಮಾತು. ಹಾಗಾದರೆ ಕೃಷ್ಣನು ನಮ್ಮ ಪಕ್ಷವನ್ನು ವಹಿಸಿದರೆ ಯಾದವ ಸೈನ್ಯವು ನಮಗೆ ಸೇರಿದಂತೆಯೇ.

(ದುರ್ಯೋಧನನು ಕೃಷ್ಣನ ತಲೆಯ ಕಡೆಗೆ ಉಚ್ಚಾಸನದಲ್ಲಿ ಕುಳಿತುಕೊಳ್ಳುವನು. ಸಾತ್ಯಕಿ ಹೋಗುತ್ತಿದ್ದಂತೆ ಅರ್ಜುನನು ಪ್ರವೇಶಿಸುವನು)

ಅರ್ಜುನ : (ಜನಾಂತಿಕ) ಸಾತ್ಯಕಿ, ಎಲ್ಲಿ ನನ್ನ ಪ್ರಾಣಸಖನು ?

ಸಾತ್ಯಕಿ : ಇನ್ನೆಲ್ಲಿಯ ಪ್ರಾಣಸಖ ? ನಿನ್ನ ವಿಳಂಬದಿಂದ ಎಲ್ಲವೂ ಹಾಳಾಯಿತು.

ಅರ್ಜುನ : ಏಕೆ ? ಏನಾಯಿತು ಸಾತ್ಯಕಿ ?

ಸಾತ್ಯಕಿ : ನನಗದನ್ನು ಹೇಳುವ ಬಾಯಿಲ್ಲ. ನೀನೇ ನೋಡು.

ಅರ್ಜುನ : (ನೋಡಿ) ದುರ್ಯೋಧನ! ನನಗಿಂತ ಮೊದಲೇ ದ್ವಾರಕಿಯಲ್ಲಿ !

ಸಾತ್ಯಕಿ : ನಿಮ್ಮ ಆಲಸ್ಯಪ್ರವೃತ್ತಿಯ ಫಲವಾಗಿ ದುರ್ಯೋಧನನಿಂದು ಶ್ರೀಕೃಷ್ಣನ ಸಹಾಯ ಪಡೆಯುವನು. ಇದೆಂತಹ ವಿಡಂಬನೆ, ಪಾರ್ಥ.

ಅರ್ಜುನ : ಇದು ವಿಡಂಬನೆಯಲ್ಲ ಸಾತ್ಯಕಿ, ಪಾಂಡವರ ದುರ್ದೈವ ! ಅಥವಾ ನಾನು ಮರುಗುವುದಾದರೂ ಏಕೆ ? ಕೌರವರು ನಮ್ಮ ಆತ್ಮೀಯರಲ್ಲವೇ ? ವಾಸುದೇವನ ಕೃಪಾದೃಷ್ಟಿಯು ಅವರ ಮೇಲೆ ಬಿದ್ದರೆ ಅದು ನಮಗೆ ಆನಂದದ ವಿಷಯ. ಯುಧಿಷ್ಠಿರನು ತನ್ನ ನಾಲ್ವರು ಸಹೋದರರು ಮತ್ತು ಪಾಂಚಾಲಿಯ ಸಂಗಡ ಮತ್ತೊಂದು ಸಾರಿ ಚಿರ ದಿನದ ಸಲುವಾಗಿ ವನವಾಸಕ್ಕೆ ತೆರಳುವನು.

(ದುರ್ಯೋಧನನಿಗೆ ಕಾಣಿಸಿಕೊಳ್ಳುವನು)

ದುರ್ಯೋಧನ : ಅರ್ಜುನ, ನನ್ನನ್ನು ನೋಡಿ ಅಸಮಾಧಾನವೇ ? ನೀನು ದ್ವಾರಕಿಗೆ ಪಯಣಮಾಡಿದೆಯೆಂದು ಕೇಳಿದ ಬಳಿಕ ನಾನು ಹೊರಟದ್ದು. ಆದರೆ ನನ್ನ ಸುದೈವದಿಂದ ಮೊದಲೇ ಇಲ್ಲಿಗೆ ಬಂದೆ.

ಅರ್ಜುನ : ಗುರುಸನ್ನಿಧಿಗೆ, ದೇವಮಂದಿರಕ್ಕೆ, ಮೊದಲು ಹೋದರೇನು ? ಕೊನೆಗೆ ಹೋದರೇನು ? ಅವರವರ ಭಾವನಾನುರೂಪವಾದ ಫಲವು ಅವರಿಗೆ ದೊರಕುವುದು.

ದುರ್ಯೋಧನ : ಹಾಗೆಂದು ಸುಮ್ಮನೆ ಕುಳಿತರೆ ಕಾರ್ಯವಾಗುವುದೇ, ಧನಂಜಯ ? ಈ ಸಮಯದಲ್ಲಿ ನಾಲ್ಕಾರು ಕಡೆ ತಿರುಗಿದರೆ, ಹಲವು

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದಿ ರಾಜರ ಸಹಾಯವು ದೊರಕುವುದು.

ಅರ್ಜುನ : ನಾನು ದ್ವಾರಕಿಗೆ ಬಂದಿದ್ದು ಈ ಮಹಿಮಾಮೂರ್ತಿಯ ಪದತಲದಲ್ಲಿ ಕುಳಿತು ನಾಲ್ಕು ಮಾತುಗಳನ್ನು ಕೇಳಿ ಹೋಗಬೇಕೆಂಬ ಇಚ್ಛೆಯಿಂದ. (ಕಾಲಿನ ಕಡೆಯ ಆಸನದಲ್ಲಿ ಕುಳಿತುಕೊಳ್ಳುವನು)

ದುರ್ಯೋಧನ : (ನಗುತ್ತಾ) ನಿನಗಿಷ್ಟವಿದ್ದ ಸ್ಥಳದಲ್ಲಿ ಕುಳಿತುಕೊ. ಆದರೆ ಈ ಸಾರಿ ಕೃಷ್ಣನು ನನ್ನ ಕೈಗೆ ಸಿಕ್ಕಿಬಿದ್ದನು, ಅರ್ಜುನ.

ಅರ್ಜುನ : ಒಂದು ವೇಳೆ ಸಿಕ್ಕಿಬಿದ್ದರೂ ಸಂತೋಷವೇ. ಕುರು-ಪಾಂಡವರ ಧಮನಿಗಳಲ್ಲಿ ಒಂದೇ ವಂಶದ ಪವಿತ್ರ ರಕ್ತವು ಹರಿಯುವುದೆಂಬುದನ್ನು ನಾನು ಮರೆತಿಲ್ಲ, ಸುಯೋಧನ. (ಕೃಷ್ಣನನ್ನು ಸಂಬೋಧಿಸುತ್ತಾ) ಹೇ! ಜನಾರ್ಧನ, ಜಾಗರಿತನಾಗು. ಜಗತ್ತಿನ ಜೀವಕೋಟಿಯನ್ನು ಅಸತ್ಯದಿಂದ ಸತ್ಯದ ಸೀಮೆಗೆ ಸೇರಿಸು. ಅಂಧಕಾರದಿಂದ ಬೆಳಕಿಗೆ ಕರೆದುಕೊಂಡು ಹೋಗು. ಮೃತ್ಯುವನ್ನು ಹರಿಸಿ ಅಮೃತತ್ವವನ್ನು ಕೊಡು. ಏಳು, ಚಕ್ರಪಾಣಿ, ಮೂರುಲೋಕದ ಮಂಗಳವು ನಿನ್ನನ್ನು ಸೇರಿದೆ. (ಕೃಷ್ಣನು ಎಚ್ಚರಗೊಳ್ಳುವನು)

ಕೃಷ್ಣ : ಯಾರು? ಧನಂಜಯ? ಬಂದು ಎಷ್ಟು ಹೊತ್ತಾಯಿತು? ಎಲ್ಲರೂ ಕುಶಲವೇ? ಛೀ! ಚರಣದಡಿಯಲ್ಲೇಕೆ ಕುಳಿತುಕೊಂಡೆ? ಆ ಪಾರ್ಶ್ವದಲ್ಲಿ ಪೀಠಗಳಿರಲಿಲ್ಲವೇ?

ದುರ್ಯೋಧನ : ವಾಸುದೇವ!

ಕೃಷ್ಣ : ಯಾರು? ಕುರುರಾಜ, ಸೌಖ್ಯವೇ? ಸಮಾಚಾರವೇನು? ನೀವಿಬ್ಬರೂ ಏತಕ್ಕಾಗಿ ಇಲ್ಲಿಗೆ ಬಂದಿರಿ?

ದುರ್ಯೋಧನ : ವಾಸುದೇವ, ಪಾಂಡವರಿಗೂ ನಮಗೂ ಯುದ್ಧವು ಸಂಘಟಿಸಿರುವುದು. ಅದರಲ್ಲಿ ನೀನು ನಮ್ಮ ಪಕ್ಷವನ್ನು ವಹಿಸುವಂತೆ ಪ್ರಾರ್ಥಿಸಲು ನಾನಿಲ್ಲಿಗೆ ಬಂದೆನು.

ಕೃಷ್ಣ : (ಚಿಂತಿಸಿ) ಅರ್ಜುನ, ನೀನೂ ಕೂಡ ಯಾದವರ ಸಹಾಯವನ್ನು ಬೇಡುವ ಉದ್ದೇಶದಿಂದ ಬಂದೆಯೆಂದು ತೋರುವುದು. (ಅರ್ಜುನನು ಸಮ್ಮತಿಯನ್ನು ಸೂಚಿಸುವನು) ಈ ಉಭಯಸಂಕಟದಲ್ಲಿ ನಾನೇನು ಮಾಡಲಿ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜುನ : ಜನಾರ್ಧನ, ನಿನ್ನ ಕೃಪಾದೃಷ್ಟಿಯು ಮೊದಲು ನನ್ನ ಮೇಲೆ ಬಿದ್ದಿತು. ಆದುದರಿಂದ ನಮಗೆ ನೀನು ಸಹಾಯ ಮಾಡಲೇಬೇಕು.

ದುರ್ಯೋಧನ : ನಮ್ಮಿಬ್ಬರಿಗೂ ನೀನು ಸಮಾನ ಬಂಧು. ಆದರೆ ಯಾರು ನಿನ್ನ ಬಳಿಗೆ ಮೊದಲು ಬಂದರೋ ಅವರ ಪಕ್ಷವನ್ನು ವಹಿಸುವುದು ವೀರೋಚಿತವಾದ ಧರ್ಮ. ನೀನು ವೀರನು, ನ್ಯಾಯ ಶೀಲನು. ಮೊದಲು ಇಲ್ಲಿಗೆ ಬಂದ ನನ್ನ ಪಕ್ಷವನ್ನು ವಹಿಸಿದರೆ ಧರ್ಮವನ್ನು ಪಾಲಿಸಿದಂತಾಗುವುದು.

ಕೃಷ್ಣ : ದುರ್ಯೋಧನ ನೀನು ಮೊದಲು ಬಂದೆ ಎಂಬ ವಿಚಾರದಲ್ಲಿ ನನಗೆ ಸ್ವಲ್ಪವೂ ಸಂದೇಹವಿಲ್ಲ. ಆದರೆ ನಾನು ನಿದ್ರೆಯಿಂದೆಚ್ಚರಗೊಂಡಾಗ ಮೊದಲು ಪಾರ್ಥನನ್ನು ಕಂಡೆ. ಆದುದರಿಂದ ನಿಮ್ಮಿಬ್ಬರಿಗೂ ಸಹಾಯ ಮಾಡುವೆನು. ಅರ್ಜುನನು ನಿನಗಿಂತ ಚಿಕ್ಕವನು. ತನಗೆ ಬೇಕಾದು ದನ್ನು ಮೊದಲು ಕೇಳುವ ಅಧಿಕಾರವು ಅವನಿಗಿದೆ. ಈಗ ನೋಡಿರಿ, ಅಪ್ರತಿಮ ವೀರಭಟರಿಂದ ಕೂಡಿದ ಅಕ್ಷೌಹಿಣೀ ಯಾದವ ಸೈನ್ಯ ಒಂದು ಕಡೆ; ಯುದ್ಧವಿಮುಖನಾದ ನಿರಸ್ತ್ರನಾದ ನಾನು ಮತ್ತೊಂದು ಕಡೆ. ಇವೆರಡರಲ್ಲಿ ನಿಮಗಾವುದು ಬೇಕು ?

ಅರ್ಜುನ : ಯದುಕುಲ ಚೂಡಾಮಣಿ. ನಾನು ನಿನ್ನನ್ನಪೇಕ್ಷಿಸುವೆನು.

ದುರ್ಯೋಧನ : ನನಗೆ ನಿನ್ನ ಒಂದು ಅಕ್ಷೌಹಿಣೀ ಸೈನ್ಯವು ಬೇಕು.

ಕೃಷ್ಣ : ನಿಮ್ಮಿಷ್ಟದಂತಾಗಲಿ, ನಡೆ, ಕೌರವೇಶ್ವರ. ನಾನು ಸೈನ್ಯಕ್ಕೆ ಆಜ್ಞೆ ಮಾಡುವೆನು. (ದುರ್ಯೋಧನನೊಡನೆ ಹೋಗುವನು)

ಅರ್ಜುನ : (ವಿತರ್ಕಿಸುತ್ತಾ ಸ್ವಗತ) ಈಗ ನನ್ನ ಪ್ರಯತ್ನವು ಸಾರ್ಥಕ ವಾಯಿತು. ವಿಜಯಲಕ್ಷ್ಮಿಯು ಇನ್ನು ನಮ್ಮ ಕೈಸೇರಿದಂತೆಯೇ. ಆರ್ಯಾವರ್ತದ ಯೋಗಿಶ್ರೇಷ್ಠನೂ, ನನ್ನ ಪ್ರಾಣಸಮಾನನಾದ ಬಂಧುವೂ ಆದ ಭಗವಾನ್ ವಾಸುದೇವನು ನನ್ನ ಸಾರಥಿಯಾಗಲು ಸಮ್ಮತಿಸಿದನು. ಯಾದವಾಗ್ರಣಿಯು ಪಾಂಡವರ ಪಕ್ಷವನ್ನು ವಹಿಸಿ ದನು. ನನ್ನ ದ್ವಾರಕಿಯ ಯಾತ್ರೆಯು ಸಫಲವಾಯಿತು.

ಕೃಷ್ಣ : (ಪ್ರವೇಶಿಸಿ) ಅರ್ಜುನ, ಎಂತಹ ಅಕಾರ್ಯವನ್ನು ಮಾಡಿದೆ ? ಸ್ವಹಸ್ತದಿಂದ ಪರಾಜಯಕ್ಕೆ ಆಹ್ವಾನವನ್ನು ಕೊಟ್ಟೆಯಲ್ಲ !

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜುನ : ನಾನು ಜಯುವನ್ನು ಬಯಸಿ ಇಲ್ಲಿಗೆ ಬಂದವನಲ್ಲ. ನನಗೆ ಬೇಕಾಗಿದ್ದುದು ನೀನು. ನಿನ್ನನ್ನು ಹೊಂದಿದೆನು ಕೃಷ್ಣ. ಯುದ್ಧದಲ್ಲಿ ನೀನು ನನ್ನ ಸಾರಥಿಯಾಗು. ನಿರ್ಗತಿಕರ ಗತಿಯೂ, ಪಥಭ್ರಷ್ಟರಿಗೆ ಮಾರ್ಗದರ್ಶಕನೂ ಆದ ನೀನು ನನ್ನ ರಥದ ಮಾರ್ಗವನ್ನು ನಿಯುಮಿಸು. ನನಗೊಂದು ಗತಿಯನ್ನು ತೋರಿಸು. ನಿನ್ನ ವರದ ಹಸ್ತವು ನನ್ನ ರಥಾಶ್ವಗಳ ರಜ್ಜುಗಳನ್ನು ಹಿಡಿಯಲಿ. ಆಗ ನಾನು ನೋಡುವೆನು, ಶತ್ರುಗಳು ನೋಡುವರು, ಜಗತ್ತು ನೋಡುವುದು— ಸೃಷ್ಟಿಕರ್ತನ ಕೈಯಲ್ಲಿ ಶಾಸನದಂಡವು ನಲಿಯುವುದನ್ನು; ನಿಯತಿಯ ವಕ್ಷದಲ್ಲಿ ಮಾನವ ಜೀವನದ ವಿಶ್ರಾಂತಿಯನ್ನು; ಧರ್ಮದ ಚಿರಪಟ್ಟದಲ್ಲಿ ಪುಣ್ಯವು ಪ್ರತಿಷ್ಠಿತವಾಗುವುದನ್ನು. ಈಗೆನಗೆ ಅನುಮತಿಯನ್ನು ಕೊಡು, ದೇವ. ಪುನಃ ನೋಡುವೆನು (ಹೋಗುವನು)

(ರುಕ್ಮಿಣಿಯು ಪ್ರವೇಶಿಸುವಳು)

ರುಕ್ಮಿಣಿ : ಹಾಗಾದರೆ ಯುದ್ಧ ನಿಶ್ಚಿತವಾಯಿತು! ನಾನು ಮೊದಲೇ ಹೇಳಲಿಲ್ಲವೇ ? ಯುದ್ಧವೆಂದರೆ ನಿಮ್ಮ ಹೃದಯ ನಲಿಯುವುದೆಂದು.

ಕೃಷ್ಣ : ಉಪಾಯವಿಲ್ಲ. ಪ್ರಿಯತಮೆ, ಯುದ್ಧವು ಇಂದು ಅನಿವಾರ್ಯ. (ಉತ್ತೇಜಿತ ಕಂಠದಿಂದ) ಆದರೆ ಇದೆಂತಹ ಯುದ್ಧ! ವಿಶ್ವಸೃಷ್ಟಿಯಲ್ಲಿ ಈವರೆಗೆ ಎಲ್ಲಿಯೂ ಆಗದ ಅಚಿಂತ್ಯಹತ್ಯಾಕಾಂಡ! ಒಂದು ಕಡೆ ಕೌರವರ ಹನ್ನೊಂದು ಅಕ್ಷೌಹಿಣೀ ಸೈನ್ಯದಳ ; ಭೀಷ್ಮ, ದ್ರೋಣ, ಕರ್ಣ, ಕೃಪಾ, ಅಶ್ವತ್ಥಾಮ, ಕೃತವರ್ಮ ಮುಂತಾದ ಮಹಾರಥಿಕರು. ಮತ್ತೊಂದು ಕಡೆ ಏಳು ಅಕ್ಷೌಹಿಣೀ ಪಾಂಡವ ಸೈನ್ಯ. ಯುದ್ಧವು ಮುಗಿದ ಮೇಲೆ ಈ ಮಾನವ ರಾಶಿಯಲ್ಲೆಷ್ಟು ಜನರು ಜೀವಂತರಾಗಿ ಉಳಿಯುವರು ? ಯುದ್ಧ ! ಯುದ್ಧ ! ಪ್ರಪಂಚದ ಅನಂತಪ್ರಳಯ ! ಅಸೀಮ ಧ್ವಂಸ !!

ರುಕ್ಮಿಣಿ : ಪ್ರಭು, ಮಾನವಲೋಕವನ್ನು ಈ ಪ್ರಳಯಾವರ್ತದಿಂದ ರಕ್ಷಿಸು. ಅಧರ್ಮದ ಆಕ್ರಮಣದಿಂದ ಧರ್ಮವು ರೂಪುಗೆಡಲೇಕೆ ? ಶಾಂತಿ ಸಂಧಾನಕ್ಕೆ ಪ್ರಯತ್ನಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣ : ಶಾಂತಿಯಿಂದ ಸೃಷ್ಟಿಯ ವಿಕಾಸವಾಗುವುದಿಲ್ಲ, ಪ್ರೇಯಸಿ. ಪುರಾತನದ ಅಳಿವೇ ನೂತನದ ಆವಿಷ್ಕಾರ. ಯುದ್ಧವಿಂದು ಅವಶ್ಯಕ; ಆದರಾ ಯುದ್ಧದಲ್ಲಿ ನಾನೊಂದು ನೂತನ ಜಗತ್ತನ್ನು ನಿರ್ಮಿಸುವೆನು. ನನ್ನ ಸಮರಗೀತೆಯು ಮಾನವರಿಗೆ ಧರ್ಮದ ಪರಾಕಾಷ್ಠೆಯನ್ನು ಬೋಧಿಸುವುದು. ವೀರರ ರಕ್ತದಿಂದ ಪೃಥ್ವಿಯ ಕಲುಷವನ್ನು ತೊಳೆಯುವೆನು. ಕುರುಕ್ಷೇತ್ರದ ಧೂಳಿಯ ಒಂದೊಂದು ಕಣವನ್ನೂ ರಕ್ತರಸದಿಂದ ತೋಯಿಸಿ, ವೀರದರ್ಪದಿಂದ ಸುಸಜ್ಜಿತವಾಗಿ ಮಾಡಿ, ಪುಣ್ಯಬೀಜವನ್ನು ನೆಡುವೆನು. ಆ ಬೀಜವು ಅಂಕುರಿಸಿ ಮರವಾಗಿ ದರ್ಶನ, ವಿಜ್ಞಾನ, ಧರ್ಮ, ರಾಜನೀತಿ ಮುಂತಾದ ಅನರ್ಘ್ಯ ಫಲಪುಷ್ಪಗಳನ್ನು ಜಗತ್ತಿಗೆ ಕೊಡುವುದು.

ರುಕ್ಮಿಣಿ : ನಾಥ, ನಿನ್ನ ಸ್ಪರ್ಶವು ಮೃತಸಂಜೀವಿನಿ! ದೃಷ್ಟಿ ಮಾತ್ರದಿಂದ ಜಡಜಗತ್ತನ್ನು ಜೀವಂತವಾಗಿ ಮಾಡಬಲ್ಲೆ ನೀನು. ಅದನ್ನುಳಿದು ಈ ರಕ್ತಪಾತದ ಅವಶ್ಯಕತೆಯೇಕೆ ?

ಕೃಷ್ಣ : ಕಾಳಸರ್ಪ ಕಚ್ಚಿದವರನ್ನು ಮೃತ್ಯುವಿನಿಂದ ರಕ್ಷಿಸಬೇಕಾದರೆ, ವಿಷಸ್ಪರ್ಶವಾದ ಅವಯವಗಳನ್ನು ಛೇದಿಸುವ ಹೊರತಾಗಿ ಮತ್ತಾವ ಉಪಾಯವೂ ಇಲ್ಲ. ಆರ್ಯಾವರ್ತಕ್ಕೀಗ ಇಂತಹ ಅವಸ್ಥೆಯುಂಟಾಗಿದೆ. ಅಭಿಮಾನಸುರೆಯಿಂದ ಪ್ರಮತ್ತರಾದ ಕ್ಷತ್ರಿಯರ ನರನಾಡಿಗಳಲ್ಲಿ ರಕ್ತಾಧಿಕ್ಯವು ಹೆಚ್ಚಿ ಅಧರ್ಮ ರೋಗದ ಅಂಕುರವು ಕಾಣಿಸಿಕೊಂಡಿದೆ. ರಕ್ತಕ್ಷಯದಿಂದ ಅದನ್ನು ಸಂಪೂರ್ಣವಾಗಿ ನಾಶಮಾಡಿದ ಹೊರತು ಧರ್ಮ ಸಂಸ್ಥಾಪನೆಯಾಗುವುದಿಲ್ಲ.

ರುಕ್ಮಿಣಿ : ಇಷ್ಟೊಂದು ಜನರ ಮರಣದಿಂದ ಧರ್ಮ ಸಂಸ್ಥಾಪನೆಯಾಗುವುದಾದರೆ ಅಂತಹ ಧರ್ಮಕ್ಕೆ ಧಿಕ್ಕಾರವಿರಲಿ. ಈ ಯುದ್ಧವನ್ನು ನಿಲ್ಲಿಸಲು ನೀನು ಮತ್ತೊಂದು ಸಾರಿ ಪ್ರಯತ್ನಿಸು. ಈ ಘೋರ ಹತ್ಯಾಕಾಂಡ ನಿಲ್ಲಲಿ.

ಕೃಷ್ಣ : ನಿನ್ನ ಮಾತಿನಂತೆ ಮತ್ತೊಂದು ಸಾರಿ ಶಾಂತಿಗೆ ಪ್ರಯತ್ನಿಸುವೆನು. ಅದಕ್ಕಾಗಿ ಈ ದಿನವೇ ಹಸ್ತಿನಾವತಿಗೆ ತೆರಳುವೆನು. ಆದರೆ ನನ್ನೀ ಕೊನೆಯ ಪ್ರಯತ್ನವೂ ಕೂಡ ವಿಫಲವಾಗುವುದು. (ಹೋಗುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ೨

(ಹಸ್ತಿನಾವತಿಯ ರಾಜಪ್ರಾಸಾದ. ಶಕುನಿಯು ಚಿಂತಿಸುತ್ತಾ ಪ್ರವೇಶಿಸುವನು)

ಶಕುನಿ : ಮನಸ್ಸಿನ ದುಸ್ಸಹ ಚಿಂತಾಗ್ನಿಯಿಂದ ಶರೀರವು ದಹಿಸುತ್ತಿರುವುದು. ದುರ್ಯೋಧನ, ನಿನ್ನ ಕತ್ತಲೆಯ ಕಾರಾಗಾರವನ್ನು ನಾನಿನ್ನೂ ಮರೆತಿಲ್ಲ. ನನ್ನ ನೂರು ಜನ ಸಹೋದರರನ್ನು ಬಂಧನದಲ್ಲಿಟ್ಟು ದಿನಕ್ಕೊಂದು ಹಿಡಿ ಅನ್ನ, ಒಂದು ಒಳಲೆ ನೀರನ್ನು ಕೊಡುತ್ತಿದ್ದೆ. ನನ್ನ ಸಹೋದರರು ಆ ಹಿಡಿ ಕೂಳನ್ನು ನನಗೆ ಕೊಟ್ಟು ತಾವೆಲ್ಲರೂ ಉಪವಾಸ ಮಾಡಿ ಒಬ್ಬೊಬ್ಬರಾಗಿ ಸತ್ತರು. ಮೃತ್ಯುವಿನ ಕೊನೆಯ ಉಛ್ವಾಸದಿಂದ ನಿನ್ನನ್ನು ಶಪಿಸುತ್ತಾ, ಆ ಘೋರ ಹಿಂಸೆಯ ಪ್ರತಿಶೋಧದ ಭಾರವನ್ನು ನನಗೊಪ್ಪಿಸಿ ಸತ್ತರು. ಅವರ ಮೃತ ದೇಹಗಳ ಸ್ಥಿರಶೂನ್ಯದೃಷ್ಟಿ ಈಗಲೂ ಸಿಡಿಲಿನಂತೆ ನನ್ನ ಹೃದಯವನ್ನು ಭೇದಿಸುತ್ತಿರುವುದು. ಕುರುರಕ್ತದ ಅಜಸ್ರಧಾರೆಯಿಂದ ಪುನಃ ಅವರನ್ನು ಉಜ್ಜೀವನಗೊಳಿಸುವೆನು. ಅಳಬೇಡಿರಿ, ನನ್ನ ಹತಭಾಗ್ಯ ಸಹೋದರರೆ! ದುರ್ಯೋಧನನ ತೊಂಭತ್ತೊಂಭತ್ತು ಮಂದಿ ತಮ್ಮಂದಿರ ಛಿನ್ನರುಂಡಗಳಿಂದ ನರಕದಲ್ಲಿ ನಿಮ್ಮ ನೀರಾಜನವನ್ನು ಮಾಡಿಸುವೆನು. ಕೌರವೇಶ್ವರ, ನರಕದ ಭಯಂಕರ ಹಿಂಸೆಗಿಂತಲೂ ಕುರುಕ್ಷೇತ್ರದಲ್ಲಿ ಶಕುನಿಯಿಂದ ನಿನಗಾಗುವ ಹಿಂಸೆಯು ಭಯಾನಕವೆನಿಸುವುದು. ತಾಯಿಯ ಕಣ್ಣೀರಿನಿಂದ ತೊಯ್ದು, ಗುರುಹಿರಿಯರ ರಕ್ತದಿಂದ ಕಳಂಕಿತನಾಗಿ, ಪುತ್ರಶೋಕದಿಂದ ದಹಿಸುತ್ತಾ, ನಿನಗಾಗಿ ಒಂದು ನಿಟ್ಟುಸಿರನ್ನೂ ಬಿಡುವವರಿಲ್ಲದೆ ನರಕದ ಮಾರ್ಗವನ್ನು ಹಿಡಿಯುವೆ.

(ದುರ್ಯೋಧನನು ಪ್ರವೇಶಿಸುವನು)

ದುರ್ಯೋಧನ : ಹೇಳು, ನಾನು ಮಾಡಿದುದು ಯುಕ್ತವೇ ಶಕುನಿ ?

ಶಕುನಿ : ಚಿಂತೆಯೇಕೆ, ಕುರುರಾಜ ? ಜಯದ್ರಥ ಕೃತವರ್ಮಾದಿಗಳು ನಿನ್ನ ಸಹಾಯಕ್ಕಾಗಿ ಸೈನ್ಯಸಮೇತರಾಗಿ ಹೊರಟರೆಂದು ದೂತನು ಈ ದಿನ ಸಮಾಚಾರವನ್ನು ತಂದನಲ್ಲವೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ : ನಾನು ಅದಕ್ಕಾಗಿ ಚಿಂತಿಸುತ್ತಿಲ್ಲ, ಮಾವ. ದುರ್ಯೋಧನನು ಅಸಹಾಯ ವೀರನು. ತನ್ನೆರಡು ತೋಳುಗಳಿಂದ ಪಾಂಡವರ ಸಮಸ್ತ ಸೈನ್ಯವನ್ನೂ ಎದುರಿಸಬಲ್ಲನು. ಆದರೆ ಈ ಜ್ಞಾತಿ ಹಿಂಸೆ, ಸ್ವಯೂಥ ಕಲಹ—ಇದು ಉಚಿತವೇ ಶಕುನಿ ? ಈ ದಿನ ನಾನು ದ್ವಾರಕಿಗೆ ಹೋದಾಗ ಯುದ್ಧವು ಅಧರ್ಮವೆಂದು ಕೃಷ್ಣನು ಎಷ್ಟೋ ವಿಧವಾಗಿ ಹೇಳಿದನು. ಅಭಿಮಾನದಿಂದ ನಾನವನ ಮಾತುಗಳನ್ನು ನಿರಾಕರಿಸಿದೆ.

ಶಕುನಿ : ಕೃಷ್ಣನು ಕ್ಷತ್ರಿಯ ಜಾತಿಯ ಪರಮವೈರಿ. ಅವನ ಮಾತು ಪರಿಗ್ರಾಹ್ಯವಲ್ಲ. (ದುಶ್ಯಾಸನನು ಅವಸರದಿಂದ ಬರುವನು)

ದುಶ್ಯಾಸನ : ಅಣ್ಣ, ಕೃಷ್ಣನು ಹಸ್ತಿನಾವತಿಯಲ್ಲಿ ಬಂದಿರುವನು. ನಾಳಿನ ಪ್ರಾತಃಕಾಲ ರಾಜಸಭೆಯಲ್ಲಿ ಶಾಂತಿಸಂಧಾನ ನಡೆಸುವನಂತೆ.

ದುರ್ಯೋಧನ : ಕೃಷ್ಣನು ಹಸ್ತಿನಾವತಿಯಲ್ಲಿ !........ಹೋಗು ; ಅತಿಥಿ ಸತ್ಕಾರಕ್ಕೆ ಸಿದ್ಧನಾಗು.

ದುಶ್ಯಾಸನ : ಆ ದರ್ಪಿತ ಗೋಪಾಲಕನು ನಮ್ಮ ಸತ್ಕಾರವನ್ನು ನಿರೀಕ್ಷಿಸುವುದಿಲ್ಲ, ಅಣ್ಣ. ಆಗಲೇ ರಾಜಪ್ರಾಸಾದವನ್ನು ದಾಟಿ ಆ ದರಿದ್ರ ವಿದುರನ ಮನೆಯನ್ನಾಶ್ರಯಿಸಿರುವನು. ಎಷ್ಟೊಂದು ಅವಹೇಳನ !

ದುರ್ಯೋಧನ : ಅವಹೇಳನವಲ್ಲ, ಪ್ರಿಯ ಸಹೋದರ. ಯದುಪತಿಯು ಭಕ್ತಪರಾಧೀನನು. ವಿದುರನಂಥ ಭಕ್ತರು ಆತನಿಗೆ ಮತ್ತಾರಿರುವರು ? ಈ ದಿನ ಭಕ್ತನ ಸತ್ಕಾರವನ್ನು ಸ್ವೀಕರಿಸಿ ನಾಳೆ ನಮ್ಮ ಮಂದಿರಕ್ಕೆ ಬರುವನು. ನೀನು ಚಿಂತಿಸಬೇಡ ಹೋಗು ತಮ್ಮ.

(ದುಶ್ಯಾಸನನು ಹೋಗುವನು)

ಅಭಿಮಾನಶಾಲಿಯಾದ ನನ್ನ ಸಹೋದರ, ನಿನ್ನನ್ನು ಶಾಸನ ಮಾಡುವುದು ನನಗೂ ಒಂದೊಂದು ಸಾರಿ ದುಸ್ಸಹವೆನಿಸುವುದು. ಈಗೇನು ಮಾಡುವುದು ಶಕುನಿ ? ಕೃಷ್ಣನ ಸಂಧಾನಕ್ಕೆ ಸಮ್ಮತಿಸುವುದೇ ?

ಶಕುನಿ : ಕೃಷ್ಣನು ಶಾಂತಿಗೆ ಇಲ್ಲಿಗೆ ಬಂದವನಲ್ಲ. ಹಾಗಿದ್ದರೆ ಕೌರವೇಶ್ವರನ ಸಾರ್ವಭೌಮ ವೈಭವವನ್ನು ತೃಣೀಕರಿಸಿ ಆ ದಾಸೀಪುತ್ರನ ಮುರುಕು ಜೋಪಡಿಯನ್ನು ಆಶ್ರಯಿಸುತ್ತಿದ್ದನೆ? ಪ್ರಾರಂಭದಲ್ಲೇ ಸಹಿಸಲಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ದಂಥ ಅಪಮಾನ ! ಭಕ್ತಿವೈರಾಗ್ಯಗಳ ಸೇವದಿಂದ ವಂಚಿತನಾಗಿ ನೀನು ಈ ಅಪಮಾನವನ್ನು ಹೇಗೆ ಸಹಿಸುವೆ ?

ದುರ್ಯೋಧನ : ಕೃಷ್ಣನಲ್ಲಿ ನಿನಗಿಷ್ಟೊಂದು ದ್ವೇಷವೇಕೆ, ಶಕುನಿ ?

ಶಕುನಿ : ಅವನು ಕ್ಷತ್ರಿಯ ಕುಲದ ಕಲಂಕಸ್ವರೂಪನು. ಭಾರತವರ್ಷದಲ್ಲಿ ಕ್ಷತ್ರಿಯರನ್ನು ನಿರ್ಮೂಲಮಾಡಲು ಅವನು ಅವತರಿಸಿರುವುದು. ಅವನ ವೈರಾಗ್ಯ ಪ್ರದರ್ಶನಕ್ಕೆ ಮರುಳಾಗಿ ಯಾರು ಅವನನ್ನು ಭಗವಂತನ ಅವತಾರವೆಂದು ಪೂಜಿಸುವರೋ ಅವರನ್ನೇ ಧ್ವಂಸ ಮಾಡುವನು. ಶಿಶುಪಾಲ, ಜರಾಸಂಧ, ಇವರು ನಿನಗೆಂತಹ ಮಿತ್ರರಾಗಿದ್ದರು ; ಕಾರಣ ವಿಲ್ಲದೆ ಅವರನ್ನು ಸಂಹರಿಸಿದನು. ಕಂಸನನ್ನು ವಧಿಸಿ ಅರುಳುಮರುಳಿನ ಮುದುಕನಾದ ಉಗ್ರಸೇನನನ್ನು ಹೆಸರಿಗೆ ಸಿಂಹಾಸನದಲ್ಲಿ ಕುಳ್ಳಿರಿಸಿರು ವನು. ಸಹೋದರನನ್ನು ಸುರಾಪಾನದಿಂದ ಪ್ರಮತ್ತನನ್ನಾಗಿ ಮಾಡಿ, ರಾಜ್ಯಲಕ್ಷ್ಮಿಯನ್ನು ತಾನು ವಶಪಡಿಸಿಕೊಂಡಿರುವನು. ಇಂಥವನಿಗೆ ಮನ್ನಣೆಯೇ ?

ದುರ್ಯೋಧನ : ಹಾಗಾದರೆ ನನ್ನನ್ನು ದ್ವಾರಕಿಗೆ ಕಳುಹಿಸಿದೆಯೇಕೆ, ಶಕುನಿ ? ಆ ನಂದಗೋಪನ ಮನೆಯ ಬಾಗಿಲಲ್ಲಿ ಸಹಾಯವನ್ನು ಬೇಡುವುದು ದುರ್ಯೋಧನನಿಗೆ ಉಚಿತವಾದ ಕಾರ್ಯವೇ ?

ಶಕುನಿ : ಅದಕ್ಕೊಂದು ಉದ್ದೇಶವಿತ್ತು, ದುರ್ಯೋಧನ. ಕಾಳಸರ್ಪದ ವಿಷದ ಹಲ್ಲನ್ನು ಕಿತ್ತು, ಬಳಿಕ ಅದರೊಡನೆ ಆಡಬಹುದಲ್ಲವೆ ? ಕೃಷ್ಣನಿಗಿಂತ ಅವನ ವಿಜಯೋನ್ಮತ್ತ ಯಾದವ ಸೈನ್ಯವು ನಿನಗೆ ಹೆಚ್ಚು ಅವಶ್ಯಕವಾಗಿತ್ತು. ಯದುಪತಿಯನ್ನು ಯಾದವ ಸೈನ್ಯದಿಂದಲೇ ನಾಶ ಮಾಡುವ ಸುಯೋಗವು ಈಗ ನಿನಗೊದಗಿರುವುದು. ಕೃಷ್ಣನು ಸೈನ್ಯ ಸಮೇತನಾಗಿ ನಿನ್ನ ಪಕ್ಷವನ್ನು ವಹಿಸಿದ್ದರೆ ನೀನು ಆ ಸಹಾಯವನ್ನು ನಿರಾಕರಿಸಬೇಕಾಗಿತ್ತು. 'ನನಗೆ ನೀನು ಬೇಡ ; ನಿನ್ನ ಸೈನ್ಯವು ಮಾತ್ರ ಬೇಕು' ಎಂದು ನಿಸ್ಸಂಕೋಚವಾಗಿ ಹೇಳಬೇಕಾಗುತ್ತಿತ್ತು. ಆದರೆ ಅರ್ಜುನನು ನಿನ್ನನ್ನಾ ಸಂಕಟದಿಂದ ಉದ್ಧಾರ ಮಾಡಿದನು.

ದುರ್ಯೋಧನ : ಕೃಷ್ಣನು ನೀನು ಹೇಳುವಂತಹ ವಂಚಕನಿರಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಅವನ ಮೇಲಿನ ದ್ವೇಷದಿಂದ ಪಾಂಡವರನ್ನು ಹಿಂಸಿಸಬೇಕಾಗುವುದು.

ಶಕುನಿ : ಪಾಂಡವರನ್ನು ಕೃಷ್ಣನಿಂದ ಬೇರೆ ಮಾಡಲಾಗದು. ಅವರೆಲ್ಲರೂ ಕೃಷ್ಣನ ಆಜ್ಞಾಧಾರಕರು. ನೀನು ಸಂಧಾನಕ್ಕೆ ಸಮ್ಮತಿಸಿ ಪಾಂಡವರಿಗೆ ಆಶ್ರಯವನ್ನು ಕೊಟ್ಟೆಯಾದರೆ, ನಿನ್ನ ವಿನಾಶಕ್ಕೆ ನೀನೇ ಕಾರಣನಾಗುವೆ. ಪಗಡೆಯಾಟದಲ್ಲಿ ಸೋತಾಗಲೇ ರಾಜ್ಯದ ಮೇಲಿನ ಅವರ ಹಕ್ಕು ನಷ್ಟವಾಯಿತು. ಪುನಃ ಅವರದನ್ನು ಹೊಂದುವುದೆಂದರೇನು ? ಕ್ಷತ್ರಿಯ ವೀರರಿಂದ ಅನುಭುಕ್ತಳಾದ ಕುರುಭೂಮಿಯ ರಾಜ್ಯಲಕ್ಷ್ಮಿಯನ್ನು ಭಿಕ್ಷುಕರ ಯಾಚನಾಂಜಲಿಯಲ್ಲಿಡುವುದು ನಿನಗೆ ಉಚಿತವಲ್ಲ. ಪಾಂಡವರು ರಾಜ್ಯಕ್ಕಾಗಿ ಹಂಬಲಿಸುತ್ತಿದ್ದರೆ, ರಣಕ್ಷೇತ್ರದಲ್ಲಿ ಸೆಣಸಿ ರಾಜ್ಯಲಕ್ಷ್ಮಿಯ ಕೈ ಹಿಡಿಯಲಿ. ಮೇಲಿಂದ ಮೇಲೆ ಈ ದೈನ್ಯವೃತ್ತಿಯೇಕೆ ? ದೇಹಿ ! ದೇಹಿ !

ದುರ್ಯೋಧನ : ಸರಿಯಾಗಿ ಹೇಳಿದೆ, ಸೌಬಲರಾಜ. ಯುದ್ಧದ ಹೊರತು ಪಾಂಡವರಿಗೆ ಸೂಜಿಯ ಮೊನೆಯಷ್ಟು ಭೂಮಿಯನ್ನೂ ಕೊಡಲಾಗುವುದಿಲ್ಲ.

ಶಕುನಿ : ಅಷ್ಟು ಮಾತ್ರವಲ್ಲ. ಸಂಧಿಯ ನೆವದಿಂದ ಬಾರಿ ಬಾರಿಗೂ ಪ್ರತಿಷ್ಠೆಯನ್ನು ತೋರುತ್ತಿರುವ ಕೃಷ್ಣನಿಗೂ ತಕ್ಕ ಪ್ರಾಯಶ್ಚಿತ್ತವಾಗಬೇಕು. ಆ ವಿಚಾರದಲ್ಲಿ ನಿನಗೊಂದು ಸಲಹೆಯಿರುವುದು, ಯಥಾಸಮಯದಲ್ಲಿ ವಿಜ್ಞಾಪಿಸಿಕೊಳ್ಳುವೆನು.

ದುರ್ಯೋಧನ : ನಿನ್ನ ಸಲಹೆಯ ಹೊರತಾಗಿ ನಾನು ಏನನ್ನೂ ಮಾಡುವುದಿಲ್ಲ. (ಇಬ್ಬರೂ ಹೋಗುವರು)

ದೃಶ್ಯ ೩

(ಹಸ್ತಿನಾವತಿಯಲ್ಲಿ ರಾಜಸಭೆ. ಧೃತರಾಷ್ಟ್ರನು ಸಿಂಹಾಸನಾರೂಢನಾಗಿರುವನು. ದುರ್ಯೋಧನ, ದುಶ್ಶಾಸನ, ಶಕುನಿ, ಭೀಷ್ಮ, ದ್ರೋಣ, ಕರ್ಣ, ವಿದುರ ಮುಂತಾದವರು ಉಚಿತಾಸನಗಳಲ್ಲಿರುವರು)

ವಂದಿಮಾಗಧರು : ಶ್ರೀಮದಖಂಡ ಭೂಮಂಡಲ ಮಂಡಲಾಧೀಶ,
ಪ್ರಕಾಂಡ ಪ್ರಣಮಿತ ಪಾದಾರವಿಂದ, ಗೋವಿಂದ ;

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕಟತೃಣಾವರ್ತಾದಿ ಅಕ್ಷೌಹಿಣ್ಯಧ್ಯಕ್ಷ,
ಪ್ರಬಲ ಪ್ರತಾಪಮದಾರಣ್ಯ ದಾವ, ಭೂರಿಪ್ರಭಾವ;
ಯದುಕುಲಪಯಃ ಪಾರಾವಾರ ರಾಕಾಸುಧಾಕರ,
ದುಷ್ಟಪ್ರಾಣ ಧರ್ವೀಕರ; ಪೂರ್ಣಾನಂದ ಸ್ವರೂಪ,
ಪೂರ್ಣಾವತಾರ, ವಾಸುದೇವ, ಕೇಶವ, ಪರಾಕು.

ದುರ್ಯೋಧನ : ಪಾಂಡವರ ಪಕ್ಷಪಾತಿ ಕೃಷ್ಣನು ಬರುತ್ತಿರುವನು.

(ಮಿತಪರಿವಾರದೊಡನೆ ಕೃಷ್ಣನು ಪ್ರವೇಶಿಸಿ ಆಸನಾಸೀನನಾಗುವನು)

ಕೃಷ್ಣ : ಪರಮಪೂಜ್ಯರಾದ ಆಚಾರ್ಯರೇ, ವೃದ್ಧರೇ, ಕೌರವ ಪಕ್ಷೀಯರೇ, ಈ ದಿನ ನಾನು ಪಾಂಡವರ ರಾಯಭಾರಿಯಾಗಿ ಬಂದಿದ್ದೇನೆ. ಅವರು ಕಳುಹಿಸಿರುವ ಸಂದೇಶವನ್ನು ನಿಮ್ಮ ಮುಂದಿಡುವುದು ನನ್ನ ಅಭಿಮತ. ಕುರು ಪಾಂಡವರ ಭವಿಷ್ಯ ಕಾರ್ಯ ವ್ಯವಸ್ಥೆಯು ಈಗ ನಿರ್ಣಯಿಸಲ್ಪಡಬೇಕಾಗಿರುವುದರಿಂದ ನಾನು ನಿಮ್ಮ ಮುಂದಿಡುವ ಪ್ರಶ್ನೆಗಳನ್ನು ನೀವು ಅನುಗ್ರಹಿಸಿ ಗಮನಿಸಬೇಕಾಗಿ ಬೇಡುತ್ತೇನೆ. ಈ ವಿಷಯದಲ್ಲಿ ನೀವು ಉಪೇಕ್ಷೆ, ಪಕ್ಷಪಾತ, ಅಸಂಬದ್ಧ ಪ್ರಲಾಪ, ಆತುರ ಮುಂತಾದ ಭಾವನೆಗಳನ್ನು ತ್ಯಜಿಸಿ ತೀರ್ಪು ಕೊಡಬೇಕಾಗಿದೆ. ಆ ರೀತಿ ಮಾಡದಿದ್ದರೆ ಮುಂದೆ ಆಗಬಹುದಾದ ಅನರ್ಥಗಳಿಗೆಲ್ಲಾ ನೀವೇ ಕಾರಣರಾಗುವಿರಿ. ಈಗ ನಿಮ್ಮ ಮುಂದಿರುವ ಪ್ರಶ್ನೆಯು ಸಮಗ್ರ ಭಾರತದ ಕ್ಷತ್ರಿಯ ರಾಜರ ಅಸ್ತಿತ್ವ ನಾಸ್ತಿತ್ವಗಳನ್ನು ನಿರ್ಧರಿಸುವಂತಹುದೆಂಬುದನ್ನು ತಿಳಿಯಿರಿ. ಪವಿತ್ರವಾದ ಈ ಭಾರತಭೂಮಿಯನ್ನು ಶಾಂತಿಯ ಅಮೃತ ಧಾರೆಯಿಂದ ಅಭಿಷೇಕ ಮಾಡುವಿರೋ, ಇಲ್ಲವೇ ಭಯಂಕರವಾದ ರಕ್ತಧಾರೆಯಿಂದ ಆ ಮಾತೃಮೂರ್ತಿಯನ್ನು ತೋಯಿಸುವಿರೋ? ಈ ಎರಡರಲ್ಲಿ ಒಂದು ಪ್ರಶ್ನೆಯು ಈ ದಿನ ಇಲ್ಲಿ ನಿರ್ಣಯವಾಗಬೇಕಾಗಿದೆ. ಮಿತ್ರರೇ, ಈ ಪೀಠಿಕೆಯಲ್ಲಿಯೇ ಕಾಲಹರಣ ಮಾಡದೆ ಮುಖ್ಯ ವಿಷಯಕ್ಕೆ ಬರುತ್ತೇನೆ. ಕಪಟ ದ್ಯೂತದಲ್ಲಿ ಪರಾಜಿತರಾದ ಮೇಲೆ ಧರ್ಮಶೀಲರೂ, ಸತ್ಯವಂತರೂ ಆದ ಪಾಂಡವರು ತಮ್ಮ ಪ್ರತಿಜ್ಞೆಯಂತೆ ವನವಾಸ ಅಜ್ಞಾತವಾಸಗಳನ್ನು ಪೂರೈಸಿಕೊಂಡು ಹಿಂದಿರುಗಿದರಲ್ಲವೇ? ಇನ್ನು ನಿಮ್ಮ ವಾಗ್ದಾನವು ಉಳಿದಿದೆ. ... ಧನೊಡನೆ ... ನಿಮಗೆ ಈ ರೀತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂದೇಶವನ್ನು ಕಳುಹಿಸಿದ್ದಾರೆ. "ಪ್ರತಿಜ್ಞೆಯಂತೆ ನಾವು ನಡೆದುಕೊಂಡೆವು. ಮುಂದೆ ನೀವು ರಾಷ್ಟ್ರಕಲ್ಯಾಣಕ್ಕಾಗಿ ಈ ವರೆಗಿನ ವೈರವನ್ನು ಮರೆತು ಹಿಂದೆ ವಾಗ್ದಾನ ಮಾಡಿದಂತೆ ನಮಗೆ ಸಲ್ಲಬೇಕಾದ ಅರ್ಧ ರಾಜ್ಯವನ್ನು ನಮಗೆ ಕೊಡಿ." ಸಭಾಸದರೇ, ಪಾಂಡವರ ಈ ವಿನಯುವಚನವನ್ನು ಕೇಳಿದಿರಾ? ಬಾಲ್ಯದಿಂದ ನೀವು ಅವರ ಮೇಲೆ ತೋರಿಸುತ್ತಿದ್ದ ದೀರ್ಘವೈರವನ್ನು ಮರೆಯಲು ಪಾಂಡುನಂದನರು ಸಿದ್ಧರಾಗಿದ್ದಾರೆ. ವಿಷ ಭೋಜನ, ಲಾಕ್ಷಾಗೃಹ ದಹನ, ಕಪಟದ್ಯೂತ, ಇವೆಲ್ಲಕ್ಕಿಂತಲೂ ಮಿಗಿಲಾಗಿ ದ್ರೌಪದಿಯ ಮಾನಭಂಗ–ಈ ಮಹಾ ಪಾಪಗಳನ್ನು ಮನ್ನಿಸಿ, ಪಾಂಡವರು ತಮಗೆ ನ್ಯಾಯವಾಗಿ ಸಲ್ಲಬೇಕಾದ ತಮ್ಮ ಭಾಗಕ್ಕಾಗಿ ನಿಮ್ಮನ್ನು ಯಾಚಿಸುತ್ತಿರುವಾಗ ಈ ಸುಸಮಯವನ್ನು ವ್ಯರ್ಥಗೊಳಿಸದೆ ಶಾಂತಿ ಸಮಾಧಾನಗಳಿಗೆ ಪ್ರಯತ್ನಿಸಿರಿ. ಧೃತರಾಷ್ಟ್ರ ರಾಜೇಂದ್ರ, ಇದುವರೆಗೆ ನೀನು ನಿನ್ನ ಪುತ್ರರನ್ನು ಸ್ವೇಚ್ಛಾಚಾರಿಗಳಾಗಿ ಬಿಟ್ಟಿದ್ದಂತೆ ಮುಂದೆಯೂ ಬಿಡುವೆಯಾದರೆ ಅಪಾರ ದುಃಖಕ್ಕೀಡಾಗುವೆ. ಕಣ್ಣೀರು ಕಾಲುವೆಯಾಗಿ ಹರಿಯಲು ಅವಕಾಶ ಕೊಡಬೇಡ. ಕೌರವರಂತೆ ಪಾಂಡವರೂ ನಿನಗೆ ಮಕ್ಕಳಲ್ಲವೇ? ಪಾಂಡುರಾಜನು ಮೃತನಾದ ಬಳಿಕ ಅವರು ತಮ್ಮ ಬಾಲ್ಯವನ್ನು ನಿನ್ನ ತೊಡೆಯ ಮೇಲೆಯೇ ಕಳೆದರಲ್ಲವೇ? ಆ ಮಕ್ಕಳಿಗೆ ಆಶ್ರಯ ಕೊಡುವಂತೆ ನಾನು ಪ್ರಾರ್ಥಿಸುತ್ತೇನೆ. ಸರ್ವಜ್ಞನಾದ ನಿನಗೆ ಇದಕ್ಕಿಂತ ಹೆಚ್ಚಿಗೆ ಹೇಳುವ ಅವಶ್ಯಕವಿಲ್ಲ. ಅವರ ಸಂದೇಶದೊಡನೆ ನನ್ನ ಸಂದೇಶವನ್ನೂ ಸೇರಿಸಿದ್ದೇನೆ. ಮುಂದೆ ವಿಚಾರ ಅವಿಚಾರಗಳನ್ನು ಕರ್ತವ್ಯಾಕರ್ತವ್ಯಗಳನ್ನು ನಿರ್ಣಯಿಸುವುದು ಪ್ರಾಜ್ಞರಾದ ನಿಮ್ಮೆಲ್ಲರನ್ನೂ ಸೇರಿದೆ.

ಭೀಷ್ಮ : ಧೃತರಾಷ್ಟ್ರ, ಪ್ರಿಯಪುತ್ರರೇ, ಸಭಾಸದರೇ, ಶ್ರೀಕೃಷ್ಣನು ನಿಮ್ಮ ಮುಂದೆ ನಿರೂಪಿಸಿದ ರಾಜಕಾರ್ಯವನ್ನು ನೀವೆಲ್ಲರೂ ಕೇಳಿದಿರಲ್ಲವೇ? ನೀವು ಈ ಸಲಹೆಗಳನ್ನು ಮನ್ನಿಸಿ ಅದರಂತೆ ನಡೆಯುವಿರೆಂದು ನಾನು ನಂಬಿದ್ದೇನೆ. ಶಾಂತಿ ಸಂಧಾನದ ಸುಸಮಯವನ್ನು ನಾವು ವ್ಯರ್ಥಗೊಳಿಸು[illegible] ತಪ್ಪು ವಿಷವಾಗುವುದು. ಕುಮಾರ,

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ ! ನೀವೂ ಪಾಂಡವರೂ ಸಹೋದರರಲ್ಲವೇ ? ನಿಮ್ಮಲ್ಲಿ ಈ ವಿರೋಧವೇಕೆ ? ದುರಭಿಮಾನವನ್ನು ಬಿಟ್ಟು ಅನ್ಯೋನ್ಯ ಮೈತ್ರಿಯಿಂದಿರುವುದು ಮೇಲು.

ಧೃತರಾಷ್ಟ್ರ : ವತ್ಸಾ ದುರ್ಯೋಧನ, ಶ್ರೀಕೃಷ್ಣನ ಸಂದೇಶವೂ, ಪಿತಾಮಹ ಭೀಷ್ಮನ ಉದ್ದೇಶವೂ, ನನ್ನ ಆದೇಶವೂ ಒಂದೇ ಆಗಿದೆ. ಇನ್ನಾದರೂ ಯುದ್ಧದ ಚಿಂತೆಯನ್ನು ಬಿಟ್ಟು ನಿನ್ನ ವೃದ್ಧ ಜನನೀಜನಕರಿಗೆ ಸಂತೋಷವನ್ನುಂಟು ಮಾಡು. ಬಂಧು ಬಾಂಧವರ ರಕ್ತಪಾತದಿಂದ ಭಾರತ ಭೂಮಿಯನ್ನು ಅರಾಜಕವಾಗಿ ಮಾಡಬೇಡ. ಚೆನ್ನಾಗಿ ವಿಚಾರ ಮಾಡು. ದುರ್ಬೋಧೆಗೆ ಕಿವಿ ಕೊಡಬೇಡ. ಪಾಂಡವರು ನಿನಗೆ ಸಹೋದರರಲ್ಲವೇ ?

ವಿದುರ : ದುರ್ಯೋಧನ !

ದುರ್ಯೋಧನ : ಈ ದಾಸೀಪುತ್ರನೂ ನನಗೆ ಉಪದೇಶ ಮಾಡುವವರಲ್ಲೊಬ್ಬನೋ ? ಆಗಲಿ ವಿದುರ ! ನಿನ್ನ ಅರಣ್ಯರೋಧನವೂ ನಡೆಯಲಿ.

ವಿದುರ : ಅಹುದು, ದುರ್ಯೋಧನ. ನನ್ನ ರೋಧನವೂ ಅರಣ್ಯರೋಧನವೇ. ನಿನ್ನಂತಹವರಿಗೆ ಸದುಪದೇಶ ಮಾಡಬಾರದೆಂದು ದೊಡ್ಡವರು ಹೇಳಿದ್ದಾರೆ. ಏನು ಮಾಡಲಿ ? ಕೆಡುವವರನ್ನು ನೋಡಿದಾಗ ಅವರಿಗೆ ಸದುಪದೇಶ ಮಾಡುವುದು ವಿವೇಕಿಗಳ ಕರ್ತವ್ಯ. ನಾನೀಗ ಸುಮ್ಮನಿದ್ದರೆ ದೋಷ ಸಂಭವಿಸುವುದು. ಕುಮಾರ, ನೀನು ಈಗ ಯೌವನ ಮದದಿಂದ ಗರ್ವಿತನಾಗಿರುವೆ. ರಾಜ್ಯಮದದಿಂದ ನಿನ್ನ ಕಿವಿಗಳು ಮುಚ್ಚಿಹೋಗಿವೆ. ನನ್ನ ಹಿತೋಪದೇಶವು ನಿನಗೆ ಕೇಳುವುದಿಲ್ಲ. ಆದರೂ ಹೇಳುವೆನು. ನಿನ್ನ ತಂದೆ, ಪಿತಾಮಹ ಭೀಷ್ಮನು, ಶ್ರೀಕೃಷ್ಣನು–ಇವರು ಹೇಳಿದುದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ. ಆದರೆ ಒಂದೇ ಮಾತು. ಇದೀಗ ಸಂಧಿಗೆ ಸುಸಮಯ. ಹಠದಿಂದ ಅದನ್ನು ಕಳೆದುಕೊಳ್ಳಬೇಡ. ಸುಖ ಸಂಪತ್ತು ಶಾಶ್ವತವಲ್ಲ. ರಾಜ್ಯವೆಲ್ಲವನ್ನೂ ನೀನೇ ಅನುಭವಿಸು. ನಿನ್ನ ಇಚ್ಛೆ ಇದ್ದಷ್ಟು ಭೂಮಿಯನ್ನಾದರೂ ಪಾಂಡವರಿಗೆ ಕೊಡು. ಇದು ನನ್ನ ಅಭಿಪ್ರಾಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ : ವಿದುರ, ಈ ನೀತಿಯನ್ನು ಆ ಪಾಂಡವರಿಗೆ ಹೇಳಲೊಲ್ಲಿಯೇಕೆ ? ಸಾಕು. ಸುಮ್ಮನೆ ಕುಳಿತುಕೊ. ಕೃಷ್ಣನಿಗಾಗಲಿ ನನ್ನ ತಂದೆಗಾಗಲಿ ನನ್ನೊಬ್ಬನಲ್ಲಿ ಮಾತ್ರವೇ ದೋಷವು ಕಾಣುತ್ತಿರುವುದು. ಆ ಪಾಂಡವರು ನಿರ್ದೋಷಿಗಳಲ್ಲವೇ ? ಕುಂತೀಪುತ್ರ ಪಕ್ಷಪಾತಿಯಾದ ನೀನು, ನಿನ್ನ ಸ್ವಭಾವಕ್ಕೆ ಸರಿಯಾದುದನ್ನೇ ಹೇಳಿದೆ. ಕೃಷ್ಣಾ, ಮಹಾನುಭಾವನಾದ ನೀನು ನಿನ್ನದೌತ್ಯವನ್ನು ಶ್ಲಾಘನೀಯವಾಗಿಯೇ ಮುಗಿಸಿದೆ. ಆದರೆ ನಿನ್ನ ಮರುಳು ಮಾತುಗಳಿಗೆ ಒಡಂಬಡುವ ಬುದ್ಧಿಹೀನನು ಮಾತ್ರ ಈ ದುರ್ಯೋಧನನಲ್ಲ. ಇದನ್ನು ಚೆನ್ನಾಗಿ ತಿಳಿದಿರು. ಇದು ಶುದ್ಧ ಕ್ಷತ್ರಿಯನ ರಕ್ತ, ಸ್ವಾಭಿಮಾನ ಶೂನ್ಯತೆಯ ಕೊಳಕು ನೀರಲ್ಲ.

ಕೃಷ್ಣ : ದುರ್ಯೋಧನ, ಇಷ್ಟೊಂದು ಅಪಮಾನವೇ ! ಇದು ನಿನ್ನ ದುರಹಂಕಾರದ, ದುರಾಗ್ರಹದ, ದುಸ್ಸಹವಾಸದ, ದುರಾಶಯದ ದುರಭಿಮಾನ. ವಿಚಾರಮಾಡು ಕೌರವೇಶ್ವರ.

ದುರ್ಯೋಧನ : ಕೃಷ್ಣ, ಸಾಕು ನಿನ್ನ ವಾಕ್ಪಟುತ್ವ ; ನಾನು ಅದನ್ನು ಮೊದಲೇ ಬಲ್ಲೆ. ನಮ್ಮದು ದುರಾಗ್ರಹದ, ದುರಹಂಕಾರದ, ದುಸ್ಸಹವಾಸದ ದುರಭಿಮಾನವೇ ? ಭಲೆ ! ಬಹಳ ಚೆನ್ನಾಗಿ ಹೇಳಿದೆ. ಹಾಗಾದರೆ, ಕೇಳು. ಈ ಕೌರವನನ್ನು ಸದೆಬಡಿಯಲೇಬೇಕೆಂದನಲ್ಲವೇ ಆ ಭೀಮನು ? ಅದು ದುರಾಗ್ರಹ. ಲೋಕೈಕ ವೀರನಾದ ಕರ್ಣನನ್ನು ವಧಿಸಬೇಕೆಂದನಲ್ಲವೇ ಆ ಪಾರ್ಥನು ? ಅದು ದುರಹಂಕಾರ. ಅಭಿಮಾನ ಶೂನ್ಯತೆಯಿಂದ ನಿನ್ನಂಥ ಕಪಟಿಯ ಸ್ನೇಹವನ್ನು ಬೆಳೆಸಿದರಲ್ಲವೇ ಆ ಪಾಂಡವರು ? ಅದು ದುಸ್ಸಹವಾಸ. ದುಶ್ಶಾಸನ ದುರ್ಯೋಧನರನ್ನು ಪುಡಿಗೈದು ಭರತಖಂಡದಲ್ಲಿ ತಮ್ಮ ಧ್ವಜಪತಾಕೆಯನ್ನು ಹಾರಿಸುವ ಯೋಜನೆ ಮಾಡುತ್ತಿರುವರಲ್ಲವೇ ಆ ಪಾಂಡವರು ? ಅದು ದುರಾಶಯ. ನಾವು ಸಮರ್ಥರು, ಜಯಶೀಲರು ಎಂಬುದಾಗಿ ಹೆಮ್ಮೆಗೊಳ್ಳುತ್ತಿರಲಿಲ್ಲವೇ ಅವರು ? ಅದು ದುರಭಿಮಾನ. ಹೆಚ್ಚೇನು ಕೃಷ್ಣ, ನೀವಾರು ಏನು ಹೇಳಿದರೂ ಈ ಕೌರವನ ನಿರ್ಧಾರ ಚಲಿಸಲಾರದು. ಸುಮ್ಮನೆ ಕಂಠಶೋಷಣೆಯಿಂದ ಪ್ರಯೋಜನವಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ದುಶ್ಶಾಸನ : ಅಣ್ಣನ ಮಾತುಗಳೆಲ್ಲವೂ ನನಗೊಪ್ಪಿತು. ಈ ಕುರು ಸಹೋದರರ ಹೃದಯದಲ್ಲಿ ಪ್ರಜ್ವಲಿಸುತ್ತಿರುವ ಕೋಪಜ್ವಾಲೆಯು ಇಂತಹ ಯುದ್ಧಭೀರುಗಳ ಮಾತುಗಳಿಂದ ಶಾಂತವಾಗುವುದಿಲ್ಲ ಕೃಷ್ಣ ! ನೀನಿನ್ನು ಬಂದ ದಾರಿಯನ್ನು ಹಿಡಿಯುವುದು ಒಳ್ಳೆಯದು.

ಕರ್ಣ : ದುರ್ಯೋಧನ ದುಶ್ಶಾಸನರ ಅಭಿಮತವೇ ನನ್ನ ಅಭಿಮತ. ಅರ್ಜುನನ ಮೇಲೆ ನನ್ನ ಹಗೆ ತೀರಿದ ಹೊರತಾಗಿ ಈ ರಾಧೇಯನಿಗೆ ಮೃಷ್ಟಾನ್ನವೂ ರುಚಿಸುವುದಿಲ್ಲ. ರಾಜೇಂದ್ರಾ, ಈ ಸಂಧಿಯು ಅಂತಿಮ ಕಾಲದಲ್ಲಿ ಶಾಂತಿಯನ್ನಪೇಕ್ಷಿಸುವ ವೃದ್ಧರಿಗೆ ಸ್ವಾಭಾವಿಕವಾದದ್ದು, ನಮ್ಮಂತಹ ಕ್ಷತ್ರಿಯ ವೀರರಿಗಲ್ಲ.

ಕೃಷ್ಣ : ನೀನೂ ಅವರಂತೆ ಮಾತನಾಡುತ್ತಿರುವೆಯಾ, ಕರ್ಣ ? ಅರ್ಜುನನ ಮೇಲಿನ ವೈಯಕ್ತಿಕ ವೈರಕ್ಕೆ ಕ್ಷತ್ರಿಯ ಸಮೂಹವನ್ನು ಬಲಿಕೊಡಲು ಯೋಚಿಸಿದೆಯಾ ? ಇದು ನಿನ್ನ ಧರ್ಮವೇ !

ಕರ್ಣ : ನಿನ್ನ ಪ್ರಾಣಮಿತ್ರನಾದ ಅರ್ಜುನನಲ್ಲಿ ಪಕ್ಷಪಾತ ಬುದ್ಧಿಯಿಂದ ಅರ್ಧ ರಾಜ್ಯವನ್ನು ಬೇಡುವುದಕ್ಕೆ ಬಂದೆಯಲ್ಲವೇ ? ಆ ನಿನ್ನ ಧರ್ಮಕ್ಕಿಂತ ನನ್ನ ಧರ್ಮವು ಮೇಲು. ಯದುಪತಿ, ನಿನ್ನ ಕೃತ್ರಿಮ ಸಂಧಾನಕ್ಕೆ ನಾವು ಖಂಡಿತವಾಗಿಯೂ ಒಪ್ಪುವುದಿಲ್ಲ.

ಕೃಷ್ಣ : ಓಹೋ ! ಮೇರೆ ಮೀರಿತು. ಮದೋನ್ಮತ್ತರಾದ ನಿಮ್ಮೊಡನೆ ಮಾತಾಡುವುದೇ ಅನುಚಿತ. ಆದರೂ ಒಂದು ಮಾತನ್ನು ಹೇಳುವೆನು, ಆಲೋಚಿಸು. ಈ ನಿನ್ನ ಗುರುಹಿರಿಯರು, ಬಂಧುಗಳು, ಸಹೋದರರು, ಇವರನ್ನೊಂದು ಸಾರಿ ದೃಷ್ಟಿಸಿ ನೋಡು. ನಿನ್ನೊಬ್ಬನ ಸಲುವಾಗಿ ಕುರುಕುಲವನ್ನೇ ಧ್ವಂಸ ಮಾಡುವಿಯೇಕೆ? ಸುಯೋಧನ, ಪಾಂಡವರು ನಿನ್ನ ತಂದೆಯ ಪ್ರಭುತ್ವವನ್ನಂಗೀಕರಿಸುವರು ; ನಿನ್ನನ್ನು ಯುವರಾಜನೆಂದು ಸನ್ಮಾನಿಸುವರು. ನಿಮ್ಮೆಲ್ಲರ ಸ್ನೇಹ, ಮಮತೆ ಮತ್ತು ಶಾಂತಿಯ ಹೊರತು ಅವರಿಗೆ ಮತ್ತೇನೂ ಬೇಡ. ಯೋಚಿಸು, ಇದು ಅತ್ಯಂತ ಮಹತ್ವದ ವಿಷಯ. ಈ ಸಂಧಿಯನ್ನು ನೀನು ನಿರಾಕರಿಸಬೇಡ. ಅಲ್ಪ ಪ್ರಯತ್ನದಿಂದ ಮಹಾಫಲವನ್ನು ಹೊಂದುವೆ. ಶತ್ರುಗಳು ತಲೆಬಾಗಿ ನಿನ್ನ ಕ್ಷಮಾಭಿಕ್ಷೆಯನ್ನು ಬೇಡುವರು. ಮಿತ್ರರು ಪುಳಕಿತ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾತ್ರರಾಗಿ ನಿನ್ನನ್ನಾಲಂಗಿಸುವರು. ಈ ಸಾಮ್ರಾಜ್ಯ ಶಾಸನವು ನಿರಾಯಾಸವಾಗಿ ನಿನ್ನ ಕೈ ಸೇರುವುದು. ಪಾಂಡುನಂದನರೊಡನೆ ಸಮಾನ ಭಾವದಿಂದ ಪ್ರಜಾಪಾಲನೆಯ ಪವಿತ್ರ ಯಜ್ಞದಲ್ಲಿ ದೀಕ್ಷಿತ ನಾಗು. ಆಗ ವಿಶ್ವಜಗತ್ತಿನಲ್ಲಿ ಅಪ್ರತಿಮನೆನಿಸುವೆ. ಮಾನವ ಲೋಕವು ನಿನ್ನನ್ನು ಆದರ್ಶ ನರಪತಿಯೆಂದು ಹೊಗಳುವುದು. ಪಾಂಡವರಿಗೆ ರಾಜ್ಯದ ಮೇಲಿರುವ ಹಕ್ಕನ್ನು ಒಪ್ಪಿಕೊಳ್ಳದಿದ್ದರೆ ಹೋಗಲಿ. ಅವರ ಈ ಇಷ್ಟವನ್ನು ನೆರವೇರಿಸು. ಸಂಧಿಗೆ ಸಮ್ಮತಿಸು. ದಾನವ ವಿಜಯೀ ಯದುಪತಿಯು ಕೇವಲ ಪಾಂಡವರ ಸಲುವಾಗಿಯೇ ಅಲ್ಲ; ನಿಮ್ಮ ಸಲುವಾಗಿ, ಮುಂದೊದಗುವ ಭೀಷಣ ಯುದ್ಧದಿಂದ ಮಾನವ ಕೋಟಿ ಯನ್ನುದ್ಧರಿಸುವ ಸಲುವಾಗಿ—ಇಂದು ನಿನ್ನಲ್ಲಿ ಈ ಭಿಕ್ಷೆಯನ್ನು ಬೇಡುವೆನು; ಭಿಕ್ಷಾಪ್ರದಾನಮಾಡು.

ದುರ್ಯೋಧನ : ಇದರಲ್ಲಿ ನನ್ನ ಅಪರಾಧವೇನು, ಯದುರಾಜ ? ಪಾಂಡವರು ಜೂಜಾಡಿ ರಾಜ್ಯಾದಿಸಂಪತ್ತುಗಳನ್ನು ಕಳೆದುಕೊಂಡದ್ದು ನನ್ನ ತಪ್ಪೇ ? ಸತ್ಯಪರಿಪಾಲನೆಗಾಗಿ ವನವಾಸ ಮಾಡಿದುದು ಅಧರ್ಮದ ಕಾರ್ಯವೋ ? ಕೇಳು, ವಾಸುದೇವಾ, ಈ ವಿಸ್ತಾರವಾದ ಸಾಮ್ರಾಜ್ಯ ವನ್ನು ಶಾಸನ ಮಾಡಲು ದುರ್ಯೋಧನನ ಹೊರತಾಗಿ ಮತ್ತಾರಿಗೂ ಸಾಧ್ಯವಿಲ್ಲ. ಪಾಂಡವರು ! (ನಕ್ಕು) ಭಿಕ್ಷಾವೃತ್ತಿಯೇ ಅವರಿಗೆ ಯೋಗ್ಯವಾದ ಜೀವನ ! ಧರ್ಮಭೀರುಗಳಾದ ಅವರ ಕೈಯಲ್ಲಿ ಈ ವಿಪುಲ ಸಾಮ್ರಾಜ್ಯವನ್ನೊಪ್ಪಿಸುವ ಅಪಮಾನವು ನನ್ನಿಂದಾಗದು. ಯುದ್ಧದ ಭಯವನ್ನು ತೋರಿಸುವೆಯಾ ಜನಾರ್ಧನ ? ಯುದ್ಧವು ಕ್ಷತ್ರಿಯನ ಅರ್ಥ, ಕಾಮ, ಮೋಕ್ಷ ಮತ್ತು ಜೀವನದ ಏಕಮಾತ್ರ ಸಾಧನೆ. ಯುದ್ಧದ ಸಲುವಾಗಿ ಕ್ಷತ್ರಿಯನೆಂದಿಗೂ ಭಯಪಡುವುದಿಲ್ಲ.

ಕೃಷ್ಣ : ಸ್ಥಿರನಾಗು, ದುರ್ಯೋಧನ. ನಿನ್ನ ಅಭೀಷ್ಟವು ಯುದ್ಧವಾದರೆ ಅಗತ್ಯವಾಗಿ ಅದನ್ನು ಹೊಂದುವೆ. ಆದರೆ ಇದು ನಿನ್ನ ಯುದ್ಧವಲ್ಲ, ಭಯಂಕರ ಆತ್ಮಹತ್ಯೆ. ಪಾಪಾಶಯ ! ಕುರುಕುಲದ ಕಳಂಕ ಸ್ವರೂಪನೆ ! ನಿನ್ನ ಅಪರಾಧಗಳೇನೆಂದು ಕೇಳುವೆಯೋ ? ನಿನ್ನ ಅಪರಾಧಗಳು ಅಗಣ್ಯ. ರಾಜಸೂಯ ಯಾಗದಲ್ಲಿ ಪಾಂಡವರ ಸಂಪತ್ತನ್ನು ನೋಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕರುಬಿದ ನೀನು, ಶಕುನಿಯ ಸಲಹೆಯಂತೆ ಯುಧಿಷ್ಠಿರನನ್ನು ಕಪಟ ದ್ಯೂತಕ್ಕೆಳೆದುದನ್ನು ಮರೆತೆಯ ? ಸಹೋದರ ಪತ್ನಿಯನ್ನು ರಾಜಸಭೆಗೆ ಸೆಳೆದುತಂದು, ನೀನು ಮಾಡಿದ ಅವಾಚ್ಯ ಅಪರಾಧವು ಅನಂತಕಾಲವೂ ಪ್ರಳಯದ ಧೂಮಕೇತುವಿನಂತೆ ನಿನ್ನ ನೀಚ ಸ್ಮೃತಿಯನ್ನು ಹಿಂಬಾಲಿಸು ವುದೆಂದು ನೆನಪಿನಲ್ಲಿಡು. ಧರ್ಮನಿಷ್ಠರೂ, ಸ್ನೇಹಶೀಲರೂ ಆದ ಆತ್ಮೀಯ ಬಂಧುಗಳಲ್ಲಿ ನೀನು ಜಘನ್ಯವಾದ ರಾಕ್ಷಸೀವೃತ್ತಿಯನ್ನು ತೋರಿಸಿದೆ. ವಾರಣಾವತದ ಅರಗಿನಮನೆ, ಏಕಚಕ್ರನಗರದಲ್ಲಿ ಕುಂತಿ ಗಾದ ಭಂಗ, ವಿಷಪ್ರಾಶನ, ಸರ್ಪಬಂಧ—ಇವೆಲ್ಲವನ್ನೂ ಮರೆತೆಯ ? ಭೀಷ್ಮ ದ್ರೋಣಾದಿ ಗುರುಜನರ ಮಾತನ್ನು ನಿರಾಕರಿಸಿ ಅನ್ಯಾಯಾ ಚರಣೆಯಲ್ಲಿ ಪ್ರವೃತ್ತನಾದ ನಿನಗೆ ಕೀರ್ತಿಯೂ, ಶ್ರೇಯಸ್ಸೂ ಎಂದಿಗೂ ಲಭಿಸದು.

ಶಕುನಿ : ಕೌರವೇಶ್ವರ, ಈ ದರ್ಪಿತ ವಾಕ್ಯಗಳನ್ನು ನೀನು ಎಷ್ಟು ಹೊತ್ತು ಸಹಿಸಬಲ್ಲೆ ?

ದುಶ್ಶಾಸನ : ಅಣ್ಣ, ಇದು ಕೌರವರ ರಾಜಸಭೆಯಲ್ಲ ; ಪಾಂಡುನಂದನರ ಮಿತ್ರಕೂಟ ! ನಿನ್ನ ಅನ್ನವನ್ನು ತಿಂದು ಪರಿಪುಷ್ಟರಾದ ಈ ವೃದ್ಧರು ನಿನ್ನ ನಿಂದೆಯನ್ನು ಹೇಗೆ ತದೇಕಚಿತ್ತರಾಗಿ ಕೇಳುತ್ತಿರುವರು, ನೋಡು. ಸಮಯವು ದೊರಕಿದರೆ ಇವರೆಂತಹ ದ್ರೋಹಚಿಂತನೆಗೂ ಹೆದರತಕ್ಕವ ರಲ್ಲ. ನಡೆ ! ನಾವಿಲ್ಲಿ ಒಂದು ಕ್ಷಣವೂ ನಿಲ್ಲಲಾಗದು.

ದುರ್ಯೋಧನ : ಸರಿಯಾಗಿ ಹೇಳಿದೆ. ಈ ಶತ್ರು ಮಧ್ಯದಲ್ಲಿ ನಮಗೇನು ಕೆಲಸ ? ನಡೆ ಸಹೋದರ. (ಮೂವರೂ ಹೋಗುವರು)

ಧೃತರಾಷ್ಟ್ರ : ನಿಲ್ಲು, ನಿಲ್ಲು, ಕುಮಾರ (ಶಬ್ದಾನುಕರಣದಿಂದ ಅವರು ಹೋದು ದನ್ನು ತಿಳಿದು) ಹೋದನು ! ಹೊರಟು ಹೋದನು ! ಹಾ ! ಜನಾ ರ್ಧನ, ಈ ಮದಾಂಧನನ್ನು ತಡೆಯುವವರಾರೂ ಇಲ್ಲವೆ ? (ಚಿಂತಿಸಿ, ಬಳಿಕ ನಿಧಾನವಾಗಿ) ಯಾವನು ಸಾಮ ದಾನಗಳನ್ನು ನಿರಾಕರಿಸಿ, ದಂಡವನ್ನೇ ಪರಮೋಪಾಯವೆಂದು ಆಶ್ರಯಿಸುವನೋ, ಅವನು ಜಾಗ್ರತೆಯಾಗಿ ಸಂಕಟಕ್ಕೀಡಾಗುವನು....(ಸ್ಥಿರಕಂಠದಿಂದ) ಹೋಗು

Sri Vidyabharathi Book Centre, Sringeri

CC-O. In Public Domain. Digitized by eGangotri
ವಿದುರ, ಗಾಂಧಾರಿಯನ್ನು ಕರೆದುಕೊಂಡು ಬಾ. ಅವಳೊಂದು ಸಾರಿ-ಕೊನೆಯಸಾರಿ, ಪ್ರಯತ್ನಿಸಿ ನೋಡಲಿ. (ವಿದುರನು ಹೋಗುವನು)

ಕೃಷ್ಣ : ಕುರುವೃದ್ಧರೆ, ನೀವೀ ದುರ್ವ್ಯರ್ತ್ತನನ್ನು ದಮನಮಾಡಲಾರದವರಾದರೆ, ಈ ನಿಮ್ಮ ವಿಖ್ಯಾತ ವಂಶದ ಗೌರವವನ್ನು ಹೇಗೆ ರಕ್ಷಿಸಿಕೊಳ್ಳಬಲ್ಲಿರಿ ? ನಿಮ್ಮ ಕಣ್ಣುಗಳ ಮುಂದೆ ನಡೆಯುತ್ತಿರುವ ಈ ಅತ್ಯಾಚಾರವನ್ನು ನಿಲ್ಲಿಸುವ-ಇಚ್ಛೆಯಿದ್ದರೆ ಈಗಲೇ ದುರ್ಯೋಧನ, ದುಶ್ಯಾಸನ, ಶಕುನಿ, ಈ ಮೂವರನ್ನು ಬಂಧನದಲ್ಲಿಟ್ಟು ಪಾಂಡವರೊಡನೆ ಸಂಧಿ ಮಾಡಿಕೊಳ್ಳಿರಿ. ಕುಲವನ್ನು ರಕ್ಷಿಸುವ ಸಲುವಾಗಿ ಒಬ್ಬ ಮನುಷ್ಯನನ್ನೂ, ಗ್ರಾಮದ ರಕ್ಷಣೆಗಾಗಿ ಕುಲವನ್ನೂ, ದೇಶದ ರಕ್ಷಣೆಗಾಗಿ ಗ್ರಾಮವನ್ನೂ, ಆತ್ಮರಕ್ಷಣೆಗಾಗಿ ಸರ್ವಸ್ವವನ್ನೂ ತ್ಯಜಿಸುವುದು ಧರ್ಮವೆಂದು ಶಾಸ್ತ್ರಗಳು ಹೇಳುವುವು. ಅನೈಚ್ಛಿಕವಾದ ಯುದ್ಧದಿಂದ ಭಾರತವರ್ಷದ ವೀರಯೋಧರ ಪವಿತ್ರ ರಕ್ತವನ್ನು ಚೆಲ್ಲಲೇಕೆ ? ಮಾನವ ಜಾತಿಯನ್ನು ಈ ರಕ್ತ ಪ್ರಳಯದಿಂದ ಉದ್ಧರಿಸುವುದಾದರೆ ನಾನು ಹೇಳಿದಂತೆ ಮಾಡಿರಿ.

ಧೃತರಾಷ್ಟ್ರ : (ಭಗ್ನಕಂಠದಿಂದ) ವಾಸುದೇವ, ಈ ದುರ್ವಿನೀತರಾದ ಪುತ್ರರ ವರ್ತನೆಯಿಂದ ನನ್ನ ಹೃದಯದಲ್ಲೊಂದು ಜ್ವಾಲೆ ಹತ್ತಿ ಉರಿಯುತ್ತಿರುವುದು, ಆದರೇನು ಮಾಡಲಿ ? ನಾನು ಅಂಧನು, ದುರ್ಬಲನು, ಪರಾಧೀನನು. (ವಿದುರ ಮತ್ತು ಗಾಂಧಾರಿಯರ ಪ್ರವೇಶ)

ಗಾಂಧಾರಿ : ಕುಮಾರನೆಲ್ಲಿ ?

ಧೃತರಾಷ್ಟ್ರ : ಗಾಂಧಾರಿ, ರಾಜ್ಯಲೋಭದಿಂದ ಉನ್ಮತ್ತಪ್ರಾಯನಾದ ದುರ್ಯೋಧನನನ್ನು ಸಂಧಿಗೊಡಂಬಡುವಂತೆ ಮಾಡುವ ಕಾರ್ಯವು ನಿನ್ನದು. ಹೋಗು ವಿದುರ, ಆ ಹತಭಾಗ್ಯನನ್ನು ಮತ್ತೊಂದು ಸಾರಿ ಇಲ್ಲಿಗೆ ಬರಮಾಡು.

ವಿದುರ : ಆಜ್ಞೆ (ಹೋಗುವನು)

ಗಾಂಧಾರಿ : ರಾಜೇಂದ್ರ, ಪುತ್ರಪ್ರೇಮದಿಂದ ಕರ್ತವ್ಯಮೂಢನಾದ ನೀನು ಈ ಅಂಖಿಡ ಸಾಮ್ರಾಜ್ಯದ ಶಾಸನಭಾರವನ್ನು ಹೇಗೆ ನಿರ್ವಹಿಸಬಲ್ಲೆ ? ಈ ಮೋಹವನ್ನು ತ್ಯಜಿಸು. ವಿವೇಕವೆಂಬ ನಿನ್ನ ಆಂತರಿಕ ಚಕ್ಷುವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತೆರೆ. ಈ ಸಂದಿಗ್ಧ ಸಮಯದಲ್ಲಿ ನೀನೇನು ಮಾಡಬೇಕೆಂಬುದನ್ನು ಚಿಂತಿಸು. ದುರ್ವಿನೀತನೂ, ದುರಾಚಾರಿಯೂ ಆದ ದುರ್ಯೋಧನನ ಕೈಯಲ್ಲಿ ರಾಜದಂಡವನ್ನೊಪ್ಪಿಸುವುದರಿಂದ ಅಧರ್ಮಕ್ಕೆ ಆಹ್ವಾನ ಕೊಟ್ಟಂತಾಗುವುದು. ನರಕವನ್ನು ಕೈ ಬೀಸಿ ಕರೆದಂತಾಗುವುದು. ಆದರೆ ಈ ಕುರುವೃದ್ಧರ ಮತ್ತು ಶ್ರೀ ಕೃಷ್ಣನ ಮಾತಿನಂತೆ ನಡೆಯು ವುದರಿಂದ ಧರ್ಮದ ಉದ್ಧಾರವಾಗುವುದು, ಸ್ವರ್ಗದ ದಾರಿಯು ನಿರಾಪದವಾಗುವುದು. (ದುರ್ಯೋಧನನು ಬರುವನು)

ದುರ್ಯೋಧನ : ಯಾರು ನನ್ನನ್ನು ಕರೆದವರು ?

ಗಾಂಧಾರಿ : ನಾನು ಪುತ್ರ (ದುರ್ಯೋಧನನು ಅಸಹನೆಯಿಂದ ಮುಖವನ್ನು ತಿರುಗಿಸುವನು) ಏಕೆ ? ನನ್ನ ಮಾತನ್ನು ಕೇಳುವ ಇಷ್ಟವಿಲ್ಲವೋ ? ನಾನು ನಿನ್ನ ತಾಯಿ. ಅಗಣ್ಯ ವ್ರತೋಪಾಸಗಳನ್ನು ಮಾಡಿ ನಿನ್ನನ್ನು ಪಡೆದಿರುವೆನು. ಎದೆಯ ರಕ್ತವನ್ನು ಬಸಿದು ನಿನ್ನನ್ನು ಸಲಹಿರುವೆನು. ನಿನ್ನ ಕಲ್ಯಾಣವೇ ದೇವರಲ್ಲಿ ನನ್ನ ಏಕಮಾತ್ರ ಭಿಕ್ಷೆ. ಬಾಲ್ಯದಲ್ಲಿ ನಿನ್ನ ಕಣ್ಣುಗಳಿಂದೊಂದು ತೊಟ್ಟು ನೀರು ಬಿದ್ದರೂ ನನ್ನ ದೇಹದ ರಕ್ತವು ನಷ್ಟವಾದಂತೆ ಎಂದು ಭಾವಿಸುತ್ತಿದ್ದೆನು. ನಾನು ನಿನ್ನ ತಾಯಿ. ತಾಯಿಯ ಮಾತನ್ನು ನಿರಾಕರಿಸಬೇಡ, ಮಗನೇ. ಪಾಂಡವರೊಡನೆ ಸಂಧಿಗೆ ಸಮ್ಮತಿಸು ; ಯುದ್ಧದ ಚಿಂತೆಯನ್ನು ಬಿಡು. ನಿನ್ನ ಸುಖ ಸಂಪದಗಳನ್ನು ನೋಡುವ ಸಲುವಾಗಿ ಮುಚ್ಚಿರುವ ಈ ಕಣ್ಣುಗಳಿಂದ ರಕ್ತದ ಹನಿಗಳು ಸುರಿಯದಿರಲಿ. ತಾಯಿಯ ಪ್ರೇಮವು ಅತ್ಯಂತ ಪವಿತ್ರ ವಸ್ತು. ಆಕಾಶಕ್ಕೆ ಅಂತರವಿರುವುದು ! ಸಾಗರವು ಬತ್ತುವುದು ; ನಕ್ಷತ್ರ ಗಳ ಎಣಿಕೆಯಿರುವುದು ; ಆದರೆ ಮಾತೃಪ್ರೇಮವು ಅನಂತ, ಅಗಾಧ, ಅಗಣ್ಯ. ಮಾತೃಪ್ರೇಮವು ಮಾನವ ಹೃದಯದ ಕೌಸ್ತುಭರತ್ನ, ಭಾವ ನಾಸಮುದ್ರದ ಮಂಥನದಿಂದ ಹುಟ್ಟಿದ ಅಮೃತ, ಅಬೋಧ ಬಾಲಕ ನಂತೆ ಆ ರತ್ನವನ್ನು ಒಡೆಯಬೇಡ, ಪುತ್ರ. ಪಾನಪ್ರಮತ್ತನಾದ ಪಾಷಂ ಡನಂತೆ ಆ ಅಮೃತವನ್ನು ಭೂಮಿಯಲ್ಲಿ ಚೆಲ್ಲಬೇಡ. ನನ್ನ ಮಾತನ್ನು ನಡೆಸಿಕೊಡು. ಚತುರ್ದಶ ಭುವನಗಳಲ್ಲಿ ಹುಡುಕಿದರೂ ತಾಯಿಯಂತಹ ಬಂಧುವು, ಹಿತೈಷಿಯು, ಸ್ನೇಹಿತೆಯು ಮತ್ತಾರೂ ದೊರಕುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ನಿನ್ನ ಹಿತಕ್ಕಾಗಿ ಹೇಳುವೆನು ; ಪಾಂಡವರಲ್ಲಿ ದ್ವೇಷವನ್ನು ಬಿಟ್ಟು ಅರ್ಧ ರಾಜ್ಯವನ್ನು ಅವರಿಗೆ ಕೊಡು. ಅವರೊಡನೆ ಸಮಾನ ಭಾವದಿಂದ ಭೂಮಿಯನ್ನಾಳು.

ದುರ್ಯೋಧನ : ಪುನಃ ಅದೇ ಮಾತು. ನಿನ್ನ ಪುತ್ರನಾಗಿ ನಾನು ಕ್ಷತ್ರಿಯ ಧರ್ಮವನ್ನು ತ್ಯಜಿಸಲೇ ? ಇಲ್ಲ; ಇಲ್ಲ. ಜಗತ್ತೆಲ್ಲವೂ ಪ್ರತಿಭಟಿಸಿದರೂ ದುರ್ಯೋಧನನು ಧರ್ಮಚ್ಯುತನಾಗುವುದಿಲ್ಲ. ಯುದ್ಧವು ಕ್ಷತ್ರಿಯನ ಧರ್ಮ ! ರಾಜ್ಯವನ್ನು ಅಪೇಕ್ಷಿಸುವವರು ಯುದ್ಧ ಮಾಡಿ ಅದನ್ನು ಪಡೆಯಲಿ....ವಾಸುದೇವ, ಇದೆನ್ನ ಕೊನೆಯ ಸಂದೇಶ–ನಾವು ಸಮರ ಯಜ್ಞದಲ್ಲಿ ದೀಕ್ಷಿತರು. ಪಾಂಡವರು ನಮ್ಮೊಡನೆ ಸಂಧಿಯನ್ನಪೇಕ್ಷಿಸು ವುದಾದರೆ ಅದು ದೊರಕುವುದು ರಣಕಹಳೆದಲ್ಲಿ, ಶಸ್ತ್ರಾಸ್ತ್ರಗಳ ಆಸ್ಫಾಲನ ದಲ್ಲಿ, ರಥಿಕರ ವೀರಘೋಷದಲ್ಲಿ, ತಿಳಿದಿರು, ನನಗಿನ್ನು ಸಮಯವಿಲ್ಲ.

(ದರ್ಪದಿಂದ ಹೋಗುವನು)

ಗಾಂಧಾರಿ : ಸಮಯವಿಲ್ಲ ! ಅಧರ್ಮ ಸುರೆಯಿಂದ ಉನ್ಮತ್ತನಾದವನಿಗೆ ಧರ್ಮಾಚರಣೆಗೆ ಸಮಯವೆಲ್ಲಿಯದು ? ಹಸಿದ ಬೇಟೆಯ ನಾಯಿಯಂತೆ ಮೃತ್ಯುವು ಬೆನ್ನಟ್ಟಿ ಬರುತ್ತಿರುವಾಗ ಮನುಷ್ಯನಿಗೆ ಸಮಯವೆಲ್ಲಿ ಯದು ? ಹತಭಾಗ್ಯ ಕುಮಾರ, ಇಷ್ಟೊಂದು ಅಸಹನೆಯಿಂದ ಕೂಡಿ ದವನಾಗಿ ಈ ಅಖಂಡ ಸಾಮ್ರಾಜ್ಯವನ್ನು ಆಳುವೆಯಾ ? ಅದು ಸಾಧ್ಯವಲ್ಲ ಪುತ್ರ. ನೀನು ನಾಶವನ್ನು ಹೊಂದುವೆ ! ಸಂಗಡ ಕುರು ಕುಲವೂ ನಾಶವಾಗುವುದು. ನಿನ್ನೀ ವೃದ್ಧ ಅಂಧ ಪಿತನು ಶೋಕ ಸಾಗರದಲ್ಲಿ ಮುಳುಗುವನು. ನಾನು ಮಾತ್ರ ಅನನ್ಯಗತಿಕಳಾಗಿ, ನೀರವ ವಾಗಿ ಅಳುತ್ತಾ ಆ ವಿಷಾದಮಯ ದೃಶ್ಯವನ್ನು ನೋಡಬೇಕಾಗುವುದು. ಹಾ ! ಈಶ್ವರ, ಈ ಗಾಂಧಾರಿಯ ಕಪಾಲದಲ್ಲಿ ಎಂತಹ ಕರುಣ ಕಥೆಯನ್ನು ಬರೆದೆ ! (ವೇಗದಿಂದ ವಿದುರನು ಬರುವನು)

ವಿದುರ : ಅನರ್ಥವಾಯಿತು ! ಅನರ್ಥವಾಯಿತು ! ವಾಸುದೇವ, ಆ ದುರಾತ್ಮರು ನಿನ್ನನ್ನು ಬಂಧಿಸಲು ತಂತ್ರ ಹೂಡಿರುವರು.

ಕೃಷ್ಣ : ಅಸಂಭವ ! ನಾನು ದೂತನು. ದೂತನನ್ನು ಬಂಧಿಸುವುದು ರಾಜ ನೀತಿಗೆ ವಿರುದ್ಧ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಂಧಾರಿ : ದುರ್ಯೋಧನನ ದರ್ಪವು ಇಷ್ಟೊಂದು ಮಿತಿಮೀರಿತೆ! ರಾಜೇಂದ್ರ, ಈಗಲಾದರೂ ಏಳು. ಲಜ್ಜಾಸ್ಪದವಾದ ಈ ತಾಟಸ್ಥ್ಯವನ್ನು ತ್ಯಜಿಸು. ದುರ್ಯೋಧನನನ್ನು ತ್ಯಾಗಮಾಡಿರುವುದಾಗಿ ರಾಜ್ಯದಲ್ಲೆಲ್ಲಾ ಉದ್ಘೋಷಿಸಲ್ಪಡಲಿ. ಕುಮಾರನೆಂಬ ಮೋಹವನ್ನು ಬಿಟ್ಟು ನಿನ್ನ ರಾಜಸತ್ತೆಯಿಂದ ಅವನನ್ನು ಬಂಧಿಸಿ, ಅವನಿಗೆ ತಕ್ಕಶಾಸ್ತಿಯನ್ನು ಮಾಡು.

[ಧೃತರಾಷ್ಟ್ರನು ಅಸಹನೆಯನ್ನು ವ್ಯಕ್ತಪಡಿಸುವನು. ಗಾಂಧಾರಿಯು ಮತ್ತಷ್ಟು ಉತ್ತೇಜಿತಳಾಗಿ ಕೃಷ್ಣನ ಕಡೆ ತಿರುಗಿ]

ಗಾಂಧಾರಿ : ವಾಸುದೇವ, ಕೈಜೋಡಿಸಿ ಬೇಡುವೆನು. ನೀನಿಲ್ಲಿಂದ ಕೂಡಲೇ ಹೊರಟುಹೋಗು. ಸಜ್ಜನರಿಂದ ಪರಿತ್ಯಕ್ತವಾದ, ದೇವರನ್ನು ಮರೆತ, ಈ ಪಾಪಮಯವಾದ ರಾಜಸಭೆಯಲ್ಲಿ ಒಂದು ಕ್ಷಣವೂ ನಿಲ್ಲಬೇಡ.

ಕೃಷ್ಣ : ದುರ್ಯೋಧನನಿಗೆ ಹೆದರಿ ನಾನಿಲ್ಲಿಂದ ಪಲಾಯನ ಮಾಡಲೇ? ಇಲ್ಲ. ಅದೆಂದಿಗೂ ಆಗತಕ್ಕ ಮಾತಲ್ಲ. ಕಂಸ ಶಿಶುಪಾಲಾದಿ ದಾನವರನ್ನು ಲೀಲಾಮಾತ್ರದಿಂದ ಸಂಹರಿಸಿದ ಕೃಷ್ಣನು ದರ್ಪಾಂಧನಾದ ಒಬ್ಬ ಸಾಮಾನ್ಯ ಮನುಷ್ಯನಿಗೆ ಹೆದರುವುದೇ! ರಾಜಮಹಿಷಿ, ಈ ಚಕ್ರದಲ್ಲೆಷ್ಟೊಂದು ಶಕ್ತಿಯಿದೆಯೆಂಬುದನ್ನು ನೀನರಿತಿರುವೆ. ಇದರ ಒಂದಲ್ಪ ಆವರ್ತದಿಂದ ಜಗತ್ತಿನ ಪ್ರಳಯವು ಪ್ರಾರಂಭವಾಗುವುದು. ಆಕಾಶದ ಗ್ರಹತಾರಕ ಸಮೂಹವು ಮಕ್ಕಳ ತಿರುಗುಕಲ್ಲಿನಂತೆ ಕುಣಿಯತೊಡಗುವುವು. ಕೋಟಿಕೋಟಿ ದುರ್ಯೋಧನರು ಗತಪ್ರಾಣರಾಗಿ ಮಣ್ಣಿನಲ್ಲಿ ಉರುಳಾಡುವರು. ಇಂತಹ ನಾನು, ಈ ಒಬ್ಬ ದುರ್ಯೋಧನನಿಗೆ ಭೀತನಾಗಲೇ?

ಗಾಂಧಾರಿ : ಭಯವಲ್ಲ, ಪ್ರಭು. ದಾನವ ವಿಜಯೀ ಯದುಪತಿಗೆ ಶತ್ರುಗಳ ಭಯವೇ! ಜಗದ್ರಕ್ಷಕನಿಗೆ ಪರಪಕ್ಷದ ಪರಾಜಯವೇ! ಗದಾಚಕ್ರಪಾಣಿಗೆ ವಿರೋಧಿಗಳ ಚಿಂತೆಯೇ! ಭಯಕ್ಕಾಗಿ ಹೇಳುತ್ತಿಲ್ಲ ವಾಸುದೇವ, ಆದರೆ ನನ್ನ ಸಮ್ಮುಖದಲ್ಲಿ ನನ್ನ ಗುರುವಿನ ಅವಹೇಳನವನ್ನು ನಾನು ಹೇಗೆ ಸಹಿಸಲಿ? ಅದೂ ನನ್ನ ಕುಲಾಂಗಾರ ಪುತ್ರರ ಕೈಯಿಂದ! ಹೋಗು ಪ್ರಭು, ನೀನು ಭಕ್ತ ಪರಾಧೀನನಲ್ಲವೇ! ಭಕ್ತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾರ್ಥನೆಯನ್ನು ಮನ್ನಿಸು. ನಿನ್ನ ಈ ಚರಣಗಳನ್ನು ಮುಟ್ಟಿ ಬೇಡು ವೆನು. ಈ ಸ್ಥಾನವನ್ನು ತ್ಯಾಗಮಾಡು.

(ಮೊಣಕಾಲೂರಿ ಬೇಡುವಳು)

ಕೃಷ್ಣ : ಏಳು ತಾಯಿ, ಈ ದಿನ ನಿನ್ನ ಸಲುವಾಗಿ ಹೇಡಿಯಂತೆ ಇಲ್ಲಿಂದ ಓಡುವೆನು ; ನಾನು ಯಾವ ಮಹತ್ತರ ಆಶೋತ್ತರದಿಂದ ಇಲ್ಲಿಗೆ ಬಂದೆನೋ ಅದು ದೀಪವನ್ನು ಮುಟ್ಟಿದ ಪತಂಗದಂತೆ (ಕಂಠವು ಗದ್ಗದಿತ ವಾಗುವುದು) ಬಿರುಗಾಳಿಗೆ ಸಿಕ್ಕಿದ ಹುಲ್ಲುಕಡ್ಡಿಯಂತೆ, ಕ್ಷಣಮಾತ್ರದಲ್ಲಿ ನಷ್ಟವಾಯಿತು. ದುರ್ಯೋಧನನನ್ನು ಪ್ರಿಯಬಂಧುವಿನಂತೆ ಆಲಂಗಿಸಲು ಬಂದೆನು. ಆದರವನ ಔದ್ಧತ್ಯವು ನನ್ನ ಗೆಳೆತನದ ವರದ ಹಸ್ತವನ್ನು ವೈರಿಯ ವಜ್ರಮುಷ್ಟಿಯನ್ನಾಗಿ ಮಾರ್ಪಡಿಸಿತು. ಈ ರಾಜಸಭೆಯ ಅಶಾಂತ ವಾತಾವರಣದಿಂದ, ನನ್ನ ಹೃದಯದ ಶಾಂತಿ ಕಪೋತವು ರೆಕ್ಕೆ ಗಳು ಹುಟ್ಟಿಹಾರುವ ಮೊದಲೇ ದುರ್ಮರಣಕ್ಕೀಡಾಯಿತು. ಆಶೆಯಿಂದ ಬಂದು ನಿರಾಶನಾಗಿ ಹಿಂತಿರುಗುವೆನು. ಆದರೂ ಚಿಂತೆಯಿಲ್ಲ. ರಾಜ ಮಹಿಷಿ, ಇಂದು ನಿನ್ನ ಸಲುವಾಗಿ ಇಲ್ಲಿಂದ ಪಲಾಯನ ಮಾಡುವೆನು.

(ಪ್ರವೇಶ : ದುರ್ಯೋಧನ, ದುಶ್ಶಾಸನ, ಶಕುನಿ)

ದುರ್ಯೋಧನ : ಇನ್ನೆಲ್ಲಿ ಪಲಾಯನ ಮಾಡುವುದು ! ನಿಲ್ಲು, ವಂಚಕ ! ಹಗ್ಗಗಳಿಂದ ಕೃಷ್ಣನನ್ನು ಬಂಧಿಸಿರಿ.

ಶಕುನಿ, ದುಶ್ಶಾಸನ : ಬಂಧಿಸಿರಿ, ಬಂಧಿಸಿರಿ.

ಕೃಷ್ಣ : (ಮಂದಹಾಸದಿಂದ) ನನ್ನನ್ನು ಬಂಧಿಸುವೆಯ, ದುರ್ಯೋಧನ ? ಬಟ್ಟೆಯಿಂದ ಬೆಂಕಿಯನ್ನು, ಬೀಸಣಿಗೆಯಿಂದ ಗಾಳಿಯನ್ನು, ಮರಳಿ ನಿಂದ ಸಾಗರವನ್ನು ಪ್ರತಿಬಂಧಿಸಲಿಚ್ಛಿಸುವೆಯ ? ವ್ಯರ್ಥ, ನಿನ್ನಿಂದ ಆಗುವುದಿಲ್ಲ.

ದುರ್ಯೋಧನ : ಕೃಷ್ಣ, ಈ ಬೆದರಿಕೆಯ ಮಾತುಗಳಿಂದ ಫಲವಿಲ್ಲ. ಕಟ್ಟಿರಿ ಬೇಗ.

ಗಾಂಧಾರಿ : ನಿಲ್ಲು, ದುರ್ಯೋಧನ. ಯಾರಿಗೆ ಸಾಧ್ಯ ಕೃಷ್ಣನನ್ನು ಬಂಧಿ ಸಲು ? [illegible] ಭೂಮಂಡಲವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತಲೆಯ ಮೇಲೆತ್ತಲು ಪ್ರಯತ್ನಿಸಿದಂತೆ, ನಿನ್ನ ಸರ್ವನಾಶಕ್ಕೆ ನೀನೇ ಕಾರಣನಾಗುವೆ.

ದುರ್ಯೋಧನ : ಹಿಡಿಯಿರಿ, ಹಿಡಿಯಿರಿ. ಎಲ್ಲಿ ಪಾಶಗಳು ?

ಕೃಷ್ಣ : ಈಗ ಕಟ್ಟಿರಿ ನನ್ನನ್ನು.

[ರಾಜಸಭೆಯಲ್ಲೆಲ್ಲಾ ಕೃಷ್ಣನ ಮೂರ್ತಿಗಳು ಉದ್ಭವವಾಗುವುವು]

ದುರ್ಯೋಧನ : ಮಾಯೆ ! ಮಾಯೆ ! ಖಡ್ಗವನ್ನೊರೆಗಳಚು ದುಶ್ಶಾಸನ, ಈ ದುಷ್ಟನನ್ನು ಸಂಹರಿಸುವೆನು.

ದುಶ್ಶಾಸನ : ಇಲ್ಲಿ ! ಅಲ್ಲಿ ! ಎಲ್ಲೆಲ್ಲಿಯೂ ಕೃಷ್ಣನೆ; ಎಲ್ಲ ದಿಕ್ಕುಗಳಲ್ಲಿಯೂ ಕತ್ತಿಯನ್ನು ತಿರುಗಿಸು, ಅಣ್ಣ.

[ಕತ್ತಿಗಳನ್ನು ತಿರುಗಿಸುತ್ತಾ ಇಬ್ಬರೂ ಮೂರ್ಛಿತರಾಗಿ ಬೀಳುವರು]

ಗಾಂಧಾರಿ : (ಕಣ್ಣು ಕಟ್ಟುಗಳನ್ನು ಬಿಚ್ಚಿ ನೋಡಿ, ಆವೇಶದಿಂದ) ಪ್ರಭು ಶಾಂತನಾಗು, ಶಾಂತನಾಗು. ನಿನ್ನ ಕೋಪದಿಂದ ಕೌರವರು ಮಾತ್ರ ವಲ್ಲ, ಜಗತ್ತೂ ನಾಶಹೊಂದುವುದು. ನಿನ್ನ ತುಟಿಗಳಲ್ಲಿ ಹಿಂಸೆ ! ಭ್ರುಕುಟಿ ಯಲ್ಲಿ ಪ್ರಳಯ ನರ್ತನ ! ನಿನ್ನ ಹಸ್ತದಿಂದ ಸಹಸ್ರಾಧಿಕ ಭೂಕಂಪ, ಶಿಲೋಚ್ಛ್ವಾಸಗಳು ಹೊರಬೀಳುತ್ತಿರುವುವು. ವಾಸುದೇವ ! ಕರುಣಾ ನಿಧಿ ! ನನ್ನ ಅಭಾಗ್ಯ ಪುತ್ರರು ಇಷ್ಟೊಂದು ಆಕ್ರಮಣವನ್ನು ಹೇಗೆ ಸಹಿಸಬಲ್ಲರು ! ಪ್ರಭು, ಶಾಂತನಾಗು ! ಶಾಂತನಾಗು ! ಚಿರನೂತನ ವಾದ ನಿನ್ನ ಸುಂದರ ಸೌಮ್ಯಮೂರ್ತಿಯನ್ನು ಪುನಃ ಧಾರಣಮಾಡು.

[ವಂದಿಸುವಳು]

[ಕೃಷ್ಣನು ಹಿಂದಿನಂತೆ ಸೌಮ್ಯಾಕಾರವನ್ನು ತಾಳುವನು]

ದೃಶ್ಯ ೪

[ಕೌರವರ ರಾಜಪ್ರಾಸಾದ. ಕರ್ಣನೂ ಶಕುನಿಯೂ ಮಾತಾಡುತ್ತಾ ಪ್ರವೇಶಿಸುವರು]

ಕರ್ಣ : ಇದು ನಿಜವೇ ? ನಾನು ನಂಬುವುದಿಲ್ಲ.

ಶಕುನಿ : ನಂಬು, ಅಂಗರಾಜ. ಕರ್ಣನ ಉದಾರ ಹೃದಯವನ್ನು ತಿಳಿದ ಕೌರವರು ನಿರ್ಭಯದಿಂದ ಈ ರೀತಿ ನಡೆಯುವುದರಲ್ಲಿ ಆಶ್ಚರ್ಯವೇನು? ದುರ್ಯೋಧನನಲ್ಲಿ ನಿನಗಿರುವ ಸ್ನೇಹ ಮತ್ತು ರಾಜಭಕ್ತಿಯ ಭರವಸೆ ಯಿಂದ ನಿನ್ನ ವಿಷಯದಲ್ಲಿ ಕುವಾಚ್ಯ ಶಬ್ದಗಳನ್ನಾಡಲೂ ಅವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಂಜರಿಯುತ್ತಿಲ್ಲ. ದುರ್ಯೋಧನನು ಇವೆಲ್ಲವನ್ನು ಕೇಳಿದರೂ ಕೇಳದವನಂತೆ ಸುಮ್ಮನಿದ್ದನು. ಕರ್ಣ, ನಿನ್ನನ್ನು ನೋಡಿದರೆ ನನಗೆಷ್ಟೊಂದು ದುಃಖ ಗೊತ್ತೆ ?

ಕರ್ಣ : ಸ್ನೇಹದಲ್ಲಿ ವಂಚನೆಯೆ ! ನಿಜವಾಗಿ ನನ್ನ ರಕ್ತವು ಕುದಿಯುತ್ತಿರುವುದು. ಶಕುನಿ, ಏನು ನಡೆಯಿತು ? ಮರೆಮಾಚದೆ ಹೇಳು.

ಶಕುನಿ : ಕೃಷ್ಣನು ರಾಜಸಭೆಯಿಂದ ಹೊರಗೆ ಹೋದಕೂಡಲೇ ಮೂರ್ಛಿತನಾಗಿದ್ದ ದುರ್ಯೋಧನನು ಎಚ್ಚೆತ್ತನು. ಅವನಾಗ ಹಸಿದ ಹೆಬ್ಬುಲಿಯಂತೆ ಆರ್ಭಟಿಸುತ್ತಾ, ಕ್ರೋಧದಿಂದ ಬುದ್ಧಿಹೋದವನಾಗಿ, ಭೀಷ್ಮದ್ರೋಣಾದಿಗಳನ್ನು ಪಾಂಡವಪಕ್ಷದವರೆಂದು ನಿಂದಿಸಿದನು. ಕಡೆಗೆ ಪಾಂಡವರೊಡನೆ ಯುದ್ಧಕ್ಕೆ ಸಿದ್ಧರಾಗುವಂತೆ ಸಮಸ್ತ ಸಾಮಂತರಿಗೂ ಆಜ್ಞೆ ಮಾಡಿದನು. ಮತ್ತು ಕರ್ಣನಿಗೆ ಸೇನಾಧಿಪತ್ಯವನ್ನು ಕಟ್ಟಬೇಕೆಂಬ ತನ್ನಿಚ್ಛೆಯನ್ನು ಪ್ರಕಟವಾಗಿ ಹೇಳಿದನು. ಎಲ್ಲವೂ ನಿಶ್ಚಿತವಾದಂತೆಯೇ. ಆಗ ಭೀಷ್ಮನು.........

ಕರ್ಣ : ಕುರುಪಿತಾಮಹನೇನು ಹೇಳಿದನು ?

ಶಕುನಿ : ಅಸೂಯೆಯಿಂದ ಭೀಷ್ಮನು ಆ ರೀತಿ ಹೇಳಿರಲಾರ. ಆದರಾತನ ಮಾತಿನಿಂದ ನಿನ್ನ ಸೇನಾಧಿಪತ್ಯದ ಆಸೆಯು ಭಂಗವಾಯಿತು.

ಕರ್ಣ : ನಾನು ಯಾವಾಗಲೂ ಸೇನಾಧಿಪತ್ಯಕ್ಕೆ ಆಶಿಸಿದವನಲ್ಲ. ಆದರೆ ದುರ್ಯೋಧನನಿಗೆ ನನ್ನಲ್ಲಿದ್ದ ವಿಶ್ವಾಸವನ್ನು ಚಲಿಸುವಂತೆ ಮಾಡಿದವರಾರು ?

ಶಕುನಿ : ನೀನು ರಥವನ್ನೇರಿ ಕೃಷ್ಣನೊಡನೆ ಹೋದೆಯಷ್ಟೆ. ಭೀಷ್ಮನು ಆ ಸಂಗತಿಯನ್ನು ದುರ್ಯೋಧನನಿಗೆ ತಿಳಿಸಿದಂತಿದೆ. ತಂತ್ರಿಯಾದ ಕೃಷ್ಣನ ಸವಿನುಡಿಗಳಿಗೆ ನೀನು ವಶನಾದೆಯೋ ಏನೋ ಎಂದು ದುರ್ಯೋಧನನ ಸಂದೇಹ.

ಕರ್ಣ : ಸಂದೇಹ ! ಕುರುಕುಲದರಸರು ಕರ್ಣನ ಸ್ವಾಮಿನಿಷ್ಠೆಯನ್ನು ತಿಳಿದಿಲ್ಲವೇ ?

ಶಕುನಿ : ತಿಳಿದಿರುವರು ; ಆದರೇನು ? ನಿನಗೂ ಕೃಷ್ಣನಿಗೂ ನಡೆದ ಮಾತಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ರಹಸ್ಯವನ್ನು ತಿಳಿದ ಹೊರತು, ಸೇನಾಧಿಪತ್ಯವನ್ನು ನಿನಗೆ ಕೊಡಕೂಡದೆಂದು ನಿರ್ಧಾರವಾಯಿತು.

ಕರ್ಣ : ಇದಕ್ಕೆ ಕಾರಣನು ಭೀಷ್ಮ ?

ಶಕುನಿ : ಯಾರಾದರೂ ಆಗಲಿ, ಸಭೆಯಲ್ಲಿ ಕೆಲವರು ನಿನ್ನನ್ನು ತುಚ್ಛೀಕರಿಸಿ ಮಾತನಾಡಲು ಹಿಂಜರಿಯಲಿಲ್ಲ.

ಕರ್ಣ : ಏನು ಹೇಳಿದರು ಅವರು ?

ಶಕುನಿ : ಆ ದುರ್ವಾಕ್ಯಗಳನ್ನು ನಾನು ನುಡಿಯಲಾರೆ. ಆದರೆ ಯತ್ನವಿಲ್ಲ. ಸೂತಕುಲದಲ್ಲಿ ಹುಟ್ಟಿದ ನೀಚನಿಗೆ ಸ್ವಾಮಿಭಕ್ತಿಯೆಲ್ಲಿಯದು ? ಎಂದು ನಿಂದಿಸಿದರು.

ಕರ್ಣ : ಸೂತಕುಲದಲ್ಲಿ ಹುಟ್ಟಿದವರು ರಾಜಭಕ್ತರಾಗಬಾರದೆ! ವಿಧಾತನು ಮಾನವಜಾತಿಯ ಸದ್ಗುಣಗಳೆಲ್ಲವನ್ನೂ ಉಚ್ಚಕುಲದವರಿಗೆ ಮೀಸಲಾಗಿಟ್ಟನೋ ? ಶಕುನಿ. ಈ ಅಪಮಾನವನ್ನು ನಾನೆಷ್ಟು ದಿನ ಸಹಿಸಲಿ ! ಚಿಕ್ಕಂದಿನಲ್ಲಿ ಹುಡುಗರು ಸೂತಪುತ್ರನೆಂದು ನನ್ನ ಸಂಗಡ ಆಡುತ್ತಿರಲಿಲ್ಲ. ನನ್ನನ್ನು ಮುಟ್ಟುವುದೇ ದೋಷವೆಂದು ತಿಳಿದಿದ್ದರು. ನಾನು ಏಕಾಂಗಿಯಾಗಿ ಕಣ್ಣೀರು ಸುರಿಸುತ್ತಾ ಹೃದಯದ ವೇದನೆಯನ್ನು ಜಗತ್ಕರ್ತನಲ್ಲಿ ಬಿನ್ನವಿಸಿಕೊಳ್ಳುತ್ತಿದ್ದೆ : 'ಪರಮೇಶ್ವರ, ನನ್ನ ಯಾವ ಪಾಪಕ್ಕಾಗಿ ಸೂತಕುಲಕ್ಕೆ ತಳ್ಳಿದೆ' ಎಂದು. ಆ ದಿನಗಳು ಕಳೆದು ತಿಳಿವು ಮೂಡಿತು. ಜನ್ಮವು ಆಕಸ್ಮಿಕ ಘಟನೆ, ಗುಣವೇ ಮಾನವನ ಸರ್ವಸ್ವವೆಂದು ತಿಳಿದೆ. ನನ್ನ ಮಾನಾಪಮಾನಗಳು ಗುಣವನ್ನವಲಂಬಿಸಿದೆಯೆಂದೂ, ಕುಲವನ್ನಲ್ಲವೆಂದೂ ನಿಶ್ಚೈಸಿದೆ. ಆತ್ಮಶಕ್ತಿಯಿಂದ, ಪ್ರಯತ್ನ ವಿಶೇಷದಿಂದ, ದೈವಬಲದಿಂದ, ರಾಜಾಸ್ಥಾನದ ಸ್ಥಾನಮಾನಗಳು ನನಗೆ ದೊರೆತವು. ನಾಸಿಂದು ಅಂಗದೇಶದ ಅರಸ, ಕುರುಸಾಮ್ರಾಜ್ಯದ ಮಾಂಡಳಿಕ. ಈಗಲೂ ಈ ಜನ್ಮದ ದುಷ್ಟಭೂತ ನನ್ನನ್ನು ಬಿಟ್ಟಿಲ್ಲ, ಪ್ರತಿಷ್ಠಾಪರರಾದ ಆರ್ಯರು ಈ ಸಂಕಲ್ಪಿತ ಮರ್ಯಾದೆಯನ್ನು ಹೊರದೂಡದ ಹೊರತು ಭಾರತಕ್ಕೆ ನಿಸ್ತಾರವಿಲ್ಲ.

ಶಕುನಿ : ಸ್ಥಿರನಾಗು ಕರ್ಣ. ದುರ್ಯೋಧನನು ನಿನ್ನ ಅವ್ಯಾಜ ಸ್ನೇಹವನ್ನು ನಿರಾಕರಿಸಿದುದರ ಪ್ರತೀಕಾರ ನಿನ್ನ ಕೈಯಲ್ಲಿರುವುದು. ಭೀಷ್ಮನು

Sri Vidyabharathi Book Centre, Sringeri

CC-O. In Public Domain. Digitized by eGangotri

ಯುದ್ಧದಲ್ಲಿ ಪರಾಜಿತನಾಗುವವರೆಗೆ ಶಸ್ತ್ರಧಾರಣ ಮಾಡುವುದಿಲ್ಲವೆಂದು ನೀನು ಶಪಥಮಾಡು. ಕೌರವರು ತಿಳಿಯಲಿ, ಕರ್ಣನ ಅಸ್ತ್ರಕೌಶಲದ ಅಭಾವವು ಎಂತಹ ಅನರ್ಥಕಾರಿಯೆಂಬುದನ್ನು.

ಕರ್ಣ : ಎಲ್ಲರೂ ಯುದ್ಧದಲ್ಲಿ ನಿರತರಾಗಿರುವಾಗ, ಹೇಡಿಯಂತೆ ಮನೆಯಲ್ಲಿ ಕುಳಿತುಕೊಳ್ಳುವುದು ನನ್ನಿಂದಾಗದು.

ಶಕುನಿ : ಬೇರೆ ಉಪಾಯವಿಲ್ಲ, ಅಂಗಾಧಿಪತಿ. ಯುದ್ಧಕ್ಷೇತ್ರದಲ್ಲಿ ಸ್ವಪಕ್ಷದಿಂದ ಅಪಮಾನಿತನಾಗುವ ಇಚ್ಛೆಯಿದ್ದರೆ ಅಸ್ತ್ರಧಾರಣ ಮಾಡು. ಏಕೆಂದರೆ ದ್ರೋಣ ಶಲ್ಯಾದಿಗಳು ನಿನಗೆ ಇದಕ್ಕಿಂತ ಹೆಚ್ಚಿನ ಅಪಮಾನ ಮಾಡಲು ಯೋಚಿಸಿರುವಂತಿದೆ. ಗುರು ಜನರ ಮೇಲಿನ ಭಕ್ತಿಯಿಂದ ದುರ್ಯೋಧನನೂ ಈ ವಿಷಯದಲ್ಲಿ ತಾಟಸ್ಥ್ಯಭಾವವನ್ನು ವಹಿಸುವನು.

ಕರ್ಣ : ದುರ್ಯೋಧನನಲ್ಲಿ ಇಂತಹ ಪರಿವರ್ತನೆಯಾದ ಮೇಲೆ ನಾನು ಯಾರಿಗೋಸ್ಕರ ಯುದ್ಧಮಾಡಲಿ. ಸರಿಯಾಗಿ ಹೇಳಿದೆ, ಶಕುನಿ. ಭೀಷ್ಮನು ಪರಾಜಿತನಾಗುವವರೆಗೆ ನಾನು ಅಸ್ತ್ರಗಳನ್ನು ತೊಡುವುದಿಲ್ಲ ; ಇದೆನ್ನ ಶಪಥ. (ದುರ್ಯೋಧನನು ಬರುವನು)

ದುರ್ಯೋಧನ : ಶಪಥವೇನು, ಪ್ರಾಣಸಖ ! ನಾನು ನಿನಗಾಗಿ ಎಲ್ಲೆಲ್ಲಿಯೂ ಹುಡುಕಿದೆನು. ಬಂದು ಎಷ್ಟು ಹೊತ್ತಾಯಿತು ?

ಕರ್ಣ : ಬಹಳ ಹೊತ್ತಾಗಲಿಲ್ಲ, ಕುರುರಾಜ. ಆದರೆ ಒಂದು ಕ್ಷಣವೂ ಇಲ್ಲಿ ನಿಲ್ಲುವ ಪ್ರವೃತ್ತಿಯಿಲ್ಲ. ಪುನಃ ನೋಡುವೆನು. ಆಗ ಶಪಥವೇನೆಂದು ತಿಳಿಯುವೆ. (ಹೊರಡುವನು)

ದುರ್ಯೋಧನ : ನಿಲ್ಲು, ಕರ್ಣ. ನಿನಗೊಂದು ಸಂತೋಷದ ಸುದ್ದಿಯಿರುವುದು.

ಕರ್ಣ : ಕ್ಷಮಿಸು, ಮಿತ್ರ. ಆರ್ಯರ ಮಧ್ಯೆ ಪದದಳಿತರಾಗಿ ಪಶುಗಳಂತೆ ಜೀವಿಸುವ ಸೂತಕುಲದವರಿಗೆ ಸಂತೋಷದ ಸುದ್ಧಿಯೆಲ್ಲಿಯದು ?

(ಹೋಗುವನು)

ದುರ್ಯೋಧನ : ಇದೇನು ಶಕುನಿ, ಈ ದಿನ ಕರ್ಣನ ರೀತಿಯೇ ಬೇರೆಯಾಗಿದೆ. ಬಹಳ ಯೋಚಿಸಿ, ಕೊನೆಗೆ ಕರ್ಣನನ್ನು ಸೇನಾಧ್ಯಕ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನಾಗಿ ಮಾಡಬೇಕೆಂದು ನಿರ್ಧರಿಸಿದೆನು. ಅದನ್ನು ತಿಳಿಸುವುದಕ್ಕಾಗಿಯೇ ನಾನಿಲ್ಲಿಗೆ ಬಂದದ್ದು.

ಶಕುನಿ : ಕರ್ಣನಿಗೆ ಸೇನಾಧಿಪತ್ಯ ! ಇದೇನು ಪರಿಹಾಸವೇ ಕೌರವೇಶ್ವರ ?

ದುರ್ಯೋಧನ : ಅದೇಕೆ ? ಕರ್ಣನು ವೀರಪುರುಷನಲ್ಲವೇ ?

ಶಕುನಿ : ಇರಬಹುದು. ಆದರವನನ್ನು ಸೇನಾಧಿಪತಿಯನ್ನಾಗಿ ಮಾಡುವುದರಿಂದ ಎಷ್ಟು ಜನರ ಅಪಮಾನವಾಗುವುದೆಂದು ಯೋಚಿಸಿದೆಯಾ ? ಭಾರ್ಗವ ವಿಜಯಿಯಾದ ಭೀಷ್ಮ, ಶಸ್ತ್ರಾಚಾರ್ಯನಾದ ದ್ರೋಣ, ಅಶ್ವತ್ಥಾಮ, ಶಲ್ಯ, ಕೃತವರ್ಮ ಇವರೇ ಮುಂತಾದ ಉತ್ತಮವರ್ಣದ ಮಹಾರಥಿಕರನ್ನು ಬಿಟ್ಟು ಸೂತಕುಲದ ಕರ್ಣನಿಗೆ ಸೇನಾಧಿಪತ್ಯವೇ ? ಕುಲ ಮರ್ಯಾದೆಯನ್ನು ಧಿಕ್ಕರಿಸುವುದರಿಂದ ನಿಜವಾಗಿ ಅನರ್ಥವಾಗುವುದೆಂಬುದನ್ನು ಮರೆಯಬೇಡ. ಭೀಷ್ಮ, ದ್ರೋಣರು ಅಂತರಂಗದಲ್ಲಿ ಪಾಂಡವರ ಪಕ್ಷಪಾತಿಗಳು. ಇವರು ಅಸಮಾಧಾನಗೊಂಡರೆ ನಿನ್ನನ್ನು ತ್ಯಜಿಸಲು ಕೂಡ ಹಿಂತೆಗೆಯುವುದಿಲ್ಲ. ಅಲ್ಲದೆ, ಭೀಷ್ಮನು ಪರಾಜಿತನಾಗುವವರೆಗೆ ತಾನು ಅಸ್ತ್ರಧಾರಣ ಮಾಡುವುದಿಲ್ಲವೆಂದು ಕರ್ಣನು ನಿಷ್ಕಾರಣವಾಗಿ ಇದೀಗ ಶಪಥಮಾಡಿದನು. ಈಗ ನೀನವನಿಗೆ ಸೇನಾಧಿಪತ್ಯವನ್ನೊಪ್ಪಿಸಿದರೆ, ಶಪಥವನ್ನು ಮೀರಿ ಅವನದನ್ನು ನಿರ್ವಹಿಸುವಂತಿಲ್ಲ. ಭೀಷ್ಮಾದಿಗಳು ಕೋಪಗೊಳ್ಳುವರು. ಆದುದರಿಂದ ನಿಧಾನದಿಂದ ಯೋಚಿಸು, ಕುರುರಾಜ.

ದುರ್ಯೋಧನ : ನಿಜ, ಶಕುನಿ. ಹಾಗಾದರೆ ಈಗೇನು ಮಾಡುವುದು ?

ಶಕುನಿ : ಸೇನಾಧಿಪತ್ಯವನ್ನು ಅಂಗೀಕರಿಸುವಂತೆ ಭೀಷ್ಮನನ್ನು ಪ್ರಾರ್ಥಿಸು. ಯುದ್ಧವು ಸನ್ನಿಹಿತವಾಗಿದೆ. ಈಗ ಚಿಂತಿಸುವ ಸಮಯವಿಲ್ಲ. ಈಗಲೇ ಹೋಗಿ ಕುರುಪಿತಾಮಹನನ್ನು ನೋಡು.

ದುರ್ಯೋಧನ : ಹಾಗೆಯೇ ಮಾಡುವೆನು. ನೀನೂ ನನ್ನ ಸಂಗಡ ಬಾ, ಶಕುನಿ. (ಇಬ್ಬರೂ ಹೋಗುವರು)

ದೃಶ್ಯ ೫ : ಪಾಂಡವರ ಶಿಬಿರ

[ದ್ರೌಪದಿ ಚಿಂತಿಸುತ್ತಾ ಪ್ರವೇಶಿಸುವಳು]

ದ್ರೌಪದಿ : ಹೇ ಕೃಷ್ಣ ! ದೀನದಯಾನಿಧೇ ! ವಾಸುದೇವ ! ನಿನ್ನ ಹೊರ

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಗಿ ನನಗೆ ಬೇರೆ ಗತಿ ಯಾರು ? ಆತ್ಮೀಯ ಸಜ್ಜನರಿಂದ ಪರಿತ್ಯಜಿಸಲ್ಪಟ್ಟೆನು, ನನ್ನ ಕೈ ಹಿಡಿದ ಪತಿಗಳು ಭೋಗ್ಯವಸ್ತುವಿನಂತೆ ನನ್ನನ್ನು ದ್ಯೂತದಲ್ಲಿ ಪಣವಾಗಿಟ್ಟು ಸೋತರು. ಹಸ್ತಿನಾವತಿಯ ರಾಜಸಭೆಯಲ್ಲಿ ಸರ್ವರ ಸಮಕ್ಷಮ ದುಶ್ಶಾಸನನಿಂದ ಅಪಮಾನಿತಳಾದೆನು. ರಾಜನಗರವನ್ನು ತ್ಯಾಗಮಾಡಿ ಅನಾಥ ಭಿಕ್ಷುಕಿಯಂತೆ ಕಾಡಿಂದ ಕಾಡಿಗೆ ಅಲೆದುದಾಯಿತು. ಕದ್ದ ಕಳ್ಳನಂತೆ ತಲೆಮರೆಸಿಕೊಂಡು ಕೀಚಕನ ಭಂಗವನ್ನು ಸಹಿಸಿದೆನು. ಇನ್ನು ನನ್ನ ಕಷ್ಟಗಳು ಕಳೆದುವೆಂದೂ ಕೊನೆಗೆರಡು ದಿನಗಳಾದರೂ ಸುಖವಾಗಿರುವೆನೆಂದೂ ಭಾವಿಸಿದರೆ ಹೆಜ್ಜೆಹೆಜ್ಜೆಗೂ ಈ ಅಪಮಾನ ! ಛೇ! ವಿಧಾತ! ದ್ರೌಪದಿಯ ಹಣೆಯಲ್ಲಿ ಇನ್ನೂ ಏನೇನನ್ನು ಬರೆದಿರುವೆ ? (ಚಿಂತಿಸುತ್ತಾ ನಿಲ್ಲುವಳು)

(ಪ್ರವೇಶ : ಭೀಮ)

ಭೀಮ : ಪಾಂಚಾಲಿ, ಪಾಂಚಾಲಿ......... ಇವಳೇಕೆ ಈ ರೀತಿ ಚಿಂತಾಮಗ್ನಳಾಗಿರುವಳು ! ಪ್ರಿಯತಮೆ, ಏನಾಯಿತು ? ನಿಷ್ಕಾರಣವಾಗಿ ಅಳುತ್ತಿರುವೆಯೇಕೆ ? (ಸ್ಪರ್ಶಮಾಡುವನು)

ದ್ರೌಪದಿ : (ಚಮಕಿತಳಾಗಿ) ಯಾರದು ! ನಾನು ನಿಷ್ಕಾರಣವಾಗಿ ಅಳುತ್ತಿಲ್ಲ. ಪಾಂಚಾಲಿಯ ಅಳುವಿಗೆ ಒಂದಲ್ಲ ಹತ್ತು ಕಾರಣಗಳಿರುವುವು. ನೀವು ಪುರುಷರು, ಯಾರಾದರೂ ನಿಮ್ಮನ್ನು ದುರ್ವಾಕ್ಯಗಳನ್ನಾಡಿದರೆ, ಅಪಮಾನಮಾಡಿದರೆ, ನೀವೇ ಅವರಿಗೆ ಪ್ರತೀಕಾರ ಮಾಡುವಿರಿ. ಆದರೆ ಸ್ತ್ರೀಯರ ವಿಚಾರ ಹಾಗಲ್ಲ. ಅನ್ನ ವಸ್ತ್ರಗಳಿಗಾಗಿ ಅವರು ಪರರನ್ನು ಆಶ್ರಯಿಸಬೇಕು. ಆತ್ಮಗೌರವವನ್ನು ರಕ್ಷಿಸಿಕೊಳ್ಳಲೂ ಅವರಿಗೆ ಅನ್ಯರ ಆಶ್ರಯವು ಬೇಕು. ಪರಮೇಶ್ವರಾ, ಇಂತಹ ಪರಾಧೀನ ಸ್ತ್ರೀ ಜಾತಿಯನ್ನು ಏಕೆ ಸೃಷ್ಟಿಸಿದೆ ? (ರೋಧನ)

ಭೀಮ : ಅಳಬೇಡ, ಪಾಂಚಾಲಿ. ಸ್ತ್ರೀಯರ ಪರಾಧೀನತೆಯು ನಮ್ಮ ಸಮಾಜದ ನಿಯಮ. ಭಗವತ್ಸ್ವರೂಪರಾದ ಋಷಿಗಳ ಆಜ್ಞೆ.

ದ್ರೌಪದಿ : ಪತ್ನಿಯನ್ನು ದ್ಯೂತದಲ್ಲಿ ಪಣವಾಗಿಟ್ಟು ಸೋಲುವಂತೆ ಋಷಿಗಳೇ ಆಜ್ಞೆಮಾಡಿದರಲ್ಲವೇ ? ಅಯ್ಯೋ ! ಪತಿಗಳು ! ಪತಿಗಳು ! ತಪಸ್ಸು ಮಾಡಿ ಪಡೆಯಬೇಕು ಇಂತಹ ಪತಿಗಳನ್ನು !

Sri Vidyabharathi Book Centre, Sringeri

CC-O. In Public Domain. Digitized by eGangotri

ಭೀಮ : ಅಣ್ಣನ ಒಂದು ದಿನದ ಅವಿವೇಕದಿಂದ ಈ ನಿಂದೆಯು ಸಾಯುವ ವರೆಗೂ ನಮ್ಮನ್ನು ಬಿಟ್ಟದ್ದಲ್ಲ. ದ್ರೌಪದಿ, ಪ್ರಿಯತಮೆ, ಅಣ್ಣನ ಅಪರಾಧವನ್ನು ಕ್ಷಮಿಸುವಂತೆ ನಾನು ಎಷ್ಟೋ ಸಾರಿ ನಿನ್ನನ್ನು ಬೇಡಿಕೊಂಡಿಲ್ಲವೇ ? ಆದುದು ಆಗಿಹೋಯಿತು. ಅದನ್ನು ಮರೆತು ಬಿಡು. ಈ ದಿನ ನೀನೇಕೆ ಹೀಗಾಗಿರುವೆ ಅದನ್ನು ತಿಳಿಸಬಾರದೆ ?

ದ್ರೌಪದಿ : ತಿಳಿಸುವೆನು ನಾಥ, ಆದರೆ ಅದರಿಂದಾಗುವ ಫಲವೇನು ? ನೀನು ಅಣ್ಣನ ಆಜ್ಞಾಧಾರಕನು. ಅಣ್ಣನ ಆಜ್ಞೆಯು ಹೊರತು.....

ಭೀಮ : ಅದು ಹಿಂದಿನ ಮಾತು. ನಾನು ಈಗ ಯಾರ ಆಜ್ಞಾಧಾರಕನೂ ಅಲ್ಲ.

ದ್ರೌಪದಿ : ಹಾಗಾದರೆ ಕೇಳು. ಈ ದಿನ ಹಸ್ತಿನಾಂಬೆಯ ಮಂದಿರಕ್ಕೆ ದೇವಿಯ ದರ್ಶನಕ್ಕೆ ಹೋಗಿದ್ದೆ. ದುರ್ಯೋಧನನ ಪತ್ನಿಯಾದ ಭಾನುಮತಿಯೂ ಬಂದಿದ್ದಳು. ಅವಳು ನನ್ನನ್ನು ನೋಡಿ ನಕ್ಕು, "ನಿನ್ನ ಪತಿಗಳು ವಾಸಕ್ಕಾಗಿ ಐದು ಗ್ರಾಮಗಳನ್ನು ಬೇಡಲು ದೂತನನ್ನು ಆಸ್ಥಾನಕ್ಕೆ ಕಳುಹಿಸಿದ್ದರು. ಇನ್ನೇನು ಸಂಧಿಯಾಗುವುದು. ಆಗಲಾದರೂ ಈ ಬಿಚ್ಚಿದ ಕೇಶರಾಶಿಯನ್ನು ಮುಡಿಗಟ್ಟುವಿಯಷ್ಟೇ ?" ಎಂದು ಕೇಳಿದಳು.

ಭೀಮ : ದುರ್ಯೋಧನನೊಡನೆ ಪುನಃ ಸಂಧಿಗೆ ಪ್ರಯತ್ನ ! ಹಾಗಾದರೆ ನನ್ನ ಸಂದೇಹವು ನಿಶ್ಚಯವಾಯಿತು. ಯಾರು ರಾಯಭಾರಕ್ಕೆ ಹೋಗಿರುವರು ?

ದ್ರೌಪದಿ : ಶ್ರೀಕೃಷ್ಣನು.

ಭೀಮ : ಗೋಪಾಂಗನೆಯರ ವಿಲಾಸವಿಭ್ರಮಗಳಲ್ಲಿ ಮಗ್ನನಾದ ಆ ಯದು ಪತಿಯು ಯುದ್ಧವನ್ನು ಮರೆಯುವುದು ಸಹಜ. ಅರ್ಜುನನು ದ್ವಾರಕೆ ಯಿಂದ ಹಿಂದಿರುಗಿದಾಗಲೇ ಹೀಗಾಗಬಹುದೆಂದು ನಾನು ತಿಳಿದೆ. ಪಾಂಚಾಲಿ, ಭಾನುಮತಿಗೆ ನೀನೇನು ಉತ್ತರಕೊಟ್ಟೆ ?

ದ್ರೌಪದಿ : ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟೆ.

ಭೀಮ : ಏನೆಂದು ?

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ರೌಪದಿ : ನಿನ್ನ ಮುಡಿಯನ್ನು ಬಿಡಿಸುವವರೆಗೂ ನನ್ನ ಮುಡಿಯನ್ನು ಕಟ್ಟುವುದಿಲ್ಲ.....ಎಂದು.

ಭೀಮ : ಚಮತ್ಕಾರವಾದ ಉತ್ತರ. ಭಾಪು ! ಪಾಂಚಾಲಿ, ನೀನು ನಮ್ಮ ಸಂಗಡ ಕದನವಾಡುವುದರಲ್ಲಿಯೇ ನಿನ್ನ ಚತುರತೆಯನ್ನು ಮುಗಿಸಿದೆ ಯೆಂದು ತಿಳಿದಿದ್ದೆ.

ದ್ರೌಪದಿ : (ಭೀಮನ ಭುಜದ ಮೇಲೆ ಕೈಯಿಟ್ಟು ವೈಯಾರದಿಂದ) ನಾಥ ನೆನಪಿದೆಯೇ, ನೀನು ಹಿಂದೆ ಒಂದು ದಿನ ಈ ನನ್ನ ಬಿಚ್ಚಿದ ಕೇಶರಾಶಿ ಯನ್ನು ನೋಡಿ "ಕುರುಕುಲಾಂತಕ ಕಾಳರಾತ್ರಿ" ಎಂದು ಸಂಬೋಧಿ ಸಿದೆ, ಮತ್ತು ಹೇಳಿದೆ.....

ಭೀಮ : ಪುನಃ ನನ್ನ ಬಾಯಿಂದ ಆ ಪ್ರತಿಜ್ಞಾವಾಕ್ಯಗಳನ್ನು ಕೇಳಲು ಆಪೇಕ್ಷಿಸುವೆಯಲ್ಲವೆ ? ಪಾಂಚಾಲಿ, ಮಾಡಿದ ಪ್ರತಿಜ್ಞೆಯನ್ನು ಮರೆಯುವಂತಹ ಹೇಡಿಯಲ್ಲ ನಾನು.

ದ್ರೌಪದಿ : ಹೇಳುವುದು ಮಾತ್ರವಲ್ಲ. ಆಡಿದಂತೆ ಮಾಡಬೇಕೆಂದು ನನ್ನ ಇಚ್ಛೆ. ಆದರೆ ಸುಮ್ಮನೆ ಇಚ್ಛಿಸಿದರೇನಾಗುವುದು ? ನೀನು ಅಣ್ಣನ ಆಜ್ಞಾಧಾರಕನು. ಅಣ್ಣನ ಆಜ್ಞೆಯ ಹೊರತು.......

ಭೀಮ : (ಕೋಪದಿಂದ) ನನ್ನನ್ನು ಕೆರಳಿಸಬೇಡ, ಪಾಂಚಾಲಿ. ನಾನೀಗ ಯಾರ ಆಜ್ಞಾಧಾರಕನೂ ಅಲ್ಲ. ಶಾಂತಿಯನ್ನು ಬಯಸುವವರು ಸಂಧಿಯ ಪ್ರಸ್ತಾಪದಲ್ಲಿ ತೊಡಗಲಿ. ನಾನು ಯುದ್ಧವನ್ನು ಆತುರ ದಿಂದ ನಿರೀಕ್ಷಿಸುತ್ತಿದ್ದೇನೆ. ಧರ್ಮಪರಾಯಣನಾದ ಯುಧಿಷ್ಠಿರನು ದುರ್ಯೋಧನನ ಅನಂತ ಅಪರಾಧಗಳನ್ನು ಕ್ಷಮಿಸಬಹುದು. ಆದರೆ ನಾನು ಕ್ಷಮಿಸುವುದಿಲ್ಲ. (ಅರ್ಜುನ ಮತ್ತು ಯುಧಿಷ್ಠಿರನ ಪ್ರವೇಶ)

ಅರ್ಜುನ : ನೋಡು, ಅಣ್ಣ. ಆಗಲೇ ಭೀಮನು ಸಂಧಿಯ ಪ್ರಸ್ತಾಪ ವನ್ನು ತಿಳಿದು ಕೆರಳಿದ ಸಿಂಹದಂತೆ ವಿಜೃಂಭಿಸುತ್ತಿದ್ದಾನೆ. ಅವನನ್ನು ಸಮಾಧಾನ ಪಡಿಸಲು ನಿನ್ನ ಹೊರತು ಮತ್ತಾರೂ ಶಕ್ತರಲ್ಲ.

ಧರ್ಮ : ಈ ಸಾರಿ ಅವನ ಕೋಪಕ್ಕೆ ದ್ರೌಪದಿಯು ಕಾರಣವೆಂದು ತೋರುವುದು. ಶ್ರೀಕೃಷ್ಣನು ಹೇಳುತ್ತಿದ್ದನು, ಜಗತ್ತಿನ ಸುಖ ದುಃಖಗಳಿಗೆ ಸ್ತ್ರೀಯರೇ ಮೂಲಕಾರಣರೆಂದು. ಅರ್ಜುನ, ಕೌರವ

Sri Vidyabharathi Book Centre, Sringeri

CC-O. In Public Domain. Digitized by eGangotri

ರೊಡನೆ ಯುದ್ಧಕ್ಕಿಂತ ಈ ನನ್ನ ಸಹೋದರನ ಕೋಪವನ್ನು ಶಮನ ಮಾಡುವುದು ನನಗೆ ದುಸ್ಸಾಧ್ಯವಾಗಿದೆ. ಭೀಮಸೇನಾ !

(ಭೀಮನು ಉತ್ತರಕೊಡದೆ ಮುಖ ತಿರುಗಿಸಿಕೊಳ್ಳುವನು)

ಧರ್ಮ : ಇದೇನು, ನನ್ನಲ್ಲಿ ಕೋಪವೇ ತಮ್ಮಾ ?

ಅರ್ಜುನ : ಪಾಂಚಾಲಿ, ಸಮಾಚಾರವೇನು ? ಅಣ್ಣನೇಕೆ ಸಿಟ್ಟಾಗಿರುವನು?

ದ್ರೌಪದಿ : ಏಕೆ !.....ಈ ನನ್ನ ಬಿರುಗೂದಲು ನಿನ್ನ ಪ್ರಶ್ನೆಗೆ ಉತ್ತರ ಕೊಡಬಲ್ಲದು.

ಭೀಮ : ಅಗ್ರಜ, ಸಮಯಕ್ಕೆ ಸರಿಯಾಗಿ ಬಂದೆ. ನನಗೆ ಯಾರಲ್ಲಿಯೂ ಕೋಪವಿಲ್ಲ. ಅರ್ಜುನನ ಮುಖದಿಂದ ನಿನಗೊಂದು ಮಾತನ್ನು ತಿಳಿಸ ಬೇಕೆಂದಿದ್ದಿತು. ಅದನ್ನು ನಿಮ್ಮಿಬ್ಬರ ಸಮ್ಮುಖದಲ್ಲಿ ಈಗಲೇ ಹೇಳಿ ಬಿಡುವೆನು. ಈ ಸಂಧಿ ಪ್ರಸ್ತಾಪವು ನಿನಗೆ ಉಚಿತವಾಗಿ ಕಾಣ ಬಹುದು. ಅರ್ಜುನನು ಅನುಮೋದಿಸಬಹುದು. ನಕುಲ ಸಹದೇವರು ಸುಮ್ಮನಿರಬಹುದು. ಆದರೆ ಈ ದಾಸ್ಯವೃತ್ತಿಯನ್ನು ನಾನು ಪಾಂಡವರ ಕಳಂಕವೆಂದು ಭಾವಿಸುವೆನು. ದರಿದ್ರ ಭಿಕ್ಷುಕರಂತೆ ಕಂಡಕಂಡವರ ಮನೆಯ ಬಾಗಿಲಿನಲ್ಲಿ ಸಂಧಿಯಾಚನೆ ಮಾಡಲು ಪಾಂಡುರಾಜೇಂದ್ರನು ನಮ್ಮನ್ನು ಪುತ್ರರನ್ನಾಗಿ ಪಡೆಯಲಿಲ್ಲ. ಈ ಅಪಮಾನವು ನಿಮಗೆ ಸಹ್ಯವಾಗಬಹುದು. ಆದರೆ ಇನ್ನೊಂದು ಗಳಿಗೆಯೂ ನಾನಿದನ್ನು ಸಹಿಸಲಾರೆ. ಯುದ್ಧಕ್ಕಾಗಿ ನಿಮ್ಮ ಅನುಮತಿಯನ್ನಾಗಲೀ, ಅರ್ಜುನನ ಸಹಾಯವನ್ನಾಗಲೀ ಇನ್ನು ನಾನು ಅಪೇಕ್ಷಿಸುವುದಿಲ್ಲ. ನಾನು ಮತ್ತು ಈ ನನ್ನ ಗದೆ, ಇವೆರಡೇ ಕುರುಕುಲವನ್ನು ಸಮೂಲವಾಗಿ ನಾಶಮಾಡ ಬಲ್ಲುದು, ನೀವು ನಿಶ್ಚಿಂತರಾಗಿ ಸಂಧಿ ಪ್ರಸ್ತಾಪವನ್ನು ಮಾಡುತ್ತಿರಿ. ನಾನು ನನ್ನ ಪ್ರತಿಜ್ಞೆಯಂತೆ ನಡೆಯುವೆನು. (ಹೊರಡುವನು)

ಧರ್ಮ : (ತಡೆದು) ನಿಲ್ಲು, ಪ್ರಿಯ ಸಹೋದರ. ನಿನ್ನ ಕೋಪವನ್ನು ತಡೆ ಯುವ ಶಕ್ತಿಯು ನನ್ನಲ್ಲಿಲ್ಲ.

ಅರ್ಜುನ : ಕೋಪಮಾಡಬೇಡ, ಅಣ್ಣ. ಧರ್ಮರಾಜನು ನಮಗೆ ಹಿರಿಯನು. ಆತನ ಇಷ್ಟಕ್ಕೆ ವಿರುದ್ಧವಾಗಿ ಯುದ್ಧವನ್ನು ಪ್ರಾರಂಭಿಸುವುದು ನಮಗೆ ಅನುಚಿತ. ಏನು ಹೇಳುವೆ? ಪಾಂಚಾಲೀ ?

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ರೌಪದಿ : ಧರ್ಮ, ಧರ್ಮವೆಂದು ಹಂಬಲಿಸುತ್ತಾ ಕ್ಷತ್ರಿಯರ ಧರ್ಮವೇನೆಂಬುದನ್ನು ಮರೆಯುವುದು ನಿಮಗೆ ಉಚಿತವೆನಿಸಿತಲ್ಲವೇ !

ಧರ್ಮ : ಯುದ್ಧದಂತೆ ಶಾಂತಿರಕ್ಷಣೆಯೂ ಕ್ಷತ್ರಿಯರ ಕರ್ತವ್ಯ. ಪಾಂಚಾಲಿ, ಯುದ್ಧವು ಎಂತಹ ಘೋರಕರ್ಮವೆಂಬುದನ್ನು ನೀನು ತಿಳಿದಿಲ್ಲ. ನಾವು ಅಭಿಮಾನಕ್ಕೆ ವಶರಾಗಿ ಯುದ್ಧವನ್ನು ಪ್ರಾರಂಭಿಸಿದರೆ, ಮುಂದೆ ನಮ್ಮ ಅವಿಚಾರಕ್ಕಾಗಿ ದುಃಖಿಸಬೇಕಾಗುವುದು. ಅದಕ್ಕಾಗಿಯೇ ನಾನು ಸಂಧಿಗೆ ಇಷ್ಟೊಂದು ಪ್ರಯತ್ನಿಸುತ್ತಿರುವೆನು.

ದ್ರೌಪದಿ : ರಾಜೇಂದ್ರ, ಧೌಮ್ಯನನ್ನು ಸಂಧಿಗೆ ಕಳುಹಿಸಿ ಅಪಮಾನ ಹೊಂದಿದಿರಿ. ಕುಲಪುರೋಹಿತನನ್ನು ಕಳುಹಿಸಲು ಇದು ಮದುವೆಯ ಔತಣವಲ್ಲವೆಂಬ ಪರಿಜ್ಞಾನವೂ ನಿಮಗಿಲ್ಲದೆ ಹೋಯಿತು. ದುರ್ಯೋಧನನು ನಿಮಗೆ ತಕ್ಕ ಉತ್ತರವನ್ನೇ ಕೊಟ್ಟನು. ಈಗ ಶ್ರೀಕೃಷ್ಣನನ್ನು ಪುನಃ ಅಪಮಾನಕ್ಕೆ ಗುರಿಪಡಿಸಿದಿರಲ್ಲಾ ಎಂಬುದೇ ನನ್ನ ಚಿಂತೆ.

(ನೇಪಥ್ಯದಲ್ಲಿ ಜಯಧ್ವನಿ)

ದ್ರೌಪದಿ : ಏನೀ ಕೋಲಾಹಲ ?

(ನೇಪಥ್ಯದಲ್ಲಿ) ಜಯ ! ಶ್ರೀಕೃಷ್ಣ ! ಜಯ ! ಯದುಪತಿ !

ಭೀಮ : ಅರ್ಜುನ, ಇನ್ನು ನಾನು ಹೋಗುವೆನು. ಸಂಧಿಯ ಫಲಾಫಲಗಳನ್ನು ಕೇಳುವುದರಿಂದ ನನಗಾವ ಪ್ರಯೋಜನವೂ ಇಲ್ಲ. ನಿಮ್ಮ ಅಪೌರುಷ ವರ್ತನೆಯ ಪುರಸ್ಕಾರವು ನಿಮಗೇ ಇರಲಿ. ಪ್ರತಿಜ್ಞೆಯಂತೆ ನಡೆಯುವ ಸ್ವಾತಂತ್ರ್ಯ ಮಾತ್ರ ನನಗಿರಲಿ.

ದ್ರೌಪದಿ : ಪ್ರಾಣೇಶ್ವರಾ, ಅದೋ ಯದುಪತಿಯು ನಮ್ಮನ್ನು ನೋಡಿ ನಗುತ್ತಾ ಇತ್ತ ಕಡೆಯೇ ಬರುತ್ತಿರುವನು. ಆತನಿಂದ ರಾಜಸಭೆಯ ಸಮಾಚಾರವನ್ನು ತಿಳಿದುಕೊಂಡು ಬಳಿಕ ನಿನ್ನಿಷ್ಟದಂತೆ ಮಾಡು.

ಧರ್ಮ : (ಪ್ರವೇಶ : ಶ್ರೀಕೃಷ್ಣ) ಪರಮಾತ್ಮ, ಪಾಂಡವಪುತ್ರರ ಪ್ರಣಾಮಗಳನ್ನು ಸ್ವೀಕರಿಸು.

ಕೃಷ್ಣ : ವಿಜಯಶಾಲಿಯಾಗು, ಧರ್ಮನಂದನ. (ಆಸನದಲ್ಲಿ ಮಂಡಿಸುವನು)

ಧರ್ಮ : ಸ್ವಾಮಿನ್, ಹೋದ ಕಾರ್ಯವೇನಾಯಿತು ?

ಕೃಷ್ಣ : ಹೋದವನಾರು? ಕೃಷ್ಣನಲ್ಲವೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮ : ಅಂದರೆ ?

ಕೃಷ್ಣ : ಎಲ್ಲವೂ ಸಮರ್ಪಕವಾಗಿಯೇ ನಡೆಯಿತು. ಭೀಷ್ಮಾದಿಗಳು ನನ್ನನ್ನು ಬಹುವಾಗಿ ಸನ್ಮಾನಿಸಿದರು. ಸ್ವಯಂ ಧೃತರಾಷ್ಟ್ರನು ನನ್ನನ್ನು ರಾಜಸಭೆಯಲ್ಲಿ ಸ್ವಾಗತಿಸಿ ವಿಧವಿಧವಾಗಿ ಉಪಚರಿಸಿದನು.

ಧರ್ಮ : ಸಂಧಿಯ ವಿಚಾರವು ನಡೆಯಿತಷ್ಟೆ ?

ಕೃಷ್ಣ : ನಡೆಯಿತು.

ಭೀಮ : ಪಾಂಚಾಲಿ, ಇನ್ನಿಲ್ಲಿರುವುದು ನನಗೆ ಸಾಧ್ಯವಿಲ್ಲ. ಅವರಿಚ್ಛೆಯಂತೆ ಅವರು ನಡೆಯಲಿ. ನನಗೆ ತೋರಿದ್ದನ್ನು ನಾನು ಮಾಡುವೆನು.

ದ್ರೌಪದಿ : ನಾಥ, ಸ್ವಲ್ಪ ತಡೆ....ಕೃಷ್ಣನ ಮಾತು ಮುಗಿಯಲಿ.

ಭೀಮ : ಮಾತು ಮುಗಿಯುವುದರಲ್ಲಿ ನನ್ನ ತಾಳ್ಮೆಯೂ ಮುಗಿಯುವುದು.

ಧರ್ಮ : ಯದುಪತಿ, ಸಭೆಯಲ್ಲೇನು ನಡೆಯಿತು ?

ಕೃಷ್ಣ : ಎಲ್ಲವೂ ತಕ್ಕ ರೀತಿಯಲ್ಲಿ ನಾನು ನಿರೀಕ್ಷಿಸಿದಂತೆಯೇ ನಡೆಯಿತು.

ಭೀಮ : ನಾನಿನ್ನು ತಡೆಯಲಾರೆ. ರುಕ್ಮಿಣೀಪತಿ, ಈ ಸಮಸ್ಯೆಯ ಮಾತುಗಳು ನನಗೆ ಬೇಡ, ಅಗ್ರಜನ ಅಪೇಕ್ಷೆಯಂತೆ ಐದು ಗ್ರಾಮ ಗಳಿಗಾಗಿ ಸಂಧಿಯಾಯಿತೆ ?

ಕೃಷ್ಣ : ನಾನು ಹೋಗಿದ್ದುದು ಅದಕ್ಕಾಗಿಯೇ ಅಲ್ಲವೇ ?

ಭೀಮ : ಕೃಷ್ಣ, ಈಗ ನಿನ್ನ ಅಭಿಮತವು ತಿಳಿಯಿತು. ಅಜ್ಞಾತವಾಸದ ನೆಪದಿಂದ ಅರ್ಜುನನು ಬಳೆತೊಟ್ಟನು. ಈಗ ಈ ಸಂಧಿಯ ಹೆಸರಿನಲ್ಲಿ ನಮ್ಮೆಲ್ಲರಿಗೂ ಬಳೆತೊಡಿಸಲು ನೀನು ಹವಣಿಸುತ್ತಿರುವೆ. ಯಾದವಾ ಗ್ರಣಿ, ಪಾಂಡುಪುತ್ರರ ಮೇಲೆ ನಿನಗಿಷ್ಟೊಂದು ಆಕ್ರೋಶವೇಕೆ ?

ಕೃಷ್ಣ : ಭೀಮ, ನಿನಗಿಷ್ಟೊಂದು ಅಸಹನೆಯೇಕೆ ? ಸಾವಧಾನದಿಂದ ಎಲ್ಲವನ್ನೂ ಕೇಳು. ಇದು ನಿನಗೆ ಹೆಚ್ಚಿಗೆ ಸಂಬಂಧಿಸಿದೆಯೆಂದು ನಾನು ಹೇಳಲಿಲ್ಲವೇ ?

ಭೀಮ : ಈ ಸ್ವಾಭಿಮಾನ್ಯಶೂನ್ಯವಾದ ಸಂಧಾನದೊಡನೆ ಚಂಡ ಭೀಮನಿ ಗೆಂತಹ ಸಂಬಂಧ !

ಕೃಷ್ಣ : ಇರುವುದು, ಅತ್ಯಂತ ನಿಕಟವಾದ ಸಂಬಂಧವಿರುವುದು.
(ಭೀಮನು ಅಸಹನೆಯಿಂದ ನಿಲ್ಲುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಧರ್ಮ : ಕೃಷ್ಣ, ಮುಂದೇನಾಯಿತು ?

ಕೃಷ್ಣ : ರಾಜಸಭೆಯಲ್ಲಿ ನಿಮ್ಮ ಸಂದೇಶವನ್ನು ತಿಳಿಸಿದೆನು. ಅವರೆಲ್ಲರೂ ಒಪ್ಪಿದರು ?

ಧರ್ಮ : ಯಾರು ಯಾರು ಒಪ್ಪಿದರು ?

ಕೃಷ್ಣ : ಭೀಷ್ಮ, ದ್ರೋಣ, ಧೃತರಾಷ್ಟ್ರನೇ ಮುಂತಾದವರು.

ಭೀಮ : ಇನ್ನು ನನಗಿಲ್ಲಿ ಕೆಲಸವಿಲ್ಲ. ಈ ದುರ್ವಾರ್ತೆಯನ್ನು ನಾನು ಕೇಳಬೇಕೆಂಬುದು ನಿನ್ನ ಇಚ್ಛೆಯಾಗಿತ್ತು. ಅದನ್ನು ಸಾಧಿಸಿದೆ. ಕೃಷ್ಣ, ಇನ್ನು ನಾನು ಹೊರಡುವೆನು. ಸಹೋದರರೇ, ನಿಮ್ಮ ಅಪೌರುಷದ ಫಲವನ್ನು ನೀವೇ ಭುಂಜಿಸಿರಿ. ಭೀಮನು ಅದರಲ್ಲಿ ಯಾವ ಭಾಗವನ್ನೂ ಅಪೇಕ್ಷಿಸುವುದಿಲ್ಲ. ಯಾಜ್ಞಸೇನಿ, ನೀನು ನಿರಾಶಳಾಗಬೇಡ. ಭೀಮನು ಬದುಕಿದ್ದರೆ ನಿನ್ನ ಸೇಡನ್ನು ತೀರಿಸುವನು. (ಹೊರಡುವನು)

ಕೃಷ್ಣ : ನೀನು ನಿಜವಾಗಿ ಹಿಡಿಂಬಾಪತಿಯೆ ! ಇಷ್ಟೊಂದು ಕೋಪವಿಲ್ಲದಿದ್ದರೆ ಆ ರಕ್ಕಸಿಯನ್ನು ಆಳುವುದು ಹೇಗೆ ಸಾಧ್ಯ ? ಸ್ವಲ್ಪ ಸಮಾಧಾನವನ್ನು ತಂದುಕೊಂಡು ನನ್ನ ಮಾತನ್ನು ಪೂರ್ಣವಾಗಿ ಕೇಳು.

ಭೀಮ : ಕೃಷ್ಣ, ನನ್ನನ್ನು ಸುಮ್ಮನೆ ಕಾಡಬೇಡ. ಈ ಸಂಧಿಯ ಸುದ್ದಿಯು ನನಗೊಪ್ಪದು.

ಕೃಷ್ಣ : ನಿನಗೊಪ್ಪುವ ವಿಚಾರವೂ ಒಂದಿರುವುದು. ದುರ್ಯೋಧನನು ನಿನಗೊಂದು ಸಂದೇಶವನ್ನು ಕಳುಹಿಸಿರುವನು.

ಭೀಮ : ದುರ್ಯೋಧನನ ಸಂದೇಶ ! ಹಾಗಾದರೆ ಅದರ ಉದ್ದೇಶವು ಸಂಧಿಯಲ್ಲ. ಕೃಷ್ಣಾ, ಹೇಳು, ಹೇಳು ಏನು ಆ ಸಂದೇಶ ?

ಕೃಷ್ಣ : ಅದನ್ನು ಕೇಳುವ ಮೊದಲು ನೀನು ಸಮಾಧಾನದಿಂದ ನನ್ನ ಬಳಿಯಲ್ಲಿ ಕೈಕಟ್ಟಿ ಕುಳಿತುಕೊಳ್ಳಬೇಕು.

ಭೀಮ : ಇಲ್ಲ, ನಿಂತಿದ್ದಂತೆಯೇ ಹೇಳಿಬಿಡು.

ಕೃಷ್ಣ : ಕುಳಿತುಕೊಂಡ ಹೊರತು ಹೇಳುವುದಿಲ್ಲ.

ಭೀಮ : ಕೃಷ್ಣ, ಈ ಪರಿಹಾಸವೇಕೆ ?

ಕೃಷ್ಣ : ನಿನ್ನನ್ನು ಕಂಡರೆ ನನಗಷ್ಟೆಯೂ ಭಯವಾಗುವುದು, ಭೀಮ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಆ ಗದೆಯನ್ನು ಸ್ವಲ್ಪ ದೂರವಾಗಿಡು. ನನ್ನ ಪಾರ್ಶ್ವದಲ್ಲಿ ಹೀಗೆ ಕುಳಿತುಕೋ. ಆಗ ನಿನಗೆ ಪ್ರಿಯವಾದ ಆ ಸಂದೇಶವನ್ನು ಹೇಳುವೆನು.

ಭೀಮ : ಇದೋ, ನಿನ್ನ ಅಪೇಕ್ಷೆಯಂತೆ ಕುಳಿತುಕೊಳ್ಳುವೆನು. ಈಗಲಾದರೂ ಹೇಳು.

ಕೃಷ್ಣ : ನೀನು ಕೋಪಮಾಡುವುದಿಲ್ಲವಷ್ಟೆ ?

ಭೀಮ : ಹೂಂ, ಅದೂ ಆಗಲಿ.

ಕೃಷ್ಣ : ಹಾಗಾದರೆ ನೀನು ನನ್ನ ಬಂಧಿ. ಅರ್ಜುನ, ಈ ಗದೆಯನ್ನು ಕ್ಷಣಕಾಲ ನೀನು ಹಿಡಿದಿರು. ಯಾಜ್ಞಸೇನಿ, ಸಮೀಪಕ್ಕೆ ಬಾ, ನಾನು ಹೇಳಿದಂತೆ ಮಾಡಬೇಕು, ಕಂಡೆಯಾ.

ದ್ರೌಪದಿ : ಕೃಷ್ಣ, ನಾನು ನಿನ್ನ ಮಾತನ್ನು ಎಂದಾದರೂ ಮೀರಿರುವೆನೆ ?

ಕೃಷ್ಣ : ಹಾಗಾದರೆ, ತೆಗೆದುಕೋ ಈ ಹಗ್ಗವನ್ನು. ಇದು ನನಗೊಂದು ಕಡೆ ಪುರಸ್ಕಾರರೂಪವಾಗಿ ದೊರೆಯಿತು. ಇದರಿಂದ ನಿನ್ನ ಪತಿಯ ಕೈಗಳನ್ನು ಭದ್ರವಾಗಿ ಬಂಧಿಸು.

ದ್ರೌಪದಿ : ಇದೇನು ಪರಿಹಾಸ, ಕೃಷ್ಣಾ !

ಕೃಷ್ಣ : ಶತ್ರುಗಳ ಹೆಡೆಮುರಿಯನ್ನು ಬಿಡಿಸುವುದರಲ್ಲಿ ನೀನು ಪಂಡಿತೆಯಂತೆ. ಹಾಗೆಯೇ ಗಂಡನ ಕೈಗಳನ್ನು ಕಟ್ಟಲು ಬರುವುದೇನೋ ನೋಡು. ಭೀಮ, ನಿನಗೆ ಸಂದೇಶವನ್ನು ಕೇಳುವ ಇಚ್ಛೆಯಿದ್ದರೆ.....

ಭೀಮ : ಪಾಂಚಾಲಿ, ಕೃಷ್ಣನು ಹೇಳಿದಂತೆ ನನ್ನ ಕೈಗಳನ್ನು ಬಂಧಿಸು. (ದ್ರೌಪದಿ ಹಾಗೆಯೇ ಮಾಡುವಳು)

ಕೃಷ್ಣ : ಈಗ ಕೇಳಿರಿ, ಎಲ್ಲರೂ ; ಭೀಮ, ಯಾಜ್ಞಸೇನಿ, ಧರ್ಮನಂದನ, ಕಿರೀಟಿ—ಎಲ್ಲರೂ ನನ್ನ ಮಾತನ್ನು ಕೇಳಿರಿ. ಭೀಮನನ್ನು ಬಂಧಿಸಿರುವ ಈ ಹಗ್ಗವು, ಈ ದಿನ ರಾಜಸಭೆಯಲ್ಲಿ ನನ್ನ ಅಂಗಾಂಗಗಳನ್ನು ಬಂಧಿಸಲನುವಾಗಿತ್ತು.

ಎಲ್ಲರೂ : ಯಾರು ಈ ಕಾರ್ಯವನ್ನು ಮಾಡಿದವರು !

ಭೀಮ : ಏನು ಹೇಳಿದೆ, ಕೃಷ್ಣಾ ! ಈ ಹಗ್ಗದಿಂದ ನಿನ್ನನ್ನು ಬಂಧಿಸಲೆಳಸಿದರೇ ! ಯಾರಾದುರಾತ್ಮರು ?

ಕೃಷ್ಣ : ದುರಭಿಮಾನಿಯಾದ ಆ ದುರ್ಯೋಧನನು ಆಜ್ಞೆ ಮಾಡಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ದುರಾಚಾರಿಯಾದ ಅವನ ತಮ್ಮ ದುಶ್ಯಾಸನನು ನಡೆಸಿದನು. ಇಂತಹ ಸಾಹಸವು ಮತ್ತಾರಿಗೆ ಸಾಧ್ಯ ?

ಭೀಮ : ಯಾಜ್ಞಸೇನಿ, ನನ್ನ ಕೈಗಳನ್ನು ಬಿಡಿಸು. ಈ ನೀಚಕೃತ್ಯದಿಂದ ದುರ್ಯೋಧನನ ದುರಭಿಮಾನವು ಶಿಖರವನ್ನು ಮುಟ್ಟಿತು. ನಮ್ಮ ಪ್ರಿಯಬಂಧುವಾದ ಕೃಷ್ಣನನ್ನು, ಯಾದವಾಗ್ರಣಿಯನ್ನು, ಪಾಂಡವರ ರಾಯಭಾರಿಯನ್ನು, ಆ ಕುನ್ನಿ ಕೌರವನು ಈ ರೀತಿ ಅಪಮಾನ ಪಡಿಸಿದನೇ ! ಅಗ್ರಜ, ಧನಂಜಯ, ಇದಕ್ಕೆ ನಿಮ್ಮ ಉತ್ತರವೇನು ?

ಕೃಷ್ಣ : ಇಷ್ಟು ಮಾತ್ರವಲ್ಲ. ದುರ್ಯೋಧನನು ಸಂಧಾನಕ್ಕೆ ಕೊಟ್ಟ ಉತ್ತರವನ್ನು ಕೇಳಿರಿ. ಐದು ಮಾರು ಭೂಮಿಯನ್ನು ಕೊಡಲೂ ಅವನು ಸಮ್ಮತಿಸಲಿಲ್ಲ. ನೀವು ಸಂಧಿಯನ್ನು ಅಪೇಕ್ಷಿಸುವುದಾದರೆ ಅದು ರಣಾಂಗಣದಲ್ಲಿ, ಶಸ್ತ್ರಾಸ್ತ್ರಗಳ ಆಸ್ಫಾಲನದಲ್ಲಿ ದೊರಕುವುದಂತೆ.

ಧರ್ಮ : ಈ ಸಂದೇಶಕ್ಕೆ ನಮಗಿನ್ನು ಉಳಿದಿರುವುದು ಒಂದೇ ಉತ್ತರ. ಅದು ಯುದ್ಧ ! ನನ್ನ ಪ್ರಯತ್ನಗಳೆಲ್ಲವನ್ನೂ ವಿಫಲವಾಗಿ ಮಾಡಿ, ಮುಂದೆ ಬಂದು ನಿಂತಿರುವ ಯುದ್ಧ ! ಕೃಷ್ಣ, ನೀನು ತಿಳಿದಿರುವೆ, ನಾನೀ ಯುದ್ಧವನ್ನು ಅಪೇಕ್ಷಿಸಿದವನಲ್ಲವೆಂದು, ಸಂಧಿಗಾಗಿ ಸರ್ವ ಪ್ರಯತ್ನಗಳನ್ನೂ ಮಾಡಿದೆನೆಂದು.

ಭೀಮ : ನನ್ನ ಕೈಗಳನ್ನು ಬಿಚ್ಚು. ಬೇಡ, ನಾನೇ ಬಿಚ್ಚಿಕೊಳ್ಳುವೆನು. ಎಲ್ಲಿ ನನ್ನ ಗದೆ? ಎಲ್ಲರೂ ಕೇಳಿರಿ ನನ್ನ ಪ್ರತಿಜ್ಞೆಯನ್ನು. ಆ ದಿನ ದುರ್ಯೋಧನನ ಒಡ್ಡೋಲಗದಲ್ಲಿ, ನಮ್ಮ ದುರ್ದೈವವು ಕ್ರೌರ್ಯದ ಪರಮಾವಧಿಯನ್ನು ಮುಟ್ಟಿದಾಗ, ದುಶ್ಯಾಸನನಿಂದ ಅಪಮಾನ ಹೊಂದಿ ಕಣ್ಣೀರಿಡುತ್ತಾ, ಮುಕ್ತಕೇಶಿಯಾಗಿ ಪಾಂಡವರ ಅಪ ಕೀರ್ತಿಯು ರೂಪುಗೊಂಡಂತೆ ನಿಂತಿದ್ದ, ಈ ಪಾಂಚಾಲರಾಜನಂದಿನಿಯ ಸಮ್ಮುಖದಲ್ಲಿ ನಾನೀ ಪ್ರತಿಜ್ಞೆಯನ್ನು ಮಾಡಿದೆನು. ಈ ದಿನ ಯುದ್ಧ ಸನ್ನದ್ಧನಾಗುವ ಮೊದಲು ಪುನಃ ಪ್ರತಿಜ್ಞೆ ಮಾಡುವೆನು.

ಚತ್ವಾರೋ ವಯಮೃತ್ವಿಜಃ ಸಭಗವಾನ್ ಕರ್ಮೋಪದೇಷ್ಟಾ ಹರಿಃ
ಸಂಗ್ರಾಮಾಧ್ವರ ದೀಕ್ಷಿತೋ ನರಪತಿಃ ಪತ್ನೀ ಗೃಹೀತವ್ರತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೌರವ್ಯಾಃ ಪಶವಃ ಪ್ರಿಯಾ ಪರಿಭವಕ್ಲೇಶೋಪಶಾಂತಿಃ ಫಲಂ
ರಾಜನ್ಯೋಪ ನಿಮಂತ್ರಣಾಯ ರಸತಿಸ್ಫೀತಂ ಯಶೋದುಂದುಭಿಃ

[ತೆರೆ]

ದೃಶ್ಯ ೬—ಗಂಗಾತೀರ

(ಪ್ರವೇಶ–ಕರ್ಣ)

ಕರ್ಣ : ಕೃಷ್ಣನು ಹೇಳಿದ ಸ್ಥಾನವಿದೇ. 'ಅಲ್ಲಿ ನಿನ್ನ ಜನ್ಮದ ರಹಸ್ಯವನ್ನು ತಿಳಿಯುವೆ' ಎಂದು ಅವನು ಹೇಳಿದನು. ಆ ರಹಸ್ಯವೇನು ದೇವಾ.....ಭಗವಾನ್ ಭಾಸ್ಕರ, ನಿನ್ನ ಜ್ವಲಂತ ಪ್ರಭೆಯಿಂದ ಸೃಷ್ಟಿಯ ಮೊದಲಿನಿಂದ ಜಗತ್ತನ್ನು ಬೆಳಗುತ್ತಿರುವೆ. ನೀನಾರಹಸ್ಯವನ್ನು ಖಂಡಿತವಾಗಿ ತಿಳಿದಿರಬೇಕು. ಸಂದೇಹದ ಅಂಧಕಾರದಿಂದ ನನ್ನನ್ನು ಉದ್ಧರಿಸು. (ಧ್ಯಾನಮಗ್ನನಾಗಿ ನಿಲ್ಲುವನು. ಕುಂತಿಯ ಪ್ರವೇಶ)

ಕುಂತಿ : ಕರ್ಣ.

ಕರ್ಣ : ನೀನು ಯಾರು, ತಾಯಿ? ನನ್ನ ಏಕಾಗ್ರತೆಯನ್ನೇಕೆ ಭಂಗ ಪಡಿಸಿದೆ?

ಕುಂತಿ : ನೀನು ಪೂಜಿಸುತ್ತಿರುವ ಆ ಸರ್ವಸಾಕ್ಷಿ ಸೂರ್ಯದೇವನ ಜ್ವಲಂತ ಪ್ರಭೆಯನ್ನು ನಿನಗೆ ಮೊದಲು ತೋರಿಸಿದ ಸ್ತ್ರೀ ನಾನು.

ಕರ್ಣ : ನೀನು ಏನು ಹೇಳುವೆಯೋ ನನಗೆ ತಿಳಿಯದು. ಆದರೆ ನಿನ್ನ ಕಣ್ಣುಗಳಲ್ಲಿನ ಕರುಣಾದೃಷ್ಟಿಯು ಪ್ರಾತಃಸೂರ್ಯನ ಕಿರಣಗಳಂತೆ ನನ್ನ ಮನಸ್ಸಿನ ಹಿಮವನ್ನು ಕರಗಿಸುತ್ತಿದೆ. ನಿನ್ನ ಧ್ವನಿಯು ನನ್ನ ಹೃದಯಾಂತರಾಳದಲ್ಲಿ ನೆಲೆಗೊಂಡು ಮರೆತು ಹೋಗಿದ್ದ ನನ್ನ ಚಿಕ್ಕಂದಿನ ನೆನಪುಗಳನ್ನು ಚೇತರಿಸುತ್ತಿದೆ. ತಾಯಿ, ನೀನು ಯಾರು? ನಮ್ಮಿಬ್ಬರ ಸಂಬಂಧವೇನು? ನನ್ನ ರಹಸ್ಯವನ್ನು ನೀನು ತಿಳಿಸಬಲ್ಲೆಯ?

ಕುಂತಿ : ಈ ನಿರ್ಭಾಗ್ಯಳನ್ನು ಕುಂತಿಯೆಂದು ಕರೆಯುವರು.

ಕರ್ಣ : ಕುಂತಿ! ಅರ್ಜುನನ ತಾಯಿ?

ಕುಂತಿ : ಹೌದು, ಅರ್ಜುನನ, ನಿನ್ನ ಶತ್ರುವಿನ ತಾಯಿ, ಕರ್ಣ. ಆದರೆ ಅದಕ್ಕಾಗಿ ನೀನು ನನ್ನನ್ನು ದ್ವೇಷಿಸಬೇಡ. ಹಸ್ತಿನಾವತಿಯ ಗರಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಟದ ಆ ದಿನವು ನನಗಿನ್ನೂ ನೆನಪಿನಲ್ಲಿರುವುದು. ಆ ದಿನ ನೀನು ವೀರದರ್ಪದಿಂದ ರಂಗವನ್ನು ಪ್ರವೇಶಿಸಿ ಅರ್ಜುನನನ್ನು ಅಸ್ತ್ರ ಯುದ್ಧಕ್ಕೆ ಕರೆದೆ. ಆಗ ತೇಜಃಪುಂಜವಾದ ನಿನ್ನ ಮುಖವನ್ನು ನೋಡಿ, ರಾಜ ಮಹಿಳೆಯರೊಡನೆ ಆಟವನ್ನು ನೋಡುತ್ತಾ ಕುಳಿತಿದ್ದ ಈ ಕುಂತಿಯ ಹೃದಯವು ಆನಂದದಿಂದ ತುಂಬಿ ತುಳುಕಾಡಿತು. ಆಚಾರ್ಯ ದ್ರೋಣನು ಹೀನಕುಲದ ಯೋಧರೊಡನೆ ಅರ್ಜುನನು ಕಾದಲಾಗ ದೆಂದು ನಿಷೇಧಿಸಿದನು. ಆಗ ನಿನಗಾದ ಅಪಮಾನದಿಂದ ನಾನು ನೀರವವಾಗಿ ಕಣ್ಣೀರು ಸುರಿಸಿದೆ. ದುರ್ಯೋಧನನು ನಿನ್ನ ಪಕ್ಷವನ್ನು ವಹಿಸಿ ನಿನ್ನನ್ನು ಅಂಗರಾಜ್ಯದ ಸಾಮಂತನನ್ನಾಗಿ ಮಾಡಿದನು. ನನ್ನ ಹೃದಯವು ಆಗ ಪುನಃ ಆನಂದದಿಂದ ತುಂಬಿತು. ಅಪ್ರಾರ್ಥಿತವಾಗಿ ದೊರಕಿದ ಆ ಸನ್ಮಾನದ ರಾಜಮುಕುಟವನ್ನು ನೀನು ಭಕ್ತಿಯ ಉಪಕಾರವಾಗಿ ಅದಿರಥನ ಚರಣಗಳಲ್ಲಿ ಸಮರ್ಪಿಸಿದೆ. ಆಗ ಪಾಂಡು ಪುತ್ರರು ನಕ್ಕರು. ಕುಂತಿಯು ಮಾತ್ರ ನಿನ್ನ ಪಿತೃಭಕ್ತಿಯ ಉಚ್ಚಾ ದರ್ಶದಿಂದ ಪ್ರೀತಳಾದಳು.

ಕರ್ಣ : ರಾಜಮಾತೆ, ನೀನು ಏಕಾಕಿನಿಯಾಗಿ ಗಂಗಾ ತೀರಕ್ಕೆ ಏಕೆ ಬಂದೆ?

ಕುಂತಿ : ನಿನ್ನಲ್ಲಿ ನನಗೊಂದು ಭಿಕ್ಷೆಯಿದೆ, ಕರ್ಣ.

ಕರ್ಣ : ನಿನ್ನ ಅಭೀಷ್ಟವೇನು, ತಾಯಿ? ಕ್ಷಾತ್ರಧರ್ಮಕ್ಕೆ ವಿರುದ್ಧವಲ್ಲ ದಿರುವ ಏನನ್ನಾದರೂ ಕೇಳು. ಆನಂದದಿಂದ ನಿನ್ನ ಅಡಿದಾವರೆ ಗಳಲ್ಲಿ ಅರ್ಪಿಸುವೆನು.

ಕುಂತಿ : ಕರ್ಣ, ನಾನು ನಿನ್ನನ್ನು ಕರೆದುಕೊಂಡು ಹೋಗಲು ಬಂದೆನು.

ಕರ್ಣ : ನನ್ನನ್ನು ಕರೆದುಕೊಂಡು ಹೋಗುವುದು ! ಎಲ್ಲಿಗೆ ?

ಕುಂತಿ : ನನ್ನ ಹೃದಯ ಪೀಠಕ್ಕೆ. ಮಗು, ನನ್ನ ಹೃದಯವು ನಿನ್ನ ಪ್ರೀತಿಗಾಗಿ ಹಾರೈಸುತ್ತಿರುವುದು.

ಕರ್ಣ : ಐದು ಜನ ವೀರಪುತ್ರರನ್ನು ಪಡೆದ ಭಾಗ್ಯದ ಜನನೀ, ನಿನ್ನ ಹೃದಯುದಲ್ಲಿ ಈ ಹೀನಕುಲದ ಸೂತಪುತ್ರ ಕರ್ಣನಿಗೆ ಸ್ಥಾನವಿರುವುದೇ?

ಕುಂತಿ : ನಿನ್ನ ಸ್ಥಾನವು ಐದು ಜನ ಪುತ್ರರಲ್ಲಿ ಮೊದಲನೆಯದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಣ : ಆದರೆ ಯಾವ ಅಧಿಕಾರದಿಂದ ನಾನು ಅಂತಹ ಸ್ಥಾನವನ್ನು ಹೊಂದುವೆನು ?

ಕುಂತಿ : ದೇವರು ಕೊಟ್ಟ ನಿನ್ನ ಜನ್ಮದ ನಿರ್ವಿವಾದ ಅಧಿಕಾರದ ಬಲದಿಂದ. ಕರ್ಣ, ನಾನು ನಿಜವಾಗಿ ನಿನ್ನ ತಾಯಿ, ನೀನು ನನ್ನ ಜ್ಯೇಷ್ಠ ಪುತ್ರನು.

ಕರ್ಣ : ಇದೇನು ಕನಸೇ ದೇವ ! ಹೆತ್ತ ತಾಯಿಯಿಂದ ತ್ಯಜಿಸಲ್ಪಟ್ಟವನಾಗಿ ನಾನು ಅದಿರಥನಿಗೆ ಗಂಗಾಜಲದಲ್ಲಿ ಸಿಕ್ಕಿದೆನೆಂದು ಜನರು ಹೇಳುತ್ತಿದ್ದರು. ಕಳೆದುಹೋದ ಆ ನನ್ನ ತಾಯಿಯು ಕೆಲವು ವೇಳೆ ಕನಸಿನಲ್ಲಿ ಅವಕುಂಠನವತಿಯಾಗಿ ನನಗೆ ಕಾಣಿಸಿಕೊಳ್ಳುತ್ತಿದ್ದಳು. ಪರದೆಯನ್ನು ಕಿತ್ತು ಮುಖವನ್ನು ನೋಡುವುದರೊಳಗಾಗಿ ನನಗೆ ಎಚ್ಚರವಾಗುತ್ತಿತ್ತು. ಈ ದಿನ ಕನಸಿನ ಮಾಯಾರೂಪವು ಮೂರ್ತಿವತ್ತಾಗಿ ನನ್ನ ಕಣ್ಣುಗಳ ಮುಂದೆ ನಿಂತಿರುವುದೇ ಅಥವಾ ನಾನು ಎಚ್ಚರದಲ್ಲಿ ಕನಸು ಕಾಣುತ್ತಿರುವೆನೆ? ನೋಡು ದೇವಿ, ಸಂಜೆಯು ಕಳೆದು, ಇರುಳಿನ ನಸು ಮುಸಕಿನಿಂದ ಕೂಡಿದ ಗಂಗೆಯ ಆಚಿನ ದಡದಲ್ಲಿ ನಿನ್ನ ಮಕ್ಕಳ ಸೈನ್ಯ ಶಿಬಿರವು ಸಾವಿರಾರು ದೀಪಗಳಿಂದ ಬೆಳಗುತ್ತಿದೆ.....ಮತ್ತು ಈ ಪಾರ್ಶ್ವದಲ್ಲಿ ಕೌರವರ ಶಿಬಿರದ ಅಸಂಖ್ಯಾತ ದೀಪರಾಜಿಯು ಶೋಭಿಸುತ್ತಿದೆ. ನಾಳೆ ಪ್ರಾತಃಕಾಲ ಪ್ರಾರಂಭವಾಗುವ ಕುರುಕ್ಷೇತ್ರದ ಮಹಾಯುದ್ಧದಲ್ಲಿ ಈ ಉಭಯ ಸೈನ್ಯಗಳೂ ಹೋರಾಡಬೇಕು. ಆದರೆ ಯುದ್ಧದ ಹಿಂದಿನ ರಾತ್ರಿ, ನನ್ನ ಶತೃವಾದ ಅರ್ಜುನನ ತಾಯಿಯು ನನ್ನ ಬಳಿಗೆ ಬಂದು ದೀನವಾಣಿಯಿಂದ ನನ್ನ ಮನಸ್ಸಿನ ಪ್ರಸುಪ್ತ ಮಾತೃಪ್ರೇಮವನ್ನು ಎಚ್ಚರಿಸುತ್ತಿರುವಳು. ನನ್ನ ಹೃದಯವು ಅವಳ ಕರುಣಾದೃಷ್ಟಿಯಿಂದ ಚೇತನಹೊಂದಿ ನನ್ನ ಶತೃಗಳಾದ ಪಾಂಡುಪುತ್ರರನ್ನು ಸಹೋದರರೆಂದು ಆಲಂಗಿಸಲು ತವಕಿಸುತ್ತಿರುವುದು.

ಕುಂತಿ : ಹಾಗಾದರೆ ತಡಮಾಡಬೇಡ, ಪುತ್ರ. ನನ್ನೊಡನೆ ಬಂದುಬಿಡು.

ಕರ್ಣ : ಬರುವೆನು, ತಾಯಿ. ಸೂಜಿಗಲ್ಲನ್ನು ಕಂಡ ಕಬ್ಬಿಣದ ತುಂಡಿನಂತೆ ನಿನ್ನ ಆತ್ಮವು ನನ್ನನ್ನು ನಿನ್ನ ಕಡೆಗೆ ಸೆಳೆಯುತ್ತಿರುವುದು. ನಾನು ಆನಂದದಿಂದ ನಿನ್ನ ಸಂಗಡ ಬರುವೆನು. ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುವೆ ತಾಯಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಂತಿ : ನದಿಯ ಆಚೆಯ ದಡಕ್ಕೆ. ಪಾಂಡವರ ಶಿಬಿರದ ದೀಪಗಳು ನಮ್ಮನ್ನು ಕರೆಯುತ್ತಿರುವುವು, ಮಗು.

ಕರ್ಣ : ಅಲ್ಲಿ ನಾನು ಕಳೆದುಹೋದ ನನ್ನ ತಾಯಿಯನ್ನು ಪುನ ಪಡೆಯುವೆನೆ ?

ಕುಂತಿ : ಪಡೆಯುವೆ, ಮಗು.

ಕರ್ಣ : ಹಾಗಿದ್ದರೆ ನೀನು ನನ್ನನ್ನು ತ್ಯಜಿಸಿದೆಯೇಕೆ, ತಾಯಿ ? ಪಾಂಡ ವಂಶದ ಮಹಾವೃಕ್ಷದಿಂದ ನನ್ನನ್ನು ಕಿತ್ತು, ಅಪಮಾನದ ವಿರುದ್ಧ ಕ್ಷೇತ್ರದಲ್ಲಿ, ವಿಭಿನ್ನ ಸಮಾವರಣದಲ್ಲಿ ಬಿಟ್ಟೆಯೇಕೆ ? ಕರ್ಣಾರ್ಜುನ ಸೋದರ ಸ್ನೇಹವನ್ನು ನಾಶಮಾಡಿ ಅವರೀರ್ವರ ಮಧ್ಯದಲ್ಲಿ ಈ ದ್ವೇಷ ಕಮರಿಯನ್ನೇಕೆ ಸೃಷ್ಟಿಸಿದೆ ?.....ತಾಯಿ, ಏಕೆ ಮಾತಾಡುವುದಿಲ್ಲ ? ನೋಡು, ಈ ಗಂಭೀರಾಂಧಃಕಾರವು ಭೂಮಿಯನ್ನು ಆವರಿಸಿರುವಂ ನಿನ್ನ ಲಜ್ಜೆಯು ನನ್ನ ಜೀವನವನ್ನು ಅಂಧಕಾರಮಯವಾಗಿ ಮಾಡಿದೆ ತಾಯಿ, ನನಗೆ ಉತ್ತರ ಕೊಡುವ ಇಷ್ಟವಿಲ್ಲವೇ ? ಹೋಗಲಿ ಬಿಡು ನನ್ನ ಪ್ರಶ್ನೆಯು ನಿರುತ್ತರವಾಗಿಯೇ ಉಳಿಯಲಿ. ನಾನು ಯಾವ ಅಪರಾಧಕ್ಕಾಗಿ ನಿನ್ನ ಮಾತೃಪ್ರೇಮದಿಂದ ವಂಚಿತನಾದೆನೆಂಬುದನ್ನು ತಿಳಿಸದಿದ್ದರೆ ಹೋಗಲಿ—ಆದರೆ ಈ ದಿನ, ನೀನು ಕೈಯಾರೆ ನುಚ್ಚು ನೂರು ಮಾಡಿದ ಆ ಸ್ವರ್ಗಕ್ಕೆ ನನ್ನನ್ನು ಪುನಃ ಕರೆದುಕೊಂಡು ಹೋಗಲು ಏಕೆ ಬಂದೆ, ತಾಯಿ ?

ಕುಂತಿ : ಕುಮಾರ, ಈ ನಿನ್ನ ನಿಂದೆಗಳಿಗಿಂತ ಸಾವಿರಪಾಲು ಕಠಿಣವಾದ ಹಿಂಸಾತ್ಮಕ ಘೋರಶಾಪದಿಂದ ನಾನು ಜರ್ಝರಿತಳಾಗಿರುವೆನು. ಐದು ಜನ ಮಕ್ಕಳನ್ನು ಹೊಂದಿಯೂ ನನ್ನ ಹೃದಯವು ಬಂಜೆಯ ಹೃದಯದಂತೆ ನೀರಸ ! ದುಃಖಮಯ ! ನಿನ್ನನ್ನು ಪರಿತ್ಯಾಗ ಮಾಡಿದ ಅಪರಾಧದಿಂದ ನನ್ನ ಜೀವನವು ಮರಳು ಕಾಡಿನಂತೆ ಶುಷ್ಕವೂ, ವಿರೂಪವೂ ಆಗಿಹೋಗಿದೆ. ನಿನ್ನನ್ನು ತ್ಯಜಿಸಿದ ಆ ದುರ್ದಿನದಲ್ಲಿ ನಿನ್ನ ತಾಯಿಯ ಅಕಾರ್ಯಕ್ಕಾಗಿ ಒಂದು ಮಾತ ನ್ನಾಡಲೂ ನೀನು ಶಕ್ತನಾಗಿರಲಿಲ್ಲ. ಈ ದಿನ ನಿನ್ನ ದುಷ್ಟ ಜನನಿಯು ನಿನ್ನ ಆಶ್ವಾಸನೆಯ ಮಾತುಗಳಿಗಾಗಿ ಕಾತರಳಾಗಿರುವಳು. ನೀನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಳನ್ನು ಕ್ಷಮಿಸು, ಕರ್ಣ.....ನಿನ್ನ ಕ್ಷಮೆಯ ಪವಿತ್ರ ಶಿಖೆಯಿಂದ ಅವಳ ಪಾಪವು ದಗ್ಧವಾಗಲಿ. (ರೋಧನ)

ಕರ್ಣ : ಅಳಬೇಡ ; ತಾಯಿ.....ನಾನು ನಿನ್ನನ್ನು ಕ್ಷಮಿಸುವೆನು. ಗಂಗೆಯ ಪವಿತ್ರ ಜಲದಂತೆ ನನ್ನ ಕ್ಷಮೆಯು ನಿನ್ನ ದುಃಖದಾಹವನ್ನು ಶಮನ ಮಾಡಲಿ.

ಕುಂತಿ : ನಿನ್ನನ್ನು ಪುನಃ ಹೊಂದುವ ಆಸೆಯಿಂದ ನಾನಿಲ್ಲಿಗೆ ಬರಲಿಲ್ಲ ಕರ್ಣ. ಅದು ಬಯಲ ಬಯಕೆಯೆಂಬುದನ್ನು ನಾನು ಬಲ್ಲೆ. ನಾನು ಬಂದದ್ದು ನಿನ್ನ ಜನ್ಮಾಗತವಾದ ಕುಲಮಾನ ಗೌರವಗಳನ್ನು ನಿನಗೆ ಪುನಃ ಕೊಡಲು.

ಕರ್ಣ : ತಾಯಿ, ನಾನು ಸೂತಪುತ್ರನಾಗಿ ಬೆಳೆದೆನು. ಸೂತಪುತ್ರನಾಗಿಯೇ ಉಳಿಯುವೆನು. ನನಗೆ ಮತ್ತಾವ ಹೆಚ್ಚಿನ ಗೌರವವೂ ಬೇಡ.

ಕುಂತಿ : ಹಸ್ತಿನಾವತಿಯ ರಾಜಸಿಂಹಾಸನವು ನಿನ್ನದು. ನೀನದನ್ನು ಪುನಃ ಪಡೆದುಕೊಳ್ಳಲು ಪ್ರಯತ್ನಿಸು.

ಕರ್ಣ : ತಾಯಿ, ಸಾಮಾನ್ಯ ಮನುಷ್ಯನಿಗೂ ನಿರಾಯಾಸವಾಗಿ ಲಭಿಸುವ ಮಾತೃಪ್ರೇಮವನ್ನು ನನಗೆ ಕೊಡಲು ನಿರಾಕರಿಸಿದ ನೀನು ಈಗ ನನಗೆ ಈ ರಾಜ್ಯಲೋಭವನ್ನು ತೋರಿಸುವೆಯಾ ? ಎಳೆತನದಲ್ಲಿ ನೀನು ನಿಷ್ಕರುಣೆಯಿಂದ ಕಡಿದುಹಾಕಿದ ಬಂಧುಪ್ರೇಮದ ಸಸಿಯು ಈಗ ಒಣಗಿಹೋಗಿದೆ, ಪುನಃ ಚಿಗುರುವುದಿಲ್ಲ.

ಕುಂತಿ : ಪಾಪ ಬೀಜವನ್ನು ಬಿತ್ತುವಾಗ ನಾವು ತಿಳಿಯುವೆವು, ಅದು ಅಲ್ಪವಾದುದೆಂದು. ಮನಸ್ಸು ಮಾಡಿದರೆ ಅದನ್ನು ಪುನಃ ಕಿತ್ತು ಬಿಸುಡಬಹುದೆಂದು. ಆದರೆ ವಿಧಾತನ ನಿಯಮವೇ ಬೇರೆ. ನಾವು ಹಾಕಿದ ವಿಷಬೀಜವು ಮೊಳೆತು ಮರವಾಗಿ ತನ್ನ ವಿಷಫಲವನ್ನು ನಮಗೇ ತಿನ್ನಿಸುವುದು. ನಾನು ಅವಿವೇಕದಿಂದ ಗಂಗೆಯ ನೀರಿನಲ್ಲಿ ಬಿಟ್ಟ ಅನಾಥ ಶಿಶುವು ಈಗ ಘಟನಾಕ್ರಮದಿಂದ ತನ್ನ ಸೋದರರನ್ನೇ ಕೊಲ್ಲುವ ಕಾಳ ರಾಕ್ಷಸನಾಗಿ ಅವತರಿಸಿದೆ.

ಕರ್ಣ : ಚಿಂತಿಸಬೇಡ, ತಾಯಿ. ಯುದ್ಧದಲ್ಲಿ ಪಾಂಡವರಿಗೇ ಜಯವೆಂದು ನನ್ನ ಅಂತರಾತ್ಮವು ನುಡಿಯುತ್ತಿದೆ. ನಾನು ರೇಗಲು ಅಶಾಂತಿಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಫಲ ಕದನವನ್ನು ಹುಡುಕುತ್ತಿರುವೆನೆಂಬುದನ್ನು ಬಲ್ಲೆ. ಆದರೆ ನನ್ನ ಗೆಳೆಯನನ್ನು ತ್ಯಜಿಸುವಂತೆ ಮಾತ್ರ ನನಗೆ ಹೇಳಬೇಡ. ವೈಭವದಲ್ಲಿ ನಾನು ದುರ್ಯೋಧನನ ಗೆಳೆಯನಾಗಿದ್ದೆ. ಮುಂದೆ ಅವನಿಗಾಗುವ ದುರ್ಗತಿಯನ್ನು ನಾನು ಆನಂದದಿಂದ ಎದುರುಗೊಳ್ಳುವೆನು. ಪಾಂಡವರು ವಿಜಯಶಾಲಿಗಳಾಗಲಿ. ನಾನು ಅಭಿವಚನ ಕೊಡುವೆನು; ಅರ್ಜುನನ ಹೊರತು ಇನ್ನುಳಿದ ನಿನ್ನ ನಾಲ್ಕು ಜನ ಮಕ್ಕಳ ಮೇಲೆ ನಾನು ಕೈಮಾಡುವುದಿಲ್ಲವೆಂದು. ನೀನು ನಿರ್ದಯಳಾಗಿ ಪ್ರಪಂಚದ ಅಪಮಾನದ ಆವರ್ತಕ್ಕೆ ಅನಾಥ ಶಿಶುವಿನಂತೆ ನನ್ನನ್ನು ಬಲಿಕೊಟ್ಟೆ. ಈಗಲೂ ಅಂದಿನಂತೆಯೇ ನಿಷ್ಠುರಚಿತ್ತಳಾಗಿ ಕೌರವರೊಡನೆ ನಾನು ನಿರೀಕ್ಷಿಸುವ ಪರಾಜಯದ ದುರ್ಮರಣಕ್ಕೆ ನನ್ನನ್ನು ಬಿಟ್ಟುಬಿಡು.

(ಹೋಗುವನು)

ಕುಂತಿ: ಹೇ! ವಿಧಾತ! ಕಣ್ಣೀರಿನಲ್ಲಿ ಕಲೆಸಿದ ದುಃಖದ ಮೃತ್ತಿಕೆಯಿಂದ ಕುಂತಿಯನ್ನು ನಿರ್ಮಿಸಿದೆಯೋ ನೀನು? ಕರ್ಮಕ್ಕೆ ತಕ್ಕ ಫಲ, ಪಾಪಕ್ಕೆ ತಕ್ಕ ಶಿಕ್ಷೆ.

ದೃಶ್ಯ ೭—ಗಾಂಧಾರಿಯ ಅಂತಃಪುರದಲ್ಲಿ

ಗಾಂಧಾರಿ: (ಗಾಂಧಾರಿಯೊಬ್ಬಳೇ ಚಿಂತಿಸುತ್ತಿರುವಳು) ಇಂದೇಕಿಂತಹ ದುಶ್ಶಕುನ! ಪ್ರಾತಃಕಾಲದ ಉದಯ ಗೀತವು ಶೃತಿತಪ್ಪಿ ಮೃತ್ಯುವಿನ ತೂರ್ಯಸ್ವರದಂತೆ ಕೇಳಿಬಂದಿತು. ಆದರೊಡನೆ ಅದೂರಸ್ಥವಾದ ವೇಣುವನದಲ್ಲಿ, ಬೆಳಗಿನ ಜಾವದಲ್ಲಿ ಕೂಗುತ್ತಿದ್ದ ಗೂಗೆಗಳ ಅಮಂಗಳ ಸ್ವರವು ಮಿಳಿತವಾಯಿತು. ಉದಯೋನ್ಮುಖನಾದ ಪ್ರಾತಃಸೂರ್ಯನನ್ನು ವಂದಿಸಲು ತಲೆಯೆತ್ತಿದಾಗ ರಕ್ತ ವರ್ಣದ ಕರಾಳ ಧೂಮಕೇತುವೊಂದು ಕಣ್ಣುಗಳ ಮುಂದೆ ನಿಂತಿತು. ನೋಡುತ್ತಿದ್ದ ಹಾಗೇ ಆಕಾಶದಿಂದ ಒಂದು ಎರಡು ನೂರು ನಕ್ಷತ್ರಗಳು ಭೂಮಿಗುರುಳಿದವು. ಈ ಎಲ್ಲ ನಿಮಿತ್ತಗಳ ಅರ್ಥವೇನು? ಇವು ನನ್ನ ಪುತ್ರರಿಗೆ ಯಾವ ವಿಪತ್ತನ್ನು ಸೂಚಿಸುವುವು? ಕುರುವಂಶದ ಮತ್ತಾವ ಅನರ್ಥ ಪರಂಪರೆಯು ಈ ದಿನ ಪ್ರಾರಂಭವಾಗುವುದು? ಹಾ! ವಿಧಾತ! ಈ ಗಾಂಧಾರಿಯ ಲಲಾಟದಲ್ಲಿ ಇನ್ನೂ ಏನೇನನ್ನು ಬರೆದಿರುವೆ!

Sri Vidyabharathi Book Centre, Sringeri

CC-O. In Public Domain. Digitized by eGangotri

(ದುರ್ಯೋಧನನು ಪ್ರವೇಶಿಸುವನು)

ದುರ್ಯೋಧನ : ಅಮ್ಮಾ !

ಗಾಂಧಾರಿ : ಯಾರು !.........ಪುತ್ರ, ನಾನು ನಿನ್ನ ಸಲುವಾಗಿ ಎಷ್ಟೊಂದು ಕಾತರಳಾಗಿದ್ದೆನು ! ರಾತ್ರಿಯೆಲ್ಲವೂ ನಿದ್ರೆಯಿಲ್ಲ. ಬೆಳಕು ಹರಿಯುತ್ತಲೇ ದುರ್ನಿಮಿತ್ತ ಪರಂಪರೆಗಳು !.....ಸಮೀಪಕ್ಕೆ ಬಾ, ಕುಮಾರ. ನನ್ನ ಭದ್ರಹಸ್ತದಿಂದ ನಿನ್ನ ಮಸ್ತಕವನ್ನು ಸ್ಪರ್ಶಿಸುವೆನು.

(ದುರ್ಯೋಧನನು ಸಮೀಪಕ್ಕೆ ಬಂದು ತಾಯಿಗೆ ಮಣಿಯುವನು)

ಗಾಂಧಾರಿ : (ತಲೆಯನ್ನು ಮುಟ್ಟಿ) ದಯಾಮಯನೇ ! ನನ್ನ ಪುತ್ರನಿಗೆ ಯಾವ ಅಮಂಗಲವೂ ಆಗದಿರಲಿ.

ದುರ್ಯೋಧನ : ಈ ದಿನ ನಾನು ಯುದ್ಧಕ್ಕೆ ಹೊರಡುವೆನು. ನನ್ನನ್ನು ಆಶೀರ್ವದಿಸು, ಜನನಿ.

ಗಾಂಧಾರಿ : ಯುದ್ಧ ! ಇದೆಂತಹ ಕೆಟ್ಟ ಸುದ್ದಿ ! ಕುಮಾರ, ಯುದ್ಧಕ್ಕೆ ಆಜ್ಞೆಯನ್ನು ಕೊಟ್ಟವರಾರು ?

ದುರ್ಯೋಧನ : ಈ ಬಾಹುಗಳಲ್ಲಿ ಶಕ್ತಿಯಿರುವವರೆಗೆ ಯುದ್ಧದ ಸಲುವಾಗಿ ದುರ್ಯೋಧನ ಯಾರ ಆಜ್ಞೆಯನ್ನೂ ಬೇಡುವುದಿಲ್ಲ. ಕುರುಕ್ಷೇತ್ರದಲ್ಲಿ ನಮ್ಮ ಸಮಸ್ತ ಸೈನ್ಯವೂ ಸಂಮಿಳಿತವಾಗಿರುವುದು ನಿನಗೆ ತಿಳಿಯದೆ, ಅಮ್ಮ ?

ಗಾಂಧಾರಿ : ತಿಳಿದಿರುವೆನು. ಆದರದನ್ನು ನಿನ್ನ ಡಾಂಭಿಕ ಪ್ರದರ್ಶನದ ಪರಮಾವಧಿಯೆಂದು, ಪಾಂಡವರನ್ನು ಹೆದರಿಸಲು ಹೂಡಿದ ಆಟವೆಂದು ಭಾವಿಸಿದ್ದೆನು. ಧರ್ಮ, ನೀತಿ ಮತ್ತು ಮನುಷ್ಯತ್ವಕ್ಕೆ ತಿಲಾಂಜಲಿಯನ್ನು ಕೊಟ್ಟು, ನೀನು ಯುದ್ಧವನ್ನು ನಿಜವಾಗಿ ಪ್ರಾರಂಭಿಸುವೆಯೆಂದು ಮಾತ್ರ ನಾನು ತಿಳಿದಿರಲಿಲ್ಲ.

ದುರ್ಯೋಧನ : ಯುದ್ಧವು ಕ್ಷತ್ರಿಯನ ಧರ್ಮ.

ಗಾಂಧಾರಿ : ಯುದ್ಧವು ಮನುಷ್ಯನ ನಾಶ ! ನೀತಿಯ ಪ್ರಳಯ ! ಧರ್ಮದ ಮಹಾ ವಿಪ್ಲವ ! ಈ ಜಗತ್ತನ್ನು ನಿರ್ಮಿಸಿದ ವಿಧಾತನು ಯುದ್ಧವನ್ನು ನಿರ್ಮಿಸಲಿಲ್ಲ. ಅಸೂಯಾಂಧನಾದ ಮಾನವನು ತನ್ನ ಕಲುಷಿತ ಚಿತ್ತದಿಂದ ಹೊರ ತೆಗೆದ ಕಾಲಕೂಟವದು ; ಪರರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಆತ್ಮೀಯರು ಎಂಬ ಭೇದವಿಲ್ಲದೆ ಎಲ್ಲರನ್ನೂ ತನ್ನ ಕರಾಳ ಉದರದಲ್ಲಿ ಮುಚ್ಚಿಟ್ಟುಕೊಂಡು ನಾಮಾವಶೇಷವಾಗಿ ಮಾಡುವುದು. ಕುಮಾರ, ನೀನೀ ಯುದ್ಧದ ಚಿಂತೆಯನ್ನು ಬಿಡು. ಪಾಂಡವರೊಡನೆ ಸಂಧಿಗೆ ಸಮ್ಮತಿಸು. ದರಿದ್ರ ಭಿಕ್ಷುಕಿಯಂತೆ ನಿನ್ನ ಗೃಹದ್ವಾರದಲ್ಲಿ ಕೈ ಜೋಡಿಸಿ ನಿಂತಿರುವ ಶಾಂತಿ ದೇವಿಯನ್ನು ನಿರಾಕರಿಸಿ ಘೋರ ಯುದ್ಧಕ್ಕೆ ಆಹ್ವಾನ ಕೊಡಬೇಡ.

ದುರ್ಯೋಧನ : ಅಮ್ಮ, ಈ ಅಪೌರುಷ ವಾಕ್ಯಗಳನ್ನು ಕೇಳಿ ಕೇಳಿ ನಾನು ಬೇಸತ್ತಿರುವೆನು. ನೂರು ಜನ ವೀರಪುತ್ರರನ್ನು ಹೆತ್ತ ವೀರಮಾತೆಯು ಒಂದಲ್ಪ ಯುದ್ಧದ ಸಲುವಾಗಿ ಇಷ್ಟೊಂದು ಕಾತರಳಾಗುವಳೆ ? ಯುದ್ಧವು ಕ್ಷತ್ರಿಯನ ಧರ್ಮ. ನಾನು ಧರ್ಮವನ್ನು ಪಾಲನೆ ಮಾಡುವೆನು. ನನಗನುಜ್ಞೆಯನ್ನು ಕೊಡು, ತಾಯಿ.

ಗಾಂಧಾರಿ : ಧರ್ಮದ ರಹಸ್ಯವನ್ನು ನೀನು ತಿಳಿಯಲಾರೆ, ಕುಮಾರ. ಜನರು ಧರ್ಮದ ಸಲುವಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ಆತ್ಮವನ್ನೂ ಬಲಿಗೊಡುವರು. ಧರ್ಮವು ತ್ಯಾಗದ ಪವಿತ್ರಸ್ಥಾನ ; ಲೋಭದ ಜೀವಂತ ನರಕವಲ್ಲ. ನೀನು ಲೋಭಗ್ರಸ್ತನಾಗಿ ಪಾಂಡವರನ್ನು ನಾನಾ ರೀತಿಯಲ್ಲಿ ಹಿಂಸಿಸಿದೆ. ಮೋಸದಿಂದ ರಾಜ್ಯವನ್ನು ಅಪಹರಿಸಿದೆ; ತುಂಬಿದ ರಾಜಸಭೆಯಲ್ಲಿ ದ್ರೌಪದಿಯ ಮಾನಭಂಗಕ್ಕೆ ಪ್ರಯತ್ನಿಸಿ, ಸ್ತ್ರೀಜಾತಿಯ ಮಾತೃತ್ವವನ್ನು ಕಾಲಿಂದ ತುಳಿದೆ. ಸ್ತ್ರೀಯಲ್ಲಿ ಜನಿಸಿ, ಸ್ತ್ರೀಯರಿಂದ ಪಾಲಿತನಾಗಿ, ಕೊನೆಗೆ ಸ್ತ್ರೀಯರಿಗೆ ಸಹಜಸಿದ್ಧವಾದ ಸನ್ಮಾನವನ್ನು ನಿರಾಕರಿಸಿದೆ. ನಿನ್ನಂತಹ ಲೋಭಿಯು, ಧೂರ್ತನು, ನೀಚಾಶಯನು ಧರ್ಮವನ್ನು ತಿಳಿಯುವುದು ಹೇಗೆ ಸಾಧ್ಯ ? ತಿಳಿಯುವ ಇಚ್ಛೆ ಇದ್ದರೆ ಪಾಂಡವರೊಡನೆ ಸಂಧಿಗೆ ಸಮ್ಮತಿಸು.

ದುರ್ಯೋಧನ : (ಉತ್ತೇಜಿತನಾಗಿ) ಪಾಂಡವರು ಮಾಡಿದುದು ಧರ್ಮ ಸಮ್ಮತವಾದರೆ, ಆ ಧರ್ಮಕ್ಕೆ ಶತಾಧಿಕ ಧಿಕ್ಕಾರವಿರಲಿ. ಪತ್ನಿಯ ಅಪಮಾನವನ್ನು ನೋಡುತ್ತಾ ಎದುರಿಗೆ ಕುಳಿತಿರುವುದು ಕ್ಷತ್ರಿಯ ಧರ್ಮವಂತಿರಲಿ, ಮಾನವ ಧರ್ಮವೂ ಅಲ್ಲ. ಭಾನುಮತಿಗೆ ಅಥವಾ

Sri Vidyadhirathi Book Centre, Sringeri

CC-O. In Public Domain. Digitized by eGangotri

ನನ್ನ ಅಂತಃಪುರದ ಒಬ್ಬ ಸಾಮಾನ್ಯ ಚೇಟಿಗೆ ಇಂತಹ ಅಪಮಾನವಾಗಿದ್ದರೆ ನಾನೇನು ಮಾಡುತ್ತಿದ್ದೆನು ಬಲ್ಲೆಯ ? ಪಣಬಂಧವನ್ನು ನಿರಾಕರಿಸಿ, ಸಮಗ್ರ ಪೃಥ್ವಿಯೂ ನನಗೆ ಪ್ರತಿಕಕ್ಷಿಯಾಗಿ ನಿಂತಿದ್ದರೂ ಲಕ್ಷಿಸದೆ, ಆ ಅಪಮಾನದ ಪ್ರತಿರೋಧವನ್ನು ಮಾಡುತ್ತಿದ್ದೆನು. ಆದರೆ ಧರ್ಮಧುರೀಣರಾದ ಪಾಂಡವರು ಮಾಡಿದುದೇನು ? ನಿಸ್ಸಹಾಯಕನಾದ ಹೇಡಿಯೂ ಒಪ್ಪದಂತಹ ತಾಟಸ್ಥ್ಯಭಾವ ! ಅದಕ್ಕೋಸ್ಕರವಾಗಿಯೇ ಪಾಂಡವರಲ್ಲಿ ನನಗಷ್ಟೊಂದು ದ್ವೇಷ. ಅವರು ಭರತವಂಶದ ಕಲಂಕಸ್ವರೂಪರು. ಅವರನ್ನು ಜ್ಞಾತಿಗಳೆಂದು ಅಂಗೀಕರಿಸುವ ಇಚ್ಛೆಯೂ ನನಗಿಲ್ಲ. ಅವರನ್ನು ಸಮೂಲವಾಗಿ ನಾಶಮಾಡಿ ಶಂತನು ದುಷ್ಯಂತಾದಿ ನಮ್ಮ ಪೂರ್ವಜರ ಪುಣ್ಯಸ್ಮೃತಿಯನ್ನು ದುಷ್ಕೀರ್ತಿಕಲಂಕದಿಂದ ಉದ್ಧಾರಮಾಡುವುದೇ ಈ ಯುದ್ಧದ ಉದ್ದೇಶ. ನಾನದರ ಸಲುವಾಗಿ ದೀಕ್ಷಾಬದ್ಧನಾಗಿರುವೆನು. ನನ್ನನ್ನು ಹರಸಿ, ಯುದ್ಧಕ್ಕೆ ಅನುಜ್ಞೆಯನ್ನು ಕೊಡು, ತಾಯಿ.

ಗಾಂಧಾರಿ : ನನ್ನ ಆಶೀರ್ವಾದವನ್ನು ಬಯಸುವೆಯಾ, ಕುಮಾರ. ಈ ಜ್ಞಾತಿಹಿಂಸೆಗೆ ನನ್ನ ಶುಭಕಾಮನೆಯು ಅಷ್ಟೊಂದು ಅಗತ್ಯವೇ ನಿನಗೆ ? (ಚಿಂತಿಸಿ) ಆದರೆ ನೀನದನ್ನು ಹೊಂದಲಾರೆ. ದುಷ್ಟ ! ಈ ಅತ್ಯಾಚಾರಕ್ಕೆ ಅನುಜ್ಞೆಯನ್ನು ಕೊಡುವ ಮೊದಲು ನನ್ನ ಕಂಠವನ್ನು ಬಂಧಿಸಿ, ವಾಕ್ಸ್ಫೂರ್ತಿಯು ನಾಶವಾಗುವಂತೆ ಮಾಡುವೆನು. ಏಕೆಂದರೆ ನನ್ನ ಆಶೀರ್ವಾದವು ಕಂಠದಿಂದ ಹೊರಬೀಳುವ ಮೊದಲು ಈ ಉತ್ತಪ್ತ ಹೃದಯದ ದಾವಾಗ್ನಿಯಲ್ಲಿ ಕಾದು, ಅಗ್ನಿವೃಷ್ಟಿಯಂತೆ ಅದು ನಿನ್ನ ಮಸ್ತಕವನ್ನು ಸುಡುವುದು ; ವಿರುದ್ಧ ದೈವದ ಅಭಿಶಾಪದಂತೆ ನಿನ್ನ ಉತ್ಸಾಹವನ್ನು ಭಂಗಪಡಿಸುವುದು ! ಪಾಪಿಯ ಅನುತಾಪದಂತೆ ಹೆಜ್ಜೆ ಹೆಜ್ಜೆಗೂ ನಿನ್ನನ್ನು ಹಿಂಬಾಲಿಸುವುದು.....ನನ್ನ ಆಶೀರ್ವಾದವನ್ನು ಬಯಸಬೇಡ, ಪುತ್ರ. ಕಾಳ್ಗಿಚ್ಚನ್ನು ಊದಿ ಉರಿಮಾಡಲೇಕೆ ? ಅಗ್ನಿಮಯ ಶಿಲಾವರ್ಷವನ್ನು ಸುರಿಸುವ ಗಿರಿಕಂದರವನ್ನು ಪ್ರಯತ್ನಪೂರ್ವಕವಾಗಿ ಭೇದಿಸಲೇಕೆ ? ಹೋಗು ದುರ್ಯೋಧನ, ನೀನಿಲ್ಲಿಂದ ಹೊರಟುಹೋಗು. ನನ್ನ ಆಶೀರ್ವಾದವನ್ನು ಹೊಂದಲಾರೆ ನೀನು.

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ : ನೀನು ಪ್ರಕೃತಳಾಗಿಲ್ಲ, ತಾಯಿ. ನಾನು ಪುನಃ ನಿನ್ನನ್ನು ನೋಡುವೆನು (ಹೋಗುವನು)

ಗಾಂಧಾರಿ : ಹೇ ವಿಧಾತ! ತಾಯಿಯ ಹೃದಯವನ್ನೆಂತಹ ವಿಚಿತ್ರ ವಸ್ತುವಿನಿಂದ ನಿರ್ಮಿಸಿರುವೆ! ಇವನೆನ್ನ ಪುತ್ರನು. ನನ್ನ ನೂರು ಜನ ಮಕ್ಕಳಲ್ಲಿ ಇವನನ್ನು ಅತ್ಯಾದರದಿಂದ ಸಾಕಿದೆನು. ಈಗಿವನು ನನ್ನ ಮಾತನ್ನು ಕೇಳುತ್ತಿಲ್ಲ. ತನ್ನ ಅನೀತಿ ಅತ್ಯಾಚಾರಗಳಿಂದ ನನ್ನ ಜೀವನವನ್ನು ದುಃಖಮಯವಾಗಿ ಮಾಡುತ್ತಿರುವನು. ಆದರೂ ನಾನಿವನನ್ನು ತ್ಯಜಿಸಲಾರೆ. ನೋಡಿದಾಗ ಪ್ರೀತಿಯಿಂದ ಆಲಂಗಿಸುವ ಆಸೆ, ಪ್ರತಿಕ್ಷಣದಲ್ಲಿ ಅಸಹನೆಯಿಂದ ಮುಖವನ್ನು ಮುಚ್ಚಿಕೊಳ್ಳಬೇಕಾಗುವುದು. ಸಂತಪ್ತ ಹೃದಯದ ತೀವ್ರಶೋಕದಿಂದ ಶಪಿಸಲು ಬಾಯನ್ನು ತೆರೆಯುವೆನು. ಅಪ್ರಾರ್ಥಿತ ಆದರದ, ನಿರರ್ಥಕ ನಿಂದೆಯ ಮಾತುಗಳು ಹೊರಬೀಳುವುವು. ಈ ಸ್ವರ್ಗ ನರಕಗಳ ಹೋರಾಟವನ್ನು ನನ್ನ ಮಾನವ ಹೃದಯವು ಮತ್ತೆಷ್ಟು ದಿನಗಳು ಸಹಿಸಬಲ್ಲದು, ದೇವಾ. (ಧೃತರಾಷ್ಟ್ರನು ಬರುವನು)

ಧೃತರಾಷ್ಟ್ರ : ರಾಜಮಹಿಷಿಯೆಲ್ಲಿ ?

ಗಾಂಧಾರಿ : ನಾನು ರಾಜಮಹಿಷಿಯಲ್ಲ. ವಿಧಾತನು ನನ್ನನ್ನೊಬ್ಬ ದೀನ ಕೃಷಿಕನ ಪತ್ನಿಯನ್ನಾಗಿ ಮಾಡಿದ್ದರೆ ಚೆನ್ನಾಗಿದ್ದಿತು. ಆಗ ಈ ದುಃಖ ಭೋಗದ ಅಗತ್ಯವಿರಲಿಲ್ಲ. ರಾಜೇಂದ್ರ, ಇನ್ನೂ ಸಮಯವಿರುವುದು. ಈಗಲಾದರೂ ಈ ಯುದ್ಧವನ್ನು ನಿಲ್ಲಿಸು. ಸಂಧಿಗೊಪ್ಪುವಂತೆ ದುರ್ಯೋಧನನಿಗೆ ಆಜ್ಞೆಮಾಡು. ಕುರುವಂಶದ ರಕ್ಷಣೆಗಾಗಿ ಪಾಂಡವರ ಕ್ಷಮೆಯನ್ನು ಬೇಡು.

ಧೃತರಾಷ್ಟ್ರ : ವೀರಶ್ರೇಷ್ಠನಾದ ಪುತ್ರನು ಸಮರಸನ್ನದ್ಧನಾಗಿ ಯುದ್ಧ ಕ್ಷೇತ್ರಕ್ಕೆ ಹೊರಟಿರುವಾಗ ಕಾಪುರುಷರಂತೆ ನಾನವನನ್ನು ತಡೆಯುವುದೆ? ನನ್ನಿಂದಾಗದು.

ಗಾಂಧಾರಿ : ರಾಜೇಂದ್ರ, ಇದು ಸಾಮಾನ್ಯ ಯುದ್ಧವೆಂದು ತಿಳಿದೆಯ ? ಸಹೋದರರಂತೆ ಒಬ್ಬರನ್ನೊಬ್ಬರು ಪ್ರೀತಿಸುವುದು ಯಾರಿಗೆ ಸಹಜವೋ ಅಂತಹ ಭಾರತ ಸಂತಾನರು ಇಂದು ದ್ವೇಷಬದ್ಧರಾಗಿ ಒಬ್ಬರನ್ನೊಬ್ಬರು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಲ್ಲಲು ಹವಣಿಸುತ್ತಿರುವರು. ಕ್ಷಾತ್ರದ ಹೆಸರಿನಿಂದ ಧರ್ಮ, ಪ್ರೇಮ, ಮಮತೆ ಮುಂತಾದ ಮಾನವನ ಉಚ್ಚಪ್ರವೃತ್ತಿಗಳಿಗೆ ತಿಲಾಂಜಲಿಯನ್ನು ಕೊಟ್ಟು ಹಿಂಸೆಯ ಉನ್ಮಾದಕ ಸುರೆಯಿಂದ ಮತ್ತರಾಗಿ ಪಶುಗಳಂತೆ ನಡೆದುಕೊಳ್ಳುತ್ತಿರುವರು. ಆದರೂ ನೀನು ನೋಡುತ್ತಾ ಏನೂ ಮಾಡದೆ ಕುಳಿತಿರುವೆ! ಇದೇ ನಿನ್ನ ಧರ್ಮವೋ? ರಾಜದಂಡವನ್ನು ದೃಢಹಸ್ತದಿಂದ ಹಿಡಿದು ಶಾಂತಿಯನ್ನು ಸ್ಥಾಪಿಸು. ಈ ಭೀಭತ್ಸಕ ನರಮೇಧವು ನಿಲ್ಲಲಿ.

ಧೃತರಾಷ್ಟ್ರ : ಇದೊಳ್ಳೆಯ ಅಭಿನಯ, ಗಾಂಧಾರಿ.

ಗಾಂಧಾರಿ : (ಕೋಪದಿಂದ) ಅಭಿನಯವಲ್ಲ, ಅಂಧರಾಜ. ನಾನೇನು ಮಾಡಲಿ. ನಿನ್ನ ಬಾಹ್ಯಚಕ್ಷುವಿನಂತೆ ಆಂತರಿಕ ಚಕ್ಷುವೂ ಕಾಂತಿ ಹೀನವಾಗಿ ಅಂಧಕಾರಮಯವಾಗಿದೆ. ಇಲ್ಲವೇ ನನ್ನ ಕಣ್ಣ ಮುಂದಿರುವ ಈ ಭಯಾನಕ ದೃಶ್ಯವನ್ನು ನಿನಗೆ ತೋರಿಸುತ್ತಿದ್ದೆನು..... ನೋಡು, ಕುರುಕ್ಷೇತ್ರದಲ್ಲಿ ಹೆಣಗಳ ರಾಶಿಯ ಮೇಲೆ ಕುಳಿತು ನರ ಕಪಾಲದಲ್ಲಿ ರಕ್ತವರ್ಣದ ಸುರೆಯನ್ನು ಕುಡಿಯುತ್ತಿರುವ ದುರ್ಯೋಧನನ ಭೈರವ ಮೂರ್ತಿಯನ್ನು. ಬಂಧುಬಾಂಧವರು, ಗುರುಹಿರಿಯರು ಎಲ್ಲರೂ ಮೃತರಾಗಿ ಬಿದ್ದಿರುವರು. ರಣಾಂಗಣದಲ್ಲಿ ನೀನು, ನಾನು, ಮತ್ತಾರೂ ಇಲ್ಲ. ಆ ದುಃಖಮಯ ಮುಹೂರ್ತದಲ್ಲಿಯೂ ದುರ್ಯೋಧನನು ನಮ್ಮನ್ನು ನೋಡಿ ಎಷ್ಟೊಂದು ವಿಕಟವಾಗಿ ನಗುತ್ತಿರುವನು!? ಹಾ! ಆ ನಗುವು ವಜ್ರಧಾರೆಯಂತೆ ಹೃದಯವನು ಭೇದಿಸುತ್ತಿರುವುದು. ಅವನು ನನ್ನ ಕುಮಾರನಲ್ಲ, ಕುರುವಂಶದ ಮೃತ್ಯು! ಛೆ! ವಿಧಾತ, ನರಕದ ಸಮಸ್ತ ಶಕ್ತಿಗಳನ್ನೂ ಒಟ್ಟುಗೂಡಿಸಿ ಆ ನೀಚನನ್ನು ಸೃಷ್ಟಿಸಿದೆಯೋ ನೀನು!

ಧೃತರಾಷ್ಟ್ರ : ಕ್ಷಮಿಸು, ಗಾಂಧಾರಿ. ಈ ಅರ್ಥಹೀನ ಪ್ರಲಾಪಗಳನ್ನು ನಾನು ಕೇಳಲಾರೆ. (ಹೋಗುವನು)

ಗಾಂಧಾರಿ : (ಕ್ಷಣಕಾಲ ಧೃತರಾಷ್ಟ್ರನು ಹೋದ ದಾರಿಯನ್ನು ದಿಟ್ಟಿಸಿ) ಇಲ್ಲ. ಅವನೆಂತಹವನಾಗಲಿ ನನ್ನ ಪುತ್ರನೇ. ಅವನ ನಗುಮುಖವನ್ನು ನೋಡಿ ನನ್ನ ಹೃದಯದ ಸಹಸ್ರ ಯಾತನೆಗಳನ್ನು ಮರೆಯುವೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನು ಆತ್ಮಾಗ ನನ್ನ ಕಣ್ಣೀರಿನ ಕಟ್ಟೆಯೊಡೆಯುವುದು. ಅವನು ಕಾಲುಗಳಿಂದ ಒದ್ದರೂ ನಾನು ಪ್ರತಿಯಾಗಿ ಒಂದು ಮಾತನ್ನೂ ಹೇಳಲಾರೆ, ಕೋಪದಿಂದ ಹೊಡೆಯಲು ಎತ್ತಿದ ಕೈಗಳು ಆಶೀರ್ವಾದದಂತೆ ಅವನ ಮಸ್ತಕವನ್ನು ಮುಟ್ಟುವುವು. ತಾಯಿಯ ಪ್ರೇಮವು ಸ್ವರ್ಗದ ಪವಿತ್ರವಸ್ತು ! ಅದರಲ್ಲಿ ರಾಜನೀತಿಯ ವಂಚನೆಯಿಲ್ಲ. ಸಮಾಜದ ಹೃದಯಹೀನ ಕಾಠಿಣ್ಯವಿಲ್ಲ. ಧರ್ಮದ ನಿರ್ದಯ ನ್ಯಾಯವಿಲ್ಲ. ಜಗತ್ಕರ್ತೃವಿನ ಅನಾದಿ ಹೃದಯದಂತೆ ಶಾಂತಿಯ ನೆಲೆ, ಆನಂದದ ನಿವಾಸ, ಮೋಕ್ಷದ ರಾಜಪಥ. ದುರ್ಯೋಧನನು ದುರಾಶಾಪೀಡಿತನಾದ ನೀಚನಾಗಿರಲಿ, ಅದರಿಂದ ನನಗೇನು ? ಅವನೆನ್ನ ಪುತ್ರ ! ಪ್ರೀತಿ ಮತ್ತು ಮೋಕ್ಷ ! ಜಗತ್ತಿನ ಅನಿಯಂತ್ರಿತ ಆವೇಗಗಳಿಗೆ ವಶಳಾಗಿ ತಾಯಿಯು ಮಗನನ್ನು ತ್ಯಜಿಸುವುದಿಲ್ಲ.

(ದುರ್ಯೋಧನನು ಪುನಃ ಬರುವನು)

ದುರ್ಯೋಧನ : (ಮೃದುಕಂಠದಿಂದ) ಅಮ್ಮ, ಪುನಃ ಬಂದಿರುವೆನು.

ಗಾಂಧಾರಿ : ಬಾ, ಕುಮಾರ, ಎದುರಿನಲ್ಲಿ ಮೊಣಕಾಲೂರಿ ಕುಳಿತುಕೊ.

ದುರ್ಯೋಧನ : (ಹಾಗೆಯೇ ಮಾಡಿ) ನನ್ನನ್ನು ಆಶೀರ್ವದಿಸು ತಾಯಿ.

ಗಾಂಧಾರಿ : ಗಾಂಧಾರಿಯ ಅಗ್ನಿಮಯ ಸ್ಪರ್ಶದಿಂದ ಹುಲ್ಲು ಕಡ್ಡಿಯೂ ಕೂಡಾ ವಜ್ರಾಯುಧಕ್ಕಿಂತ ಕಠಿಣವಾಗುವುದು. ಹೋಗು ಕುಮಾರ ಅಪ್ರತಿಮ ಪೌರುಷದಿಂದ ರಣರಂಗದಲ್ಲಿ ಹೋರಾಡು, 'ಯತೋ ಧರ್ಮಸ್ತತೋಜಯಃ' ಯಾರಲ್ಲಿ ಧರ್ಮವಿರುವುದೋ ಅವರಿಗೆ ಜಯವಾಗುವುದು.

ದುರ್ಯೋಧನ : (ಎದ್ದು ಉತ್ಸಾಹದಿಂದ) ಹಾಗಾದರೆ ನನ್ನ ಜಯವು ಖಚಿತ. ನಾನು ಕಾಲೋಚಿತವಾದ ಕ್ಷತ್ರಿಯ ಧರ್ಮವನ್ನು ಎಂದಿಗೂ ಬಿಡುವುದಿಲ್ಲ.

ನಡೆವುದು, ನುಡಿವುದು, ಮುಡಿವುದು
ಕಡುಗಲಿಯಂತಿದುವೆ ಧರ್ಮಮರಸರ್ಗಿಳೆಯೊಳ್ ;
ನಡೆವೇಂ ನುಡಿವೇಂ ಪಡೆವೇಂ
ಪೊಡವಿಯನಲ್ಲದೊಡೆ ಮುಡಿದು ವೀರಸ್ವರ್ಗಂ (ಹೋಗುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಂಧಾರಿ : ನಡೆಯಲಿ, ನಡೆಯಲಿ. ಈ ಯುದ್ಧದ ಅನಂತ ಹಾಹಾಕಾರದಲ್ಲಿ ಸಮಗ್ರ ಆರ್ಯಾವರ್ತವೂ ಮುಳುಗಿ ಹೋಗಲಿ. ಭಾರತ ಸಂತಾನರು ನಿರ್ವಿಶೇಷವಾಗಲಿ. ಆದರಿಂದ ಗಾಂಧಾರಿಗಾಗುವ ನಷ್ಟವೇನು ? ಅಥವಾ ದೈವಲಿಪಿಯನ್ನು ಅಳಿಸಲು ಗಾಂಧಾರಿ ಯಾರು ? ನಡೆಯ ಬೇಕಾದುದು ನಡೆದೇ ನಡೆಯುವುದು. ಒಬ್ಬ ತಾಯಿಯ ಕಣ್ಣೀರಿನ ಸಲುವಾಗಿ ಕರ್ಮಪಥವು ಪ್ರತಿಬಂಧಿತವಾಗುವುದಿಲ್ಲ. ಕೃಷ್ಣ, ನಿನ್ನ ಅಗಣ್ಯ ಲೀಲೆಗಳಲ್ಲಿ ಇದೂ ಒಂದೆಂದು ತೋರುವುದು. ಈ ಯುದ್ಧದ ಬೀಜವನ್ನು ಬಿತ್ತುವ ಸಲುವಾಗಿಯೇ ಆ ದಿನ ನೀನು ರಾಜಸಭೆಗೆ ಬಂದದ್ದು. ಮಾಯಾವಿ, ನಿನ್ನ ಕಪಟನ್ನೀಗ ತಿಳಿದೆನು (ದೂರದಲ್ಲಿ ಶಂಖ ಧ್ವನಿ) ಇದೋ ಶಂಖಧ್ವನಿ ! ಕೃಷ್ಣನ ಪಾಂಚಜನ್ಯ ! ಕುರುಕ್ಷೇತ್ರದ ಮನುಷ್ಯ ಯಜ್ಞದ ಶ್ರೀಕಾರ ! ಇದೋ ಪುನಃ ! ಈ ಶಬ್ಧದಿಂದ ನನ್ನ ನರನಾಡಿಗಳಲ್ಲಿ ಇಂತಹ ವಿಚಿತ್ರ ಕಂಪನವೇಕೆ ! ಛೀ ! ಗಾಂಧಾರಿ, ನೀನು ಕ್ಷತ್ರಿಯ ನಂದಿನಿ ! ವೀರಮಾತೆ ! (ವಿದುರನು ಬರುವನು)

ವಿದುರ : ರಾಜಮಹಿಷಿ, ಯುದ್ಧವು ಪ್ರಾರಂಭವಾಯಿತು ! ಅದೋ ಕೇಳು ! ಪಾಂಚಜನ್ಯದ ಹೂಂಕೃತಿಯನ್ನು. ಗಾಂಡೀವದ ಠೇಂಕಾರವನ್ನು. ಭೀಮ ಘಟೋತ್ಕಚಾದಿ ಮಹಾರಥಿಕರ ವೀರಘೋಷವನ್ನು. ಇಂದು ಕುರುಕ್ಷೇತ್ರದ ಪ್ರಾರಂಭ.

ಗಾಂಧಾರಿ : ಇಂದು ಭಾರತವರ್ಷದ ಸಹಸ್ರಾಧಿಕ ವೀರಸಂತಾನರ ಉದಯ! ಕ್ಷಾತ್ರತೇಜದ ಪುಣ್ಯಾಗ್ನಿ! ಧರ್ಮದ ಅಂತ್ಯಹೋಮ ! ಇಂದಿನ ಯುದ್ಧವು ಅನಂತಕಾಲದ ಅಮರ ಪಟದಲ್ಲಿ ಅವಿನಾಶಿಯಾದ ಉಜ್ವಲ ವರ್ಣಗಳಿಂದ ಚಿತ್ರಿಸಲ್ಪಡುವುದು. ಮಾನವರು ಈ ಯುದ್ಧದ ಕಥೆ ಯನ್ನು ಭಕ್ತಿಯಿಂದ ಪಠಿಸಿ, ಭಯವಿಹ್ವಲಚಿತ್ತದಿಂದ ಆನಂದದ ಕಣ್ಣೀರು ಸುರಿಸುವರು. ನಡೆ, ವಿದುರ, ರಾಜಪ್ರಾಸಾದದ ಎತ್ತರವಾದ ಬಿಸಿಲುಮಚ್ಚನ್ನು ತೋರಿಸು. ಅಲ್ಲಿ ನಿಂತು ಕುರು ಪಾಂಡವರ ಸೈನ್ಯ ರಚನೆಯನ್ನು ನೋಡುವೆನು. ಇಂದು ಕುರುಕ್ಷೇತ್ರದ ಮಹಾಯುದ್ಧ ! ಆದರೆ ಈ ವೀರಾಂಗನೆಯ ಹೃದಯವು ಒಂದು ಯುದ್ಧದ ಸಲುವಾಗಿ ಕಂಪಿಸುವುದಿಲ್ಲ. (ಹೋಗುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವಿ ತೀ ಯಾ ೦ ಕ

ದೃಶ್ಯ ೧ : ಯುದ್ಧಭೂಮಿ

(ಕೃಷ್ಣ ಅರ್ಜುನರು ರಥಾರೂಢರಾಗಿ ಪ್ರವೇಶಿಸುವರು. ಪಾಂಡವರ ಪಕ್ಷದ ದಂಡಾಳುಗಳ ಜಯಜಯಕಾರವು ಕ್ಷಣಕಾಲ ಗಗನವನ್ನು ಭೇದಿಸಿ ಕ್ರಮೇಣ ರಣಾಂಗಣದ ಕೋಲಾಹಲದಲ್ಲಿ ಮಗ್ನವಾಗುವುದು)

ಅರ್ಜುನ : ವಾಸುದೇವ, ಉಭಯ ಸೈನ್ಯಗಳ ಮಧ್ಯೆ ರಥವನ್ನು ನಿಲ್ಲಿಸು. ನನ್ನೊಡನೆ ಯುದ್ಧಮಾಡಲು ಸಿದ್ಧರಾಗಿರುವ ವೀರರನ್ನೊಂದು ಸಾರಿ ನೋಡುವೆನು. ದುರ್ಯೋಧನನ ಹಿತಾಕಾಂಕ್ಷೆಯಿಂದ ಪ್ರಾಣಗಳನ್ನು ತೃಣಪ್ರಾಯವಾಗಿ ಪರಿಗಣಿಸಿ ಕುರುಕ್ಷೇತ್ರದಲ್ಲಿ ಸಂಮಿಳಿತರಾಗಿರುವ ಕ್ಷತ್ರಿಯ ಯೋಧರನ್ನು ನನಗೆ ತೋರಿಸು.

ಕೃಷ್ಣ : ನಿನ್ನ ಇಚ್ಛೆ, ಅರ್ಜುನ. (ರಥವನ್ನು ನಿಲ್ಲಿಸಿ) ನೋಡು, ಕೌರವನ ಚತುರಂಗ ಬಲ ಸಮೇತವಾದ ಸೈನ್ಯವು ಪ್ರಚಂಡ ಚಂಡಮಾರುತದಿಂದ ಉನ್ಮೀಲಿತವಾದ ಸಾಗರದಂತೆ ಕಾಣುತ್ತಿದೆ. ಇತ್ತ ನೋಡು, ಕೌರವೇಶ್ವರನು ತನಗೆ ಪ್ರಿಯರಾದ ಕರ್ಣ ದುಶ್ಶಾಸನರೊಡನೆ ಅಶ್ವಾರೂಢನಾಗಿ ಸೇನಾರಚನೆಯನ್ನು ಪರಿಶೀಲಿಸುತ್ತಿರುವನು. ಅವರ ಹಿಂದೆ ಸಿಂಧು ರಾಜನಾದ ಶಕುನಿ. ಜಯದ್ರಥನ ಬಲಗಡೆ ಒಂದೇ ವಿಧವಾದ ಚತುರಶ್ವ ರಥಗಳಲ್ಲಿ ಕುಳಿತಿರುವವರೇ ಕೌರವೇಶ್ವರನ ತೊಂಭತ್ತೆಂಟು ಮಂದಿ ಸಹೋದರರು. ಆ ಸಮೂಹದಲ್ಲಿಯೇ ದುರ್ಯೋಧನನ ಮಕ್ಕಳೂ ಇರುವರು. ಅವರ ರಕ್ಷಣೆಗಾಗಿ ಧನುರ್ಧಾರಿಯಾದ ದ್ರೋಣನು ಸ್ವಲ್ಪ ಮುಂದೆ ನಿಂತಿರುವನು. ದ್ರೋಣನ ಪಾರ್ಶ್ವದಲ್ಲಿ ವಲ್ಕಲಧಾರಿಯಾಗಿ ಗಂಭೀರ ಮುದ್ರೆಯಿಂದ ನಮ್ಮ ಕಡೆ ನೋಡುತ್ತಿರುವವನೇ ಅಶ್ವತ್ಥಾಮನು....ಇತ್ತ ನೋಡು, ಪಾರ್ಥ. ಸ್ವರ್ಣಮಯವಾದ ಅಷ್ಟಾಶ್ವಶೋಭಿತ ರಥದಲ್ಲಿ ಶ್ವೇತವಸನಧಾರಿಯಾಗಿ, ಕುಳಿತಿರುವ ಆ ಮಹಾಪುರುಷನೇ ಕೌರವರ ಸೇನಾಪತಿ, ಭೀಷ್ಮನು. ನರೆಗೂದಲಿನಿಂದ ತುಂಬಿದ ಅವನ ಮಸ್ತಕದಲ್ಲಿ ವಜ್ರಖಚಿತವಾದ ಅಧಿಕಾರ[illegible]ತ್ತಿರುವುದು, ನೋಡು, ಪಾರ್ಥ. ಆತನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಪಿತಾಮಹನು, ಭರತವಂಶದ ಕೀರ್ತಿಜ್ಯೋತಿ. ಯುದ್ಧವನ್ನು ಪ್ರಾರಂಭಿಸುವ ಮೊದಲು ಆ ಮಹಾಪುರುಷನಿಗೆ ವಂದಿಸು.

ಅರ್ಜುನ : ಆಜ್ಞೆ, ಮಾಧವ. ಭೀಷ್ಮ, ಕುರುಪಿತಾಮಹಾ, ನಿನಗೆ ವಂದಿಸುವೆನು. ಅರ್ಜುನನ ಪ್ರಣಾಮಗಳನ್ನು ಸ್ವೀಕರಿಸು. (ರಥದಿಂದಿಳಿದು ವಂದಿಸುವನು) ವಾಸುದೇವ, ನನ್ನ ಜೀವನದಲ್ಲಿ ಇದೆಂತಹ ಪವಿತ್ರ ಸಮಯ. ಈಗ ನನ್ನ ಮನಸ್ಸಿನಲ್ಲಿ ಹುಟ್ಟುತ್ತಿರುವ ಭಾವಗಳನ್ನು ನಿನಗೆ ತಿಳಿಸಬಲ್ಲೆನಾದರೆ.....ಹಾ ! ....ಇದೇನು, ಅರ್ಜುನನ ಪತನವೇ ಅಥವಾ ಉತ್ಥಾನವೇ !

ಕೃಷ್ಣ : ಮಿತ್ರ, ಏನಾಯಿತು ? ಏಕೆ ವಿಚಲಿತನಾಗಿರುವೆ ?

ಅರ್ಜುನ : ಏನು ಹೇಳಲಿ, ಕೃಷ್ಣ ! ಅಂಗ ಪ್ರತ್ಯಂಗಗಳಲ್ಲಿಯೂ ದಾರುಣ ಜ್ವಾಲೆ ! ಬೇಸಿಗೆಯ ಬಿಸಿಲಿನಿಂದ ಬೆಂದ ತಾವರೆಯಂತೆ ಮುಖವು ಬಾಡಿರುವುದು. ಶರೀರದಲ್ಲಿ ಕಂಪನವೂ, ರೋಮಾಂಚನವೂ ಹುಟ್ಟಿರುವುವು. ನಾಲಿಗೆಯು ಒಣಗುತ್ತಿರುವುದು. ಗಾಂಡೀವವು ಕೈಯಿಂದ ಕಳಚಿತು. ಕಾಲುಗಳಲ್ಲಿ ನಿಲ್ಲುವ ತ್ರಾಣವಿಲ್ಲ. ಕೃಷ್ಣಾ ! ನಾನು ನೋಡುತ್ತಿರುವುದೇನನ್ನು ! ಇವರೆಲ್ಲರೂ ನನ್ನ ಬಂಧು ಬಾಂಧವರು, ಗುರುಹಿರಿಯರು, ಜ್ಞಾತಿಗಳು, ಮಿತ್ರರು. ಇವರಲ್ಲೆಷ್ಟು ಜನರ ಧಮನಿಗಳಲ್ಲಿ ಭರತವಂಶದ ಪವಿತ್ರ ರಕ್ತವು ಹರಿಯುತ್ತಿರುವುದು ಬಲ್ಲೆಯ ! ರಾಜ್ಯದ ಮೇಲಿನ ಆಶೆಯಿಂದ ಇವರನ್ನು ವಧಿಸಲು ನನ್ನಿಂದಾಗದು. ಮೂರುಲೋಕದ ಸಾರ್ವಭೌಮ ಪದವಿಯ ಸಲುವಾಗಿಯೂ ನಾನೀ ಜ್ಞಾತಿವಧೆಗೆ, ಈ ಗುರುಹಿಂಸೆಗೆ ಕೈಹಾಕಲಾರೆನು. ರಥವನ್ನು ತಿರುಗಿಸು ಮಿತ್ರ. ನನಗೀ ಯುದ್ಧವು ಬೇಡ.

ಕೃಷ್ಣ : ಅರ್ಜುನ ! ಇದೇನು ?

ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಂ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಮರ್ಜುನ ॥

ಈ ವಿಷಮಾವಸರದಲ್ಲಿ ಇಂತಹ ಕಶ್ಮಲಭಾವವು ನಿನ್ನಲ್ಲಿ ಹೇಗೆ ಹುಟ್ಟಿತು ? ಕ್ಷತ್ರಿಯ ವೀರನಾಗಿ ಅನಾರ್ಯನಂತೆ ವರ್ತಿಸುವೆಯ? ತೆರೆದ ಸ್ವರ್ಗದ ಬಾಗಿಲನ್ನು ನಿರಾಕರಿಸಿ ನರಕದ ಮಾರ್ಗವನ್ನು ಹಿಡಿಯಬೇಡ.

Sri Vidyabharathi Book Centre, Sringeri

CC-O. In Public Domain. Digitized by eGangotri

ನರನೆಂದು ಹೆಸರಾಗಿ ಹೇಡಿಯೆಂಬ ನಿಂದೆಯನ್ನು ಸಹಿಸಲಾರೆ ನೀನು ಈ ದೌರ್ಬಲ್ಯವನ್ನು ತ್ಯಜಿಸಿ ಯುದ್ಧಕ್ಕೆ ಸಿದ್ಧನಾಗು, ಪಾರ್ಥ.

ಅರ್ಜುನ : ವಾಸುದೇವ,

ಕಥಂ ಭೀಷ್ಮ ಮಹಂ ಸಂಖ್ಯೇ ದ್ರೋಣಂಚ ಮಧುಸೂದನ !
ಇಷುಭಿಃ ಪ್ರತಿಯೋತ್ಸ್ಯಾಮಿ ಪೂಜಾರ್ಹಾವರಿಸೂದನ ॥

ಒಂದು ಸಾರಿ ಕುರುಸೈನ್ಯದ ಕಡೆ ದೃಷ್ಟಿಸಿ ನೋಡು. ಭೀಷ್ಮನು ನನ್ನ ಪೂಜ್ಯ ಪಿತಾಮಹನು. ಆಚಾರ್ಯ ದ್ರೋಣನು ಅಸ್ತ್ರ ಶಿಕ್ಷಣವನ್ನು ಕೊಟ್ಟ ಗುರು. ಪೂಜಾರ್ಹರಾದ ಇವರ ಮೇಲೆ ಬಾಣವನ್ನು ತೊಡು ವುದೇ ? ಗುರುವಧೆಯಿಂದ ಲಭಿಸುವ ಸಂಪತ್ತಿಗಿಂತ ಭಿಕ್ಷಾವೃತ್ತಿಯು ಶ್ರೇಯಸ್ಕರವು. ಬಂಧುಬಾಂಧವರ ರಕ್ತದಿಂದ ತೊಯ್ದ ರಾಜ ಭೋಗವನ್ನು ಅನುಭವಿಸುವ ಇಚ್ಛೆಯು ನನಗಿಲ್ಲ. ಅಶಾಶ್ವತವಾದ ರಾಜ್ಯ ಲೋಭಕ್ಕೋಸ್ಕರ ಶಾಶ್ವತ ಧರ್ಮವನ್ನು ನಾಶಮಾಡಲು ನನ್ನಿಂದಾಗದು. ಸ್ವಜನ ವಧೆಯು ನನಗೆ ಸಮ್ಮತವಿಲ್ಲ.

ಕೃಷ್ಣ : ಯಾರನ್ನು ಯಾರು ವಧಿಸುವುದು, ಅರ್ಜುನ ?

ದೇಹಿನೋಽಸ್ಮಿನ್ ಯಥಾದೇಹೇ ಕೌಮಾರಂ ಯೌವ್ವನಂ ಜರಾ ।
ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರನ ಮುಹ್ಯತಿ ॥

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ॥
ತಥಾ ಶರೀರಾಣಿ ವಿಹಾಯ ಜೀರ್ಣಾ.....
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥

ಅಳಿವಿಲ್ಲದ ಆತ್ಮವನ್ನು ವಧಿಸುವುದು ಅಸಂಭವ. ಮನುಷ್ಯನು ಹರಿದು ಹೋದ ಬಟ್ಟೆಗಳನ್ನು ಬಿಸುಟು, ಹೊಸ ಬಟ್ಟೆಗಳನ್ನು ಧರಿಸುವಂತೆ ಆತ್ಮನು ಜೀರ್ಣವಾದ ದೇಹವನ್ನು ತ್ಯಾಗಮಾಡಿ ಬೇರೊಂದು ದೇಹ ವನ್ನಾಶ್ರಯಿಸುವನು. ಮರಣವು ದೇಹದ ನಾಶ, ಅವಿನಾಶಿಯಾದ ಆತ್ಮದ ಅವಸಾನವಲ್ಲ. ದೇಹಕ್ಕೆ ಬಾಲ್ಯ, ಯೌವನ, ವಾರ್ಧಕ್ಯಾದಿ ಅವಸ್ಥೆಗಳು ಪ್ರಾಪ್ತವಾಗುವಂತೆ ಆತ್ಮನಿಗೆ ದೇಹಾಂತರ ಪ್ರಾಪ್ತಿಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಹಜವಾದುದು. ಪಂಡಿತನಾದವನು ಅದರ ಸಲುವಾಗಿ ದುಃಖಿಸುವುದಿಲ್ಲ. ಈ ಭೀಷ್ಮ, ದ್ರೋಣರು, ನೀನು, ನಾನು ಕೂಡಾ ಹಿಂದೆ ಅನೇಕ ಸಾರಿ ಜನಿಸಿರುವೆವು; ಮುಂದೆಯೂ ಜನಿಸುವೆವು. ಜನ್ಮ ಮೃತ್ಯುಗಳು ಆತ್ಮನ ಅನಂತ ಪ್ರವಾಸದ ಎರಡು ಅಂತರಗಳು. ಹುಟ್ಟಿದವನಿಗೆ ಮರಣವೂ, ಮೃತನಿಗೆ ಪುನರ್ಜನ್ಮವೂ ಮೊದಲೇ ನಿಶ್ಚಿತವಾಗಿರುವುದು. ಅವಶ್ಯವಾಗಿ ಆಗಬೇಕಾದುದಕ್ಕೆ ಮೂಢನಂತೆ ಚಿಂತಿಸಿ ಫಲವೇನು? ಯುದ್ಧವು ಕ್ಷತ್ರಿಯನ ಧರ್ಮ. ನಿನ್ನ ಧರ್ಮವನ್ನು ನೀನು ಪಾಲನಮಾಡು.

ಅರ್ಜುನ : ಜನಾರ್ಧನ, ಯುದ್ಧದ ಹೆಸರೆತ್ತಿದರೆ ನನ್ನ ಹೃದಯವು ಕಂಪಿಸತೊಡಗುವುದು. ದುಸ್ಸಹ ಶೈತ್ಯಾಧಿಕ್ಯದಿಂದ ಸರ್ವಾಂಗಗಳೂ ನಿಶ್ಚೇಷ್ಟಿತವಾಗುವುವು. ನಾನು ಹೇಡಿಯಲ್ಲ. ಆದರೂ ಪಾಪಭೀತಿಯಿಂದ ಯುದ್ಧ ವಿಮುಖನಾಗಿರುವೆನು. ಹೇಳು, ಯುದ್ಧದ ಹೊರತಾಗಿ ಕ್ಷತ್ರಿಯನಿಗೆ ಮತ್ತಾವ ಧರ್ಮವೂ ಇಲ್ಲವೋ?

ಕಾರ್ಪಣ್ಯ ದೋಷೋಪಹತಃ ಸ್ವಭಾವಃ ।
ಪೃಚ್ಛಾಮಿ ತ್ವಾಂ ಧರ್ಮ ಸಂಮೂಢ ಚೇತಾಃ ॥
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ ।
ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ॥

ಕೃಷ್ಣ : ಸ್ವಧರ್ಮಪಾಲನೆಯಲ್ಲಿ ಪ್ರಾಣಗಳನ್ನಾದರೂ ತ್ಯಜಿಸಬಹುದು, ಆದರೆ ಪರಧರ್ಮಾವಲಂಬನವು ಅನರ್ಥಕಾರಿ. ನೆನಪಿರಲಿ, ಅರ್ಜುನ, ಇದು ಧರ್ಮಯುದ್ಧ. ನೀನೀ ಯುದ್ಧದಿಂದ ನಿವೃತ್ತನಾದರೆ ಸ್ವಧರ್ಮವನ್ನು ಉಲ್ಲಂಘಿಸಿದ ಪಾಪಕ್ಕೆ ಗುರಿಯಾಗುವೆ. ಅಕೀರ್ತಿಭಾಜನನೆನಿಸುವೆ. ನಿನ್ನಂತಹ ಸಂಭಾವಿತನಿಗೆ ಅಕೀರ್ತಿಯು ಮರಣಕ್ಕಿಂತ ಘೋರತರವು. ಶತೃಗಳು ಹೇಡಿಯೆಂದು ಅಳಿಯುವರು, ಆತ್ಮೀಯರು ವಂಚಕನೆಂದು ನಿಂದಿಸುವರು. ಆದುದರಿಂದ ಈ ಮನೋವಿಕಾರವನ್ನು ಬಿಟ್ಟು ಸ್ವಧರ್ಮವನ್ನು ಪಾಲನಮಾಡು. ಕರ್ಮವು ಪೌರುಷದ ಲಕ್ಷಣ. ಅಕರ್ಮಣ್ಯನಾದ ಮಾನವನು ಜೀವಂತ ಶವದಂತೆ ಸರ್ವರ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಂದೆಗೂ ಪಾತ್ರನು. ಸರ್ವರಿಂದ ವರ್ಜಿತನು. ಅಜ್ಞಾನದಿಂದ ನೀನು ಕರ್ಮಭ್ರಷ್ಟನಾಗಬೇಡ, ಪಾರ್ಥ.

ಅರ್ಜುನ : ಈ ಯುದ್ಧದಲ್ಲಿ ನನ್ನ ಕರ್ಮವೇನು ? ಧರ್ಮನಾಶವೋ ? ಧರ್ಮ ರಕ್ಷಣೆಯೋ ? ಉಭಯಭ್ರಷ್ಟನಾಗದಂತೆ ನನಗೆ ಒಂದು ದಾರಿಯನ್ನು ತೋರಿಸು, ವಾಸುದೇವ.

ಕೃಷ್ಣ : ಕರ್ಮವು ಮಾನವಜೀವನದ ರಾಜಮಾರ್ಗ. ನೀನೀಗ ಕರ್ಮ ತತ್ಪರನಾಗು. ಫಲಾಫಲಗಳನ್ನು ಚಿಂತಿಸದೆ ನಿರ್ದಿಷ್ಟ ಕರ್ಮವನ್ನಾ ಚರಿಸು. ಏಕೆಂದರೆ, ಮಾನವನು ಕರ್ಮಕ್ಕೆ ಮಾತ್ರ ಅಧಿಕಾರಿ. ಫಲವು ಅವನ ಅಧೀನವಲ್ಲ. ಅನಾಸಕ್ತಚಿತ್ತನಾಗಿ ಸಿದ್ಧಿ ಅಸಿದ್ಧಿ ಗಳಲ್ಲಿ ಸಮಾನಭಾವದಿಂದ ಕಾರ್ಯಾಚರಣೆ ಮಾಡುವುದೇ ಮಾನವನ ಕರ್ತವ್ಯ. ಅಸ್ತ್ರಗಳನ್ನು ಧರಿಸು. ಕರ್ಮಯೋಗಿಯೆನಿಸು. ಇಹ ದಲ್ಲಿ ಕೀರ್ತಿಯನ್ನೂ ಪರದಲ್ಲಿ ಸ್ವರ್ಗವನ್ನೂ ಪಡೆಯುವೆ.

ಅರ್ಜುನ : ಈ ದಿವ್ಯವಾಣಿಯಿಂದ ನನ್ನ ಹೃದಯದ ಪ್ರಸುಪ್ತ ಪ್ರಜ್ಞೆ ಯನ್ನು ಎಚ್ಚರಗೊಳಿಸುತ್ತಿರುವ ನೀನು ಯಾರು ? ಕರ್ಮಯೋಗಿನ್. ಇಹಲೋಕದಲ್ಲಿ ನಿನ್ನ ನಿರ್ದಿಷ್ಟ ಕರ್ಮವೇನು ?

ಕೃಷ್ಣ : ಅರ್ಜುನ, ನಾವಿಬ್ಬರೂ ಅನೇಕ ಸಾರಿ ಇಹಲೋಕದಲ್ಲಿ ಜನ್ಮ ಗ್ರಹಣ ಮಾಡಿರುವೆವು. ನನಗೆ ಅವುಗಳ ನೆನಪಿರುವುದು, ನಿನಗಿಲ್ಲ. ನಾನು ಜನ್ಮಜರಾಹಿತನು. ಅವ್ಯಯಾತ್ಮನು. ಪಂಚಭೂತಗಳಿಗೊಡೆ ಯನು. ಯಾವಾಗ ಧರ್ಮದ ಪತನವೂ, ಅಧರ್ಮದ ಉದ್ಧಾರವೂ ಆಗುವುದೋ ಆಗ ನಾನು ಭೂಮಿಯಲ್ಲಿ ಜನ್ಮಗ್ರಹಣ ಮಾಡುವೆನು. ಸಜ್ಜನರ ಪಾಲನೆ, ದುಷ್ಟರ ನಾಶ, ಧರ್ಮಸಂಸ್ಥಾಪನೆ, ಇವು ನನ್ನ ಅವತರಣದ ಉದ್ದೇಶಗಳು.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜುನ : ನಿನ್ನ ಅವತಾರದ ಗುರುತುಗಳೇನು ? ನಿನ್ನನ್ನು ತಿಳಿಯುವ ಬಗೆ ಹೇಗೆ ? ಉತ್ತರವನ್ನು ಕರುಣಿಸು, ಮಹಾಮಹಿಮ.

ಕೃಷ್ಣ : ನಾನು ಮಾಯಾರೂಪಿ. ಧರಿತ್ರಿಯೆನಿಸಿ ಸರ್ವಪ್ರಪಂಚವನ್ನೂ ಧಾರಣ ಮಾಡುವೆನು. ಜಲರೂಪದಿಂದ ಪ್ರಾಣಿಗಳಿಗೆ ಜೀವನವನ್ನು ಕೊಡುವೆನು. ಅಗ್ನಿಮಯವಾಗಿ ಅವುಗಳ ಶಕ್ತಿಯನ್ನು ವರ್ಧಿಸುವೆನು. ವಾಯುವೆನಿಸಿ ಚಲಿಸುವೆನು. ಆಕಾಶವೆನಿಸಿ ವಿಶ್ವಜಗತ್ತನ್ನು ವ್ಯಾಪಿಸಿರುವೆನು. ಮನೋಬುದ್ಧ್ಯಹಂಕಾರವೆಂಬ ತ್ರಿಗುಣಾತ್ಮಕ ರೂಪದಿಂದ ಮಾನವನ ಪ್ರಜ್ಞೆಯನ್ನು ಜಾಗೃತಗೊಳಿಸಿ, ಆತ್ಮವಿಕಾಸದ ರಾಜಪಥದಲ್ಲಿ ನಡೆಸುವೆನು. ಬಹುರೂಪಾತ್ಮಕವಾದ ಜಗತ್ತಿನ ಪ್ರಭವ ಪ್ರಳಯಗಳಿಗೆ, ಉದಯ ವಿನಾಶಕ್ಕೆ ನಾನೇ ಕಾರಣನು. ಸರ್ವಶ್ರೇಷ್ಠವೂ ಸರ್ವಾಂತರ್ಯಾಮಿಯೂ ಆದ ಪರಾವಸ್ತುವು ನಾನು. ದಾರದಲ್ಲಿ ಮಣಿ ಸಮೂಹವು ಪೋಣಿಸಲ್ಪಟ್ಟಂತೆ ಈ ವಿಶ್ವಜಗತ್ತು ನನ್ನಲ್ಲಿ ಪ್ರೋತವಾಗಿರುವುದು. ನಾನು ನೀರಿನಲ್ಲಿ ರಸಾತ್ಮಕನು. ಚಂದ್ರ ಸೂರ್ಯರ ಕಾಂತಿಯು ನನ್ನದು. ವೇದಗಳಲ್ಲಿನ ಓಂಕಾರವು ನಾನು. ಮನುಷ್ಯರಲ್ಲಿನ ಪೌರುಷವು ನನ್ನದು. ಸಮಸ್ತ ಭೂತಗಳ ಆದಿಕಾರಣನು ನಾನು. ನಾನು ದೇವತೆಗಳಲ್ಲಿ ಇಂದ್ರನೂ, ವೇದಗಳಲ್ಲಿ ಸಾಮವೂ, ಪರ್ವತಗಳಲ್ಲಿ ಮೇರುವೂ, ರುದ್ರರಲ್ಲಿ ಶಂಕರನೂ, ಋಷಿಗಳಲ್ಲಿ ಭೃಗುವೂ ಆಗಿರುವೆನು. ಅರ್ಜುನ ನನ್ನ ವಿಭೂತಿಗಳು ಅಗಣ್ಯ ! ಅನಂತ ! ಅಬೋಧ ! ಅದರಲ್ಲೊಂದು ಅಲ್ಪಾಂಶದಿಂದ ಜಗತ್ತಿನ ಸೃಷ್ಟಿ ಸ್ಥಿತಿ ಪ್ರಳಯಗಳು ನಡೆಯುವುವು.

ಅರ್ಜುನ : ಪರಮಾತ್ಮ , ನಿನ್ನ ನುಡಿಗಳಿಂದ ನನ್ನ ಮೋಹವು ನಾಶವಾಯಿತು. ಹೃದಯದ ಅಂಧಃಕಾರವು ಹರಿಯಿತು. ಹೇ, ಯೋಗೀಶ್ವರ ! ನಿನ್ನ ಈಶ್ವರ ರೂಪವನ್ನು ತೋರಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡು.

ಏವಮೇತದ್ಯಥಾತ್ಥ ತ್ವಮಾತ್ಮಾನಂ ಪರಮೇಶ್ವರ ।
ದ್ರಷ್ಟುಮಿಚ್ಛಾಮಿ ತೇ ರೂಪಮೈಶ್ವರಂ ಪುರುಷೋತ್ತಮ ॥

ಕೃಷ್ಣ : ತಥಾಸ್ತು, ಪಾರ್ಥ. ನನ್ನ ಸಂಹಾರ ಮೂರ್ತಿಯ ದರ್ಶನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡು. ಕರಾಳ ಕಾಲಸ್ವರೂಪನು ನಾನು. ಕುರುಕ್ಷೇತ್ರದಲ್ಲಿ ಸಂಮಿಳಿತರಾಗುವ ಸಮಸ್ತ ಯೋಧರನ್ನೂ ಒಂದೇ ಸಾರಿಗೆ ಆಪೋಶನಮಾಡಿ ಉದರದಲ್ಲಿ ಧರಿಸಿಕೊಳ್ಳುವೆನು. ನೀನು ನಿಮಿತ್ತ ಮಾತ್ರಕ್ಕೆ ನನ್ನ ಸಹಾಯಕನಾಗು. ಯುದ್ಧದಲ್ಲಿ ಜಯಶಾಲಿಯಾಗಿ ಕೀರ್ತಿಯನ್ನು ಗಳಿಸುವೆ.

(ಸಂಹಾರ ಮೂರ್ತಿಯನ್ನು ತೋರಿಸುವನು. ರಂಗವು ಕತ್ತಲಾಗಿ ಮಧ್ಯದಲ್ಲಿ ವಿಕಟಾಕಾರವಾದ ದೊಡ್ಡ ಮುಖವೊಂದು ಗೋಚರ ವಾಗುವುದು. ಅದರ ವಿಶಾಲವಾದ ತೆರೆದ ಬಾಯಲ್ಲಿ ಕುರು ಪಾಂಡವ ಸೈನ್ಯವು ರಭಸದಿಂದ ಪ್ರವೇಶಿಸಿ ಅದೃಶ್ಯವಾಗುವುದು. ಸುತ್ತಲೂ ಹೃದಯ ಭೇದಿಯಾದ ಚೀತ್ಕಾರಧ್ವನಿ. ಅರ್ಜುನನು ಕಂಪಿತನಾಗಿ ಕಣ್ಣುಗಳನ್ನು ಮುಚ್ಚಿಕೊಳ್ಳುವನು)

ಅರ್ಜುನ : ಎಂತಹ ಭಯಾನಕ ರೂಪವಿದು ! ಮಾನವ ಚಕ್ಷುಗಳಿಂದ ಇದನ್ನು ನೋಡಲಾರೆನು, ಪ್ರಭು. ಕೈಕಾಲುಗಳು ಕಂಪಿಸುತ್ತಿರುವುವು. ವಾಕ್ಸ್ಫೂರ್ತಿಯಿಲ್ಲ. ಕರುಣಾಮಯನೆ, ನಿನ್ನ ಸೌಮ್ಯ ರೂಪವನ್ನು ಧಾರಣಮಾಡು. ಭಕ್ತಪರಾಧೀನ ! ಭಕ್ತರ ಹೃದಯದಲ್ಲಿ ಆನಂದ ತರಂಗಗಳನ್ನೆಬ್ಬಿಸುವ ಸುಧಾಮಧುರವಾದ ನಿನ್ನ ಮಂದಹಾಸವನ್ನು ತೋರಿಸು. ಗೋಪಿಕಾವಲ್ಲಭ ! ಲಲನಾ ಚಿತ್ತರಂಜಕವಾದ ನಿನ್ನ ಗಂಭೀರ ಸುಹಾಸವದನವೆಲ್ಲಿ ?

ಕೃಷ್ಣ : ಭಯವನ್ನು ಬಿಡು, ಪ್ರಾಣಸಖ. ಗದಾಚಕ್ರ ಶೋಭಿತವಾದ ನನ್ನ ಸೌಮ್ಯಮೂರ್ತಿಯ ದರ್ಶನ ಮಾಡು. ಸಾಗರ ಮಧ್ಯದ ಪ್ರಶಾಂತ ಗಂಭೀರ ಜಲರಾಶಿಯಲ್ಲಿ ನಿಶ್ಚಲವಾಗಿ ನಡೆಯುವ ನಾವೆಯಂತೆ ನಿನ್ನ ಹೃದಯವು ಶಾಂತವಾಗಲಿ. ಈ ಕುರುಕ್ಷೇತ್ರದ ರಕ್ತ ಪ್ರಳಯದಲ್ಲಿ ನಿನ್ನ ನೌಕೆಯು ಪಥಭ್ರಷ್ಟವಾಗದಂತೆ ನೋಡಿ ಕೊಂಡು ಸುರಕ್ಷಿತವಾಗಿ ದಡವನ್ನು ಮುಟ್ಟಿಸಲು ನಾನು ಕರ್ಣಧಾರ ನಾಗಿ ನಿಂತಿರುವೆನು. (ಸಾಗರಮಧ್ಯದಲ್ಲಿ ಸೌಮ್ಯಮೂರ್ತಿಯ ದರ್ಶನ)

ಅರ್ಜುನ : (ಅಂಜಲಿಬದ್ಧನಾಗಿ)

ತ್ವಮಾದಿದೇವಃ ಪುರುಷಃ ಪುರಾಣಃ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ

Sri Vidyabharathi Book Centre, Sringeri

CC-O. In Public Domain. Digitized by eGangotri

ವೇತ್ತಾಸಿ ವೇದ್ಯಂಚ ಪರಂ ಚ ಧಾಮ
ತ್ವಯಾತತಂ ವಿಶ್ವಮನಂತರೂಪ ॥
ವಾಯುರ್ಯಮೋಗ್ನಿರ್ವರುಣಃ ಶಶಾಂಕಃ
ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ
ನಮೋನಮಸ್ತೇऽಸ್ತು ಸಹಸ್ರಕೃತ್ವಃ
ಪುನಶ್ಚ ಭೂಯೋಽಪಿ ನಮೋನಮಸ್ತೇ ॥

[ತೆರೆ]

ದೃಶ್ಯ ೨ : ಕುರುಕ್ಷೇತ್ರದ ಮತ್ತೊಂದು ಭಾಗ

ಶಿಖಂಡಿ : (ಶಿಖಂಡಿಯು ಭೀತನಾಗಿ ಓಡಿಬರುವನು) (ಸ್ವಗತ) ವಸಂತದ ಅಲ್ಪವೃಷ್ಟಿಯಂತೆ ಆಕಸ್ಮಿಕವಾಗಿ ಹೃದಯದಲ್ಲಿ ಭಯ ಹುಟ್ಟಿರುವುದೇಕೆ? ರಣಕ್ಷೇತ್ರದಿಂದ ಪಲಾಯನ ಮಾಡಲು ಕಾಲುಗಳು ತವಕಿಸುತ್ತಿರುವುವು. ಎದುರಿಗೆ ನಿಂತ ತರುಣ ರಥಿಕರನ್ನು ನೋಡಿದರೆ, ಹೆಂಗಸಿನಂತೆ ಲಜ್ಜೆಯಿಂದ ತಲೆಬಾಗುವೆನು. ಶಸ್ತ್ರಾಸ್ತ್ರಗಳು ಕೈಗಳಿಗೆ ಕಠಿಣವಾಗಿ ತೋರುವುವು. ಕವಚವನ್ನು ಕಿತ್ತೊಗೆದು ಸೂಕ್ಷ್ಮವಾದ ಚೀನಾಂಶುಕವನ್ನು ತೊಡುವ ಆಶೆಯಾಗುತ್ತಿರುವುದು. ವೀರನಂತೆ ಕಾದುವ ಬದಲು ನಾರಿಯಂತೆ ಅಂತಃಪುರದ ಪುಷ್ಪಶಯನದಲ್ಲಿ ವಿಹರಿಸಲಿಚ್ಛಿಸುವೆನು. ಈ ವಿಚಿತ್ರ ಪರಿವರ್ತನೆಯು ಕಾರಣವೇನು?

(ಶಕುನಿಯು ಪ್ರವೇಶಿಸುವನು)

ಶಕುನಿ : (ಸ್ವಗತ) ಆಗಲೇ ಪ್ರಾರಂಭವಾಗಿರುವುದು! ಉತ್ತೇಜಕವಾದ ಮಾತುಗಳಿಂದ ಇವನ ಪೂರ್ವಸ್ಮೃತಿಯನ್ನೆಚ್ಚರಗೊಳಿಸಿ, ಈ ರಣಯಜ್ಞದ ಮಹಾಬಲಿಯನ್ನು ಮುಗಿಸುವೆನು.

ಶಿಖಂಡಿ : (ಸ್ವಗತ) ಇದೋ! ಪುನಃ ಯಾರೋ ಬಂದರು. ಕುರುಕ್ಷೇತ್ರದಿಂದ ನಾನು ಪಾರಾಗುವ ಆಸೆಯೇ ಇಲ್ಲವೋ? (ಹೊರಡುವನು)

ಶಕುನಿ : (ಅಡ್ಡ ಬಂದು, ಪ್ರಕಾಶ) ಏಕೆ? ಶಿಖಂಡಿ, ಯುದ್ಧರಂಗದಿಂದ ಓಡುವಂತಿದೆ.

ಶಿಖಂಡಿ : ಓಡುವುದು! ಇಲ್ಲ, ಇಲ್ಲ. ನಾನು ಓಡುವುದಿಲ್ಲ.

ಶಕುನಿ : ನಿನ್ನ ಮನಸ್ಸಿನ ಪರಿವರ್ತನೆಯನ್ನು ಬಲ್ಲೆನು, ರಾಜಪುತ್ರ.

Sri Vidyabharathi Book Centre, Sringeri

CC-O. In Public Domain. Digitized by eGangotri

ಚರ್ಮಗತವಾದ ನಿನ್ನ ಪೌರುಷವು ಈ ರಣದುಂದುಭಿಯ ತೀವ್ರ ಧ್ವನಿಗೆ ಬೆದರಿ ತಲೆಮರೆಸಿಕೊಂಡಿತಲ್ಲವೆ? ಅದಕ್ಕೆ ನೀನೇನು ಮಾಡಬಲ್ಲೆ? ನಿನ್ನ ಪುರುಷ ದೇಹದಲ್ಲಿ ಆಶಾಹತಗಳಾದ ಅಂಬೆಯ ಅಪೌರುಷ ಆತ್ಮವು ಪ್ರತಿಷ್ಠಿತವಾಗಿರುವುದು.

ಶಿಖಂಡಿ : (ಬೆಚ್ಚಿ) ಅಂಬೆ ಯಾರು?

ಶಕುನಿ : ಅಂಬೆಯು ಕಾಶಿರಾಜನ ಪುತ್ರಿ, ಭೀಷ್ಮನ ಪ್ರಣಯಿನಿ. ನೆನಪಾಗಲಿಲ್ಲವೇ? ಅಂಬೆ, ಅಂಬಿಕೆ, ಅಂಬಾಲಿಕೆ ಎಂದು ಮೂರು ಜನ ಸಹೋದರಿಯರು. ಭೀಷ್ಮನವರನ್ನು ಸ್ವಯಂವರದಲ್ಲಿ ಅಪಹರಿಸಿ ಹಸ್ತಿನಾವತಿಗೆ ಕರೆತಂದನು. ಅಂಬಿಕೆ ಅಂಬಾಲಿಕೆಯರು ವಿಚಿತ್ರ ವೀರ್ಯನ ಪಾಣಿಗ್ರಹಣ ಮಾಡಿದರು. ಅಂಬೆಯು ಭೀಷ್ಮನಲ್ಲಿ ಅನುರಕ್ತ ಳಾಗಿ ತನ್ನನ್ನು ವರಿಸುವಂತೆ ಬಹುವಾಗಿ ಬೇಡಿಕೊಂಡಳು. ಪ್ರತಿಜ್ಞಾ ಬದ್ಧನಾದ ಭೀಷ್ಮನು ಅದಕ್ಕೆ ಸಮ್ಮತಿಸಲಿಲ್ಲ. ಆಗ ಅವಳು ಹತಾಶಳಾಗಿ ಮಹಾದೇವನನ್ನು ಕುರಿತು ತಪವನ್ನಾಚರಿಸಿ, ಜನ್ಮಾಂತರದಲ್ಲಿ ಸ್ತ್ರೀಯಾಗಿ ಹುಟ್ಟಿ ಪುರುಷರೂಪದಿಂದ ಭೀಷ್ಮನನ್ನು ವಧಿಸುವಂತೆ ವರವನ್ನು ಪಡೆದಳು. ಆ ಅಂಬೆಯು ಈಗ ಶಿಖಂಡಿ—

ಶಿಖಂಡಿ : ನಿಲ್ಲಿಸು, ನಿಲ್ಲಿಸು. ವಿಸ್ಮೃತಿಯ ಅಂಧಕೂಪದಲ್ಲಿ ಮಿಂಚಿನ ಆರೋಪವನ್ನು ತರಲೇಕೆ? ಅಂಬೆಯ ಚರಿತ್ರೆಯನ್ನು ಕೇಳುವುದರಿಂದ, ಶಿಖಂಡಿಗೆ ಯಾವ ಲಾಭವೂ ಇಲ್ಲ. (ಗಮನೋದ್ಯುಕ್ತ)

ಶಕುನಿ : ನಿನ್ನನ್ನು ಬಿಡುವುದಿಲ್ಲ, ರಾಜಪುತ್ರ. (ಕೈ ಹಿಡಿಯುವನು) ಏಕೆ? ನನ್ನ ಸ್ಪರ್ಶದಿಂದ ಚಮಕಿತನಾಗುವ ಕಾರಣವೇನು? ಬಿರುಗಾಳಿಗೆ ಸಿಕ್ಕ ಬಾಳೆಯ ಮರದಂತೆ ನಿನ್ನ ದೇಹವು ಕಂಪಿಸುತ್ತಿರುವುದು. ಈಗ ಲಾದರೂ ತಿಳಿಯಿತೆ! ನೀನು ಶಿಖಂಡಿಯಲ್ಲ, ಅಂಬೆ! ಪುರುಷ ದೇಹಧಾರಿಣಿಯಾದ ಸ್ತ್ರೀ!

ಶಿಖಂಡಿ : ನಾನು ಅಂಬೆಯಲ್ಲ. ಅಂಬೆಯು ಸತ್ತಳು. ಅಗ್ನಿಯಲ್ಲಿ ದೇಹತ್ಯಾಗ ಮಾಡಿದಳು.

ಶಕುನಿ : ಅಂಬೆಯು ಸಾಯಲಿಲ್ಲ. ಜೀವಿಸಿರುವಳು. ಅವಳ ಆತ್ಮವು ಭೀಷ್ಮನ ಮರಣವನ್ನು ಹಾರೈಸುತ್ತಿರುವುದು. ನಿನ್ನ ಶಪಥ ನೆನಪಿರಲಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಷತ್ರಿಯನಂದಿನಿ. ನಿನ್ನ ಸುಖದ ಕನಸನ್ನು ಭಂಗಮಾಡಿ, ಯೌವನದ ಆನಂದ ಸುಧೆಯಲ್ಲಿ ವಿಷವನ್ನು ತುಂಬಿದ ಆ ಘಾತುಕನನ್ನು ಕ್ಷಮಿಸುವೆಯಾ ?

ಶಿಖಂಡಿ : (ಕ್ಷಣಕಾಲ ಸುಮ್ಮನಿದ್ದು ಬಳಿಕ ಕರುಣಾಸ್ವರದಿಂದ) ಅಂಬೆಯು ಭೀಷ್ಮನ ಪ್ರಣಯಿನಿ, ಸ್ವಯಂವರದಲ್ಲಿ ಅವನಿಂದ ಪರಿಗೃಹೀತೆಯಾದವಳು. ನಾರಿಯು ತನ್ನ ಪ್ರಿಯನನ್ನು ವಧಿಸುವುದಿಲ್ಲ. ಪ್ರಿಯನಿಗಾಗಿ ತನ್ನ ಸರ್ವಸ್ವವನ್ನೂ ತ್ಯಾಗಮಾಡುವಳು. ಪ್ರೇಮದ ಪ್ರರ್ಯಾವಸಾನವು ಹಿಂಸೆಯಲ್ಲ, ತ್ಯಾಗ.

ಶಕುನಿ : ಬಲಾತ್ಕಾರದಿಂದ ಅಪಹರಿಸಿದುದರ ಹೆಸರು ಸ್ವಯಂವರವೆಂದೋ ? ತಾನಾಗಿ ಕಾಮಿಸಿ ಬಂದ ಕನ್ಯೆಯನ್ನು ನಿರಾಕರಿಸುವುದು ಪ್ರಣಯದ ಲಕ್ಷಣವೋ ? ನಾರಿಯು ಎಲ್ಲವನ್ನೂ ಸಹಿಸಬಲ್ಲಳು. ಆದರೆ, ತನ್ನ ಅಭಿಮಾನಕ್ಕೆ ಎಳೆಯಷ್ಟು ಕುಂದಾದರೂ ಸಹಿಸಲಾರಳು. ಭೀಷ್ಮನು ನಿನ್ನ ಪ್ರಣಯವನ್ನು ಮಾತ್ರವಲ್ಲ, ಸ್ತ್ರೀತ್ವವನ್ನೇ ನಿರಾಕರಿಸಿದನು. ದೇಹ ವಿಕ್ರಯದಿಂದ ಜೀವಿಸುವ ಗಣಿಕೆಯಂತೆ ನಿನ್ನನ್ನು ನಡೆಸಿಕೊಂಡನು. ನೀನು ಭೀಷ್ಮನ ಪ್ರಣಯಿನಿಯಲ್ಲ, ಕ್ರೀತದಾಸಿ ! ಪರಿತ್ಯಕ್ತ ವೇಶ್ಯೆ ! ಸ್ವಯಂವರಕ್ಕಾಗಿ ಬಂದಿದ್ದ ಸಮಸ್ತ ರಾಜರ ಸಮ್ಮುಖದಲ್ಲಿ ನಿನ್ನನ್ನು ಅಪಹರಿಸಿ, ಲೋಕದ ದೃಷ್ಟಿಯಿಂದ ನಿನ್ನ ಕನ್ಯಾಭಾವವನ್ನು ಕಳೆದು, ಕೊನೆಗೆ ಕರುಣಾರಹಿತನಾಗಿ ತ್ಯಜಿಸಿದನು. ರಾಜಾಧಿರಾಜರ ಮಸ್ತಕವನ್ನಲಂಕರಿಸುವ ಮನೋಹರ ಪುಷ್ಪವನ್ನು ಕಾಡು ಹೂವಿಗಿಂತ ತುಚ್ಛವಾಗಿ ಮಾಡಿದನು. ರಾಜನಂದಿನಿ, ನಿನ್ನ ಧಮನಿಗಳಲ್ಲಿ ಕ್ಷತ್ರಿಯ ರಕ್ತವು ಹರಿಯುತ್ತಿಲ್ಲವೆ ? ಇಷ್ಟೊಂದು ಅವಮಾನವನ್ನು ನೀನು ಹೇಗೆ ಸಹಿಸಬಲ್ಲೆ ? ಏಳು ! ಶಪಥವನ್ನು ಪೂರ್ಣಮಾಡು. ಮಹಾದೇವನ ವರದಿಂದ ಭೀಷ್ಮನು ಇಂದು ನಿನ್ನಿಂದ ಪರಾಜಿತನಾಗುವನು. ಭಾರ್ಗವ ವಿಜಯೀ ಭೀಷ್ಮನನ್ನು ಪರಾಜಯ ಮಾಡಿದ ಯಶಃಪುಷ್ಪವು ನಿನ್ನ ಮುಡಿಯನ್ನೇರಲು ಕಾದಿರುವುದು.

ಶಿಖಂಡಿ : (ಉನ್ಮತ್ತನಂತೆ) ನೀನು ಯಾರು, ಸೇನಾನಿ ? ಮೋಹಾವೇಶದಿಂದ ಕ್ಷಣಕಾಲ ಕರ್ತವ್ಯ ಪರಾಙ್ಮುಖಳಾಗಿದ್ದ ಅಂಬೆಯ ಆತ್ಮವನ್ನು ಪುನಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಚ್ಚರಗೊಳಿಸಿದೆ..........ಭೀಷ್ಮ ! ದೇವವ್ರತ ! ಪ್ರಾಣವಲ್ಲಭ ! ಬ್ರಹ್ಮಚರ್ಯದ ಕಠೋರ ಪ್ರತಿಜ್ಞೆಯಿಂದ ಬದ್ಧವಾದ ನಿನ್ನ ದೇಹದಿಂದ ನಿನ್ನ ಅಮರ ಆತ್ಮವನ್ನು ಬೇರೆಮಾಡಿ ನನ್ನ.....ಈ ನಿನ್ನ ಪ್ರಣಯಿನಿಯ ಆತ್ಮದೊಡನೆ ಸೇರಿಸುವೆನು. ಆಗ ನಮ್ಮ ಪ್ರಣಯಕ್ಯಾವ ಅಡ್ಡಿಯೂ ಇರುವುದಿಲ್ಲ. ಅಂಬೆಯ ಶಪಥವು ಎಂದಿಗೂ ವಿಫಲವಾಗದು.

(ಹೋಗುವನು)

ಶಕುನಿ : ಇನ್ನು ಕುರುಕ್ಷೇತ್ರದ ರಣಯಜ್ಞವು ಪ್ರಾರಂಭವಾಗುವುದು.

(ಹೋಗುವನು)

[ತೆರೆ]

ದೃಶ್ಯ ೩ — ಯುದ್ಧಕ್ಷೇತ್ರ

ಕೃಷ್ಣ : (ರಥಾರೂಢರಾದ ಕೃಷ್ಣಾರ್ಜುನರು ಗೋಚರವಾಗುವರು) ಇದು ನಿನ್ನ ಪರೀಕ್ಷೆ, ಅರ್ಜುನ. ನೋಡು, ಭೀಷ್ಮನ ಪ್ರಳಯಾಂತಕ ಮೂರ್ತಿಯನ್ನು. ಉತ್ತರಕುಮಾರನು ಹತನಾದನು. ಐರಾವತ ಶ್ವೇತಾದಿ ಮಹಾವೀರರು ಪರಾಜಿತರಾದರು. ನಾಯಕನನ್ನು ಕಳೆದು ಕೊಂಡ ಹಿಂಡಿನಂತೆ ನಮ್ಮ ಸೈನಿಕರು ಚದುರಿ ದಿಕ್ಕು ದಿಕ್ಕಿಗೆ ಓಡುತ್ತಿರುವರು. ಇನ್ನು ಸಮಯವಿಲ್ಲ. ಮಹಾಸ್ತ್ರಗಳನ್ನು ಹೂಡು. ಭೀಷ್ಮನನ್ನು ವಧಿಸು.

(ಓಡುವ ಪದಾತಿಗಳ ಹಿಂದೆ ಭೀಷ್ಮನು ರಥಾರೂಢನಾಗಿ ಪ್ರವೇಶಿಸುವನು)

ಭೀಷ್ಮ : ಎಲ್ಲರೂ ಹೇಡಿಗಳು ! ಭೀಷ್ಮನ ಸಮ್ಮುಖದಲ್ಲಿ ದೃಢಹಸ್ತದಿಂದ ಬಿಲ್ಲನ್ನು ಹಿಡಿಯಬಲ್ಲವರಾರೂ ಇಲ್ಲ. ಕುರುಕ್ಷೇತ್ರದ ರಕ್ತದ ನದಿಯಲ್ಲಿ ನಡೆದಾಡಿ ಎಲ್ಲೆಲ್ಲಿಯೂ ಹುಡುಕಿದೆನು. ಮೃತ್ಯುವಿನ ಅಂತಿಮ ಆವೇಶದಿಂದ ಉತ್ತೇಜಿತನಾಗಿ ಸೈನ್ಯದಲ್ಲೆಲ್ಲಾ ಅರಸಿದೆನು. ಭೀಷ್ಮನನ್ನು ಎದುರಿಸಬಲ್ಲ ವೀರನು ಒಬ್ಬನಾದರೂ ದೊರಕಲಿಲ್ಲ. ಇಂದೇನು ಭಾರತವರ್ಷವು ನಿರ್ವೀರ್ಯವಾಯಿತೇ !

ಕೃಷ್ಣ : ಸಾವಧಾನ, ಗಾಂಗೇಯ. ಯದುಪತಿಯು ಅರ್ಜುನನ ಸಾರಥಿಯಾಗಿರುವವರೆಗೆ ಪಾಂಡವರು ಅಜೇಯರು !

ಭೀಷ್ಮ : ಎಂತಹ ಮಹಿಮಾಮಯವಾದ ದೃಶ್ಯವಿದು ! ನರನಾರಾಯಣರು

Sri Vidyabharathi Book Centre, Sringeri

CC-O. In Public Domain. Digitized by eGangotri

ಒಮ್ಮೆಗೇ ಒಂದೇ ರಥದಲ್ಲಿ! ಅಸ್ಥಿರ ಜಗತ್ತಿನೊಡನೆ ಸ್ಥಿರವಾದ ದೈವೀತ್ವದ ಸಮ್ಮೇಳನ! ಜೀವನ ಸಂಗ್ರಾಮದಲ್ಲಿಯೂ ಹಾಗೇ. ದೇಹವೆಂಬ ರಥಕ್ಕೆ ಕಟ್ಟಲ್ಪಟ್ಟ ನಶ್ವರವಾದ ಇಂದ್ರಿಯಾಶ್ವಗಳನ್ನು ಅನಶ್ವರವಾದ ಆತ್ಮನು ನಡೆಸುವನು. ಧನ್ಯ! ಧನಂಜಯ! ಆದರೆ ನಿನಗೀ ಯುದ್ಧದಲ್ಲಿ ಮಾತ್ರ ನಿಸ್ತಾರವಿಲ್ಲ. ಯುದ್ಧಕ್ಕೆ ಸಿದ್ಧನಾಗು.

ಅರ್ಜುನ : ತಾತ, ಈ ಬಾಲಕನ ಅವಿನಯವನ್ನು ಕ್ಷಮಿಸು. ಯುದ್ಧ ಕಾತರನಾದ ನಿನ್ನ ಸಮ್ಮುಖದಲ್ಲಿ ಇದೆನ್ನ ಉಪಹಾರ.

(ಅಂಬನ್ನು ಬಿಡುವನು. ಅದು ವ್ಯರ್ಥವಾಗುವುದು)

ಕೃಷ್ಣ : ಅರ್ಜುನ, ಈ ಮೃದು ಯುದ್ಧದಿಂದ ಯಾವ ಲಾಭವೂ ಇಲ್ಲ. ದೃಢಹಸ್ತನಾಗಿ ಅಂಬನ್ನು ಬಿಡು. ಭೀಷ್ಮನ ಅಭಿಮಾನವನ್ನು ವ್ಯರ್ಥಮಾಡು.

ಅರ್ಜುನ : ನನ್ನನ್ನೀ ಗುರುವಧೆಗೆ ಪ್ರಚೋದಿಸುವಿಯೇಕೆ, ಕೃಷ್ಣ? ನಾನು ಯುದ್ಧವನ್ನು ಅಪೇಕ್ಷಿಸಿದವನಲ್ಲ. ತಾತನ ಮೇಲೆ ಅಸ್ತ್ರಪ್ರಯೋಗ ಮಾಡುವ ಇಚ್ಛೆಯೆನಗಿಲ್ಲ.

ಭೀಷ್ಮ : ಕೃಷ್ಣ! ಮಾಯಾವಿ! ಈ ಬೆಂಕಿಯನ್ನು ಹೊತ್ತಿಸಿದುದು ಸಾಲದೆ ಘಾತುಕ ಕೆಲಸ ಮಾಡಲು ಇಲ್ಲಿಗೆ ಬಂದೆಯ? ಪಾಂಡವರನ್ನು ಯಜ್ಞ ಪಶುಗಳಂತೆ ಹಿಡಿದು ತಂದು ಕುರುಕ್ಷೇತ್ರದ ಬಲಿಪೀಠದಲ್ಲಿ ನನ್ನ ಬಾಣಗಳಿಗೆ ಬಲಿಕೊಡುವುದೇ ನಿನ್ನ ರಾಜತಂತ್ರದ ಪರಾಕಾಷ್ಠೆಯೆಂದು ತೋರುವುದು! ಕೇಳು, ಇಂದಾರಿಗೂ ಉಳಿವಿಲ್ಲ. ಭಾರ್ಗವ ವಿಜಯೀ ಭೀಷ್ಮನಿಂದು ದುರ್ಯೋಧನನನ್ನು ಅಜಾತಶತ್ರುವಾಗಿ ಮಾಡಲು ಶಪಥಗೈದಿರುವನು. ನಿನ್ನ ಇಷ್ಟದೈವವನ್ನು ಸ್ಮರಿಸು, ಧನಂಜಯ. ವಾಸುದೇವಾ, ಶಕ್ತಿಯಿದ್ದಲ್ಲಿ ನಿನ್ನ ಗೆಳೆಯನನ್ನು ರಕ್ಷಿಸು.

(ಬಾಣವನ್ನು ಬಿಡುವನು. ಅರ್ಜುನನನ್ನು ರಕ್ಷಿಸಲು ಕೃಷ್ಣನು ಬಾಣವನ್ನು ತಡೆಗಟ್ಟಿ ಬಾಧೆಗೀಡಾಗುವನು.)

ಕೃಷ್ಣ : ನನ್ನ ದೇಹವು ಜರ್ಝರಿತವಾಗುತ್ತಿರುವುದು, ಅರ್ಜುನ. ಸೀ ನಿಂತಹ ಕಾಪುರುಷನೆ! ಹೋಗು ನಿನ್ನ ಸಹಾಯವು ಬೇಡ, ಇಂದು ಕೃಷ್ಣನ ಪ್ರಸುಪ್ತಶಕ್ತಿಯು ಜಾಗರಿತವಾಗಿ ಕುರುಕ್ಷೇತ್ರದಲ್ಲೊಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ನವಪ್ರಳಯುವನ್ನು ಸೃಷ್ಟಿಸುವುದು. ಭೀಷ್ಮ, ಮರಣಕ್ಕೆ ಸಿದ್ಧನಾಗು.

(ಚಕ್ರಹಸ್ತನಾಗಿ ರಥದಿಂದಿಳಿದು ಭೀಷ್ಮನ ಮೇಲೆ ಬೀಳುವನು)

ಭೀಷ್ಮ : ಬಾ, ಮಾಧವ. ನನ್ನ ಮನೋಭೀಷ್ಟವನ್ನು ಪೂರ್ಣಮಾಡು. ಚಕ್ರಪಾಣಿ, ನಿನ್ನ ಆವೇಗವನ್ನು ನಾನು ಅಭಿನಂದಿಸುವೆನು. ನನ್ನನ್ನು ಸಂಹಾರಮಾಡು. ದೇವವ್ರತ ಭೀಷ್ಮನ ಕೀರ್ತಿಜ್ಯೋತಿಯು ನಿನ್ನ ಚಕ್ರದ ಜ್ವಲಂತ ಪ್ರಭಾಮಾಲಿಕೆಯಿಂದ ಪರಿವೇಷ್ಟಿತವಾಗಿ ಮೂರು ಲೋಕದಲ್ಲಿಯೂ ದ್ವಿತೀಯ ಸೂರ್ಯನಂತೆ ಬೆಳಗಲಿ. ನಾನು ಅಪೇಕ್ಷಿಸುತ್ತಿದ್ದುದು ಇಂತಹ ಮರಣವನ್ನು. ಭಕ್ತನು ತಲೆಬಾಗಿ ನಿಂತಿರುವನು. ಪ್ರಹಾರಮಾಡು. ಪ್ರಭು, ಯಾವ ಚರಣಗಳ ಸ್ಪರ್ಶದಿಂದ ನನ್ನ ಮಾತೆಯಾದ ಜಾಹ್ನವಿಯು ಸರ್ವಲೋಕ ಪಾವನೆಯೆನಿಸಿದಳೋ ಆ ಪದಪ್ರಾಂತದಲ್ಲಿ ನನ್ನ ಛಿನ್ನ ಮುಂಡಕ್ಕೆ ಆಶ್ರಯವನ್ನು ಕೊಡು. ನನ್ನ ಯುದ್ಧತೃಷ್ಣೆಯನ್ನು ಶಾಂತಮಾಡು.

ಅರ್ಜುನ : (ರಥದಿಂದಿಳಿದು ಬಂದು ಕೃಷ್ಣನನ್ನು ತಡೆದು) ಶಾಂತನಾಗು. ಮಹಾವೀರ. ಈ ಯುದ್ಧದಲ್ಲಿ ಅಸ್ತ್ರಧಾರಣ ಮಾಡುವುದಿಲ್ಲವೆಂಬ ನಿನ್ನ ಶಪಥವನ್ನು ಮರೆಯಬೇಡ. ನೀನು ಪಾಂಡವರ ಏಕಮಾತ್ರ ಗತಿ. ನಿನ್ನ ಸಮ್ಮುಖದಲ್ಲಿ ಪ್ರತಿಜ್ಞೆ ಮಾಡುವೆನು. ಇಂದಿನ ಯುದ್ಧದಲ್ಲಿ ಭೀಷ್ಮನ ಪರಾಜಯು ಖಂಡಿತವೆಂದು ತಿಳಿ.

ಶಿಖಂಡಿ : (ಶಿಖಂಡಿಯು ಆವಸರದಿಂದ ಬರುವನು) ನಿನ್ನ ಪ್ರತಿಜ್ಞೆಯು ವ್ಯರ್ಥ, ಅರ್ಜುನ. ಶಿಖಂಡಿಯು ಜನ್ಮಗ್ರಹಣ ಮಾಡಿರುವುದು ಭೀಷ್ಮನ ನಾಶಕ್ಕಾಗಿ.

ಭೀಷ್ಮ : ಯಾರಿದು ! ಈ ಬಾಲಕನ ದರ್ಶನದಿಂದ ನನ್ನ ಹೃದಯುವು ಕಂಪಿಸುವುದೇಕೆ ? ಇವನ ತೀಕ್ಷ್ಣ ದೃಷ್ಟಿಯು ಮಿಂಚಿನಂತೆ ವಿಸ್ಮೃತಿಯ ಅಂಧಕಾರವನ್ನು ಭೇದಿಸಿ, ಬಹುದಿನಗಳ ಹಿಂದಿನ ದುಃಖಮಯ ಘಟನೆಗಳನ್ನು ನೆನಪಿಗೆ ತರುತ್ತಿರುವುದೇಕೆ ! ಅಂಬೆ ! ನನ್ನಿಂದ ಪರಿತ್ಯಕ್ತಳಾದ ಕಾಶಿರಾಜನ ಮಗಳು ಅಂಬೆ ! ಪ್ರಣಯದಲ್ಲಿ ಹತಾಶಳಾಗಿ ಕಣ್ಣೀರಿನ ಕೋಡಿಯಿಂದ ದೇಹವನ್ನು ಸವೆಸಿದ ನಾರಿ ! ನಾರೀ ಸಹಜವಾದ ಮೃದುಭಾವವನ್ನು ತ್ಯಜಿಸಿ, ಹಿಂಸೆಯ ಚೋದನೆಯಿಂದ ಪ

Sri Vidyabharathi Book Centre, Sringeri

CC-O. In Public Domain. Digitized by eGangotri

ನಪುಂಸಕ ದೇಹವನ್ನು ಧಾರಣ ಮಾಡಿರುವಳು. ಅಂಬೆ, ಇಂದು ನಿನ್ನ ವೇಷವು ಎಷ್ಟೊಂದು ವಿಚಿತ್ರ ! ಕೈಯಲ್ಲಿ ಅಸ್ತ್ರ ! ಕಣ್ಣಿನಲ್ಲಿ ವಿಷ ! ಹೃದಯದಲ್ಲಿ ಭೀಷ್ಮನನ್ನು ವಧಿಸುವ ಉತ್ಕಟೇಚ್ಛೆ !

ಶಿಖಂಡಿ : ದೇವವ್ರತ, ಇದು ನಿನ್ನ ಮರಣವಲ್ಲ, ವಿಮೋಚನೆ ! ಬ್ರಹ್ಮಚರ್ಯದ ಭೀಷಣ ಪಂಜರದಲ್ಲಿ ಬಂಧಿತವಾಗಿದ್ದ ಪ್ರಣಯ ವಿಮುಖವಾದ ಭೀಷ್ಮನ ಆತ್ಮವನ್ನು ನಾನಿಂದು ಮುಕ್ತವಾಗಿ ಮಾಡುವೆನು. ಬಾ ಹೃದಯೇಶ್ವರ, ಈ ದಿನ ನಿನ್ನನ್ನು ವಧಿಸಿ, ನಾನೂ ಸಾಯುವೆನು. ಇದು ನಮ್ಮ ಮರಣವಲ್ಲ, ಮಹಾಮಿಲನ ! ಅಂಬೆಯ ಅಮರ ಪ್ರೇಮದ ಅಮರ ನಿರ್ವಾಣ !

ಭೀಷ್ಮ : ಇಷ್ಟೊಂದು ವಂಚನೆಯೇ, ವಾಸುದೇವ ? ಭೀಷ್ಮನ ಬಾಣಗಳಿಗೆ ಬೆದರಿ ಈ ನಪುಂಸಕನ ಶರಣು ಹೋದೆಯಾ ? ನಿನ್ನ ಅಭಿಸಂಧಿಯು ಫಲಿಸಲು ನನ್ನ ಮರಣವು ಆಗತ್ಯವಾದರೆ, ಇದೋ ಅಸ್ತ್ರಗಳನ್ನು ತ್ಯಾಗ ಮಾಡುವೆನು. ಸ್ತ್ರೀಯರು ಮತ್ತು ನಪುಂಸಕರ ಸಮ್ಮುಖದಲ್ಲಿ ಭೀಷ್ಮನು ನಿಲ್ಲುವುದೂ ಇಲ್ಲ. ಸಾರಥಿ, ರಥವನ್ನು ತಿರುಗಿಸು.

(ನಿಷ್ಕ್ರಮಿಸುವನು)

ಕೃಷ್ಣ : ಶಿಖಂಡಿ, ಬೆದರಬೇಡ ವತ್ಸ. (ಅರ್ಜುನನ ಬತ್ತಳಿಕೆಯಿಂದೊಂದು ಅಂಬನ್ನು ತೆಗೆದುಕೊಂಡು) ಈ ಮಂತ್ರಪೂರಿತವಾದ ಮಹಾಸ್ತ್ರವನ್ನು ತೊಡು. ಭೀಷ್ಮನನ್ನು ವಧಿಸು.

(ಶಿಖಂಡಿಯು ಅಂಬನ್ನು ಹೂಡುತ್ತಾ ಹೋಗುವನು.....ನೇಪಥ್ಯದಲ್ಲಿ)

ಭೀಷ್ಮ : ಹಾ ! ಹತನಾದೆನು ! ಹತನಾದೆನು ! ಇದು ಶಿಖಂಡಿಯ ಬಾಣವಲ್ಲ. ಅರ್ಜುನನ ಮಂತ್ರಪೂರಿತವಾದ ದಿವ್ಯಾಸ್ತ್ರ. ವಂಚನೆಯ ಮೇಲೆ ಕೂಟ ಯುದ್ಧದ ಮಹತ್ಪಾಪ !

ಅರ್ಜುನ : ನಾನೀ ನಿಂದೆಯನ್ನು ಸಹಿಸಲಾರೆ. ಕೃಷ್ಣ !

ಕೃಷ್ಣ : ಅತ್ತ ನೋಡು. ಭೀಷ್ಮನು ಹತನಾಗಿ ಭೂಮಿಗೆ ಬೀಳುತ್ತಿರುವನು. ಬಾಣಗಳನ್ನು ಹೂಡು, ಅರ್ಜುನ. ಆ ವೀರ ಶಿಖಾಮಣಿಗೆ ಉಚಿತವಾದ ಶಯ್ಯೆಯನ್ನು ಅಂಬುಗಳಿಂದ ರಚಿಸು. ದೇವವ್ರತನ ದೇಹವು ಭೂಮಿಯಲ್ಲಿ ಉರುಳದಿರಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

(ಅರ್ಜುನನು ಬಾಣಗಳನ್ನು ಬಿಡುವನು. ದೃಶ್ಯ ಪರಿವರ್ತನದಿಂದ ಶರಶಯ್ಯೆಯಲ್ಲಿ ಭೀಷ್ಮನು ಗೋಚರಿಸುವನು.)

ಅರ್ಜುನ : (ಮಣಿದು) ಕ್ಷಮಿಸು, ತಾತ. ಈ ಮಹತ್ಪಾಪದ ಭಾರದಿಂದ ನನ್ನನ್ನುದ್ಧಾರಮಾಡು. ನಾನಿಂದು ಇಚ್ಛಾಪೂರ್ವಕವಾಗಿ ಭರತಾನ್ವಯದ ಅಂತಿಮ ಪುಣ್ಯಜ್ಯೋತಿಯನ್ನು ಊದಿ ಆರಿಸಿದೆನು. ಆ ಪಾಪಮಯ ನಿಶ್ವಾಸದೊಡನೆ ನನ್ನ ಪ್ರಾಣವಾಯುವೂ ಹಾರಿಹೋಗಲಿಲ್ಲವೆಂಬುದೇ ನನ್ನ ಏಕಮಾತ್ರ ಚಿಂತೆ.

ಭೀಷ್ಮ : ನಾನು ಅಪೇಕ್ಷಿಸಿದುದು ಇಂತಹ ಮರಣ. ಅದನ್ನು ನೀನೆನಗೆ ಕೊಟ್ಟೆ. ಅರ್ಜುನ, ಯುದ್ಧಶ್ರಾಂತವಾಗಿದ್ದ ಭೀಷ್ಮನ ಆತ್ಮವು ಈ ದಿನ ಶಾಂತವಾಯಿತು.

ದೃಶ್ಯ ೪ — ಪಾಂಡವರ ಶಿಬಿರ

ಯುಧಿಷ್ಠಿರ : (ಭೀಮ ಯುಧಿಷ್ಠಿರರು ಮಾತಾಡುತ್ತಾ ಪ್ರವೇಶಿಸುವರು) ಹತ್ತು ದಿನಗಳ ಘೋರ ಯುದ್ಧದ ತರುವಾಯ ಭೀಷ್ಮನು ಪರಾಜಿತನಾದನು. ಇನ್ನು ನಮ್ಮ ವಿಜಯ ಸೂರ್ಯನು ಉದಯನಾದಂತೆಯೇ ಎಂದು ಭಾವಿಸಿದ್ದೆ. ದ್ರೋಣನ ಚಕ್ರವ್ಯೂಹವನ್ನು ನೋಡಿ ನನ್ನ ಆಶೆಯು ಭಂಗವಾಯಿತು.

ಭೀಮ : ವ್ಯೂಹದ ಮಹಾದ್ವಾರದಲ್ಲಿ ಸ್ವತಃ ದ್ರೋಣನೇ ಧನುರ್ಧಾರಿಯಾಗಿ ನಿಂತಿರುವನು. ಅವನನ್ನು ಜಯಿಸಿ ವ್ಯೂಹವನ್ನು ಭೇದಿಸುವುದು ಯಾರಿಗೂ ಸಾಧ್ಯವಿಲ್ಲ. ನಿನ್ನೆಯ ದಿನ ನಾನು ಪ್ರಯತ್ನಿಸಿ ನಿರಾಶನಾಗಿ ಹಿಂತಿರುಗಿದೆನು.

ಯುಧಿ : ಕೃಷ್ಣಾರ್ಜುನರು ಇಲ್ಲಿದ್ದರೆ ಚೆನ್ನಾಗಿತ್ತು. ಅರ್ಜುನನು ವ್ಯೂಹಭೇದ ಪದ್ಧತಿಯನ್ನು ತಿಳಿದಿದ್ದನು.

ಭೀಮ : ಕೃಷ್ಣಾರ್ಜುನರು ಯುದ್ಧಭೂಮಿಯ ಮತ್ತೊಂದು ಪಾರ್ಶ್ವದಲ್ಲಿ ಶಂಸಪ್ತಕರೊಡನೆ ಕಾದಾಡುತ್ತಿರುವರು. ಅವರು ಬೇಗ ಹಿಂದಿರುಗುವ ಸಂಭವವಿಲ್ಲ.

ಯುಧಿ : ಈಗಿನ ಉಪಾಯವೇನು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಭೀಮ : ಜಾಗ್ರತೆಯಾಗಿ ನಾವೊಂದು ಉಪಾಯವನ್ನು ಚಿಂತಿಸಲೇಬೇಕು. ಇಲ್ಲವೇ ಪರಾಜಯವು ಖಂಡಿತ. (ಅಭಿಮನ್ಯುವಿನ ಪ್ರವೇಶ)

ಅಭಿಮನ್ಯು : ಇದೆಂತಹ ಮಾತು, ದೊಡ್ಡಪ್ಪ? ನಿನ್ನ ಕೈಯಲ್ಲಿ ಈ ಗದೆ ಯಿರುವಾಗ, ನನ್ನ ಪೂಜ್ಯ ತಂದೆಯ ಕಪಿಧ್ವಜವು ಯುದ್ಧಭೂಮಿ ಯಲ್ಲಿ ಹಾರಾಡುತ್ತಿರುವಾಗ ಪಾಂಡವರಿಗೆ ಅಪಜಯವೇ? ಈಗ ನಮಗೊದಗಿರುವ ಅಂತಹ ಆಪತ್ತೇನು?

ಯುಧಿ : ಅಭಿಮನ್ಯು, ದ್ರೋಣನ ಚಕ್ರವ್ಯೂಹವನ್ನು ಭೇದಿಸುವ ಶಕ್ತಿ ನಮಗಿಲ್ಲ. ವ್ಯೂಹದಿಂದ ರಕ್ಷಿತರಾದ ಕೌರವ ಯೋಧರ ಬಾಣ ಪರಂಪರೆಗಳಿಂದ ನಮ್ಮ ಸೈನ್ಯವು ಹತವಾಗುತ್ತಿರುವುದು.

ಅಭಿಮನ್ಯು : ಇದಕ್ಕೋಸ್ಕರ ಇಷ್ಟೊಂದು ಚಿಂತೆಯೆ! ಜ್ಯೇಷ್ಠಪಿತ, ನಾನು ಆ ವ್ಯೂಹವನ್ನು ಭೇದಿಸುವೆನು. ಅದಕ್ಕೆ ಅನುಮತಿಯನ್ನು ಕೇಳುವುದಕ್ಕಾಗಿಯೇ ನಾನಿಲ್ಲಿಗೆ ಬಂದದ್ದು.

ಭೀಮ : ಭಾಪು! ಅಭಿಮನ್ಯು, ನಮ್ಮ ವಂಶದ ಗೌರವ ಸ್ವರೂಪನು ನೀನು.

ಯುಧಿ : ಕುಮಾರ, ನಿನ್ನ ಉತ್ಸಾಹವನ್ನು ಅಭಿನಂದಿಸುವೆನು. ಆದರೆ ಈ ಕೆಲಸವು ನಿನ್ನಿಂದಾಗತಕ್ಕದ್ದಲ್ಲ, ಮಗು. ಹಾಗೂ ನಾವೆಲ್ಲರೂ ಜೀವಿಸಿದ್ದು ಈ ದುಸ್ಸಾಧ್ಯವಾದ ಕೆಲಸಕ್ಕೆ ನಿನ್ನನ್ನು ಕಳುಹಿಸುವುದು ಲೋಕಾಭಿಮತವೆನಿಸದು.

ಅಭಿಮನ್ಯು : ದೊಡ್ಡಪ್ಪ, ನಾನು ಚಿಕ್ಕವನೆಂದು ಈ ರೀತಿ ಹೇಳುವೆಯ? ನಿನ್ನ ಕಣ್ಣಮುಂದಿರುವ ಈ ಪಾರ್ಥಿವ ದೇಹವು ಚಿಕ್ಕದಿರಬಹುದು. ಆದರೆ ಅದರೊಳಗಿನ ಜೀವಜ್ಯೋತಿಯು ಚಿಕ್ಕದಲ್ಲ. ಕ್ಷಾತ್ರತೇಜದ ಚಿರಪ್ರಕಾಶದಿಂದ ಅದು ಜಾಜ್ವಲ್ಯಮಾನವಾಗಿ ಬೆಳಗುತ್ತಿದೆ. ಸಾಹಸದ ಪ್ರಭಾಫಲಕದಿಂದ ಪ್ರತಿಬಿಂಬಿತವಾಗಿ ವಿಜೃಂಭಿಸುತ್ತಿದೆ. ಅದು ತನ್ನ ಮಹತ್ ಪ್ರಕಾಶದಿಂದ ಕುರುಕ್ಷೇತ್ರವನ್ನು ಬೆಳಗಲು ಅವಕಾಶಕೊಡು. ನನ್ನನ್ನು ಮಗನಾಗಿ ಪಡೆದ ಧನಂಜಯನು ಅಭಿಮಾನದಿಂದ ತಲೆ ದೂಗಲಿ. ವೀರಪ್ರಸುವಾದ ಸುಭದ್ರೆಯು ಆನಂದಾಶ್ರುಗಳನ್ನು ಸುರಿಸಲಿ. ಯೋಗ್ಯಾವಸರವು ದೊರೆತಾಗ ಧೈರ್ಯದಿಂದ ಹೋರಾಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೀರ್ತಿಶಾಲಿಯಾಗುವುದು ಕ್ಷಾತ್ರದ ನಿಯಮ. ಮರಣಕ್ಕಂಜಿ, ಶತ್ರು ಸಂಹಾರಕ್ಕಾಗಿ ಹಿಡಿದ ಖಡ್ಗದಿಂದ ಅಡಿಗೆಮನೆಯ ಕಾಯಿಪಲ್ಲೆಗಳನ್ನು ಕತ್ತರಿಸುತ್ತಾ ಕುಳಿತುಕೊಳ್ಳುವುದಲ್ಲ. ನಾನು ತಾಯಿಯ ಗರ್ಭದಲ್ಲಿದ್ದಾಗಲೇ ಈ ಚಕ್ರವ್ಯೂಹವನ್ನು ಭೇದಿಸುವ ಉಪಾಯವನ್ನು ಕಲಿತೆನು. ಈಗ ಅದರ ಉಪಯೋಗಕ್ಕೆ ಅವಕಾಶವು ದೊರೆತಿರುವುದು. ಅದನ್ನು ವ್ಯರ್ಥ ಮಾಡಬೇಡ, ತಂದೆಯೇ. ನನಗನುಮತಿಯನ್ನು ಕೊಡು. ಆಗ ತಿಳಿಯುವೆ, ಪಾರ್ಥನ ಮಗನು ಪಾರ್ಥನಂತೆಯೇ ಪರಾಕ್ರಮಶಾಲಿಯೆಂಬುದನ್ನು.

ಭೀಮ : ಅಗ್ರಜ, ಅಭಿಮನ್ಯುವಿನ ಪ್ರಾರ್ಥನೆಯನ್ನು ನಿರಾಕರಿಸಬೇಡ. ಈ ವೀರಬಾಲಕನ ಉತ್ಸಾಹಾಗ್ನಿಯ ಮೇಲೆ ಜಲಸೇಚನವಾಗದಿರಲಿ. ನಾನು ಸೈನ್ಯವೆಲ್ಲವನ್ನೂ ತೆಗೆದುಕೊಂಡು, ಅಭಿಮನ್ಯುವಿಗೆ ಸಹಾಯಕನಾಗಿ ನಿಲ್ಲುವೆನು. ಅಭಿಮನ್ಯುವು ವ್ಯೂಹವನ್ನು ಭೇದಿಸಿದೊಡನೆಯೇ ನಾವೆಲ್ಲರೂ ಒಳಕ್ಕೆ ನುಗ್ಗಿ ಅದನ್ನು ಭಿನ್ನ ಭಿನ್ನವಾಗಿ ಮಾಡಿಬಿಡುವೆವು. ಅನಿರೀಕ್ಷಿತವಾಗಿ ಒದಗಿದ ಈ ಸಹಾಯವನ್ನು ಬಿಡುವುದು ಉಚಿತವಲ್ಲ.

ಯುಧಿ : ಭೀಮ, ನಿನ್ನಿಷ್ಟದಂತಾಗಲಿ. ಈ ಪ್ರಿಯ ಬಾಲಕನ ಪ್ರಾಣವನ್ನು ನಿನ್ನ ಕೈಲಿಡುವೆನು. ಯುದ್ಧರಂಗದಲ್ಲಿ ಒಂದು ಕ್ಷಣವೂ ನೀನವನನ್ನು ಬಿಟ್ಟಿರಲಾಗದು. ಧನಂಜಯನ ಪ್ರಾಣಪದಕವು ಅಚ್ಚಳಿಯದೆ ಪುನಃ ಅವನನ್ನು ಸೇರಲಿ. ಕುಮಾರ ಅಭಿಮನ್ಯು, ಹೋಗು, ಜಯಶಾಲಿಯಾಗಿ ಹಿಂದಿರುಗು. ದ್ರೋಣನ ಚಕ್ರವ್ಯೂಹವು ನಿನ್ನ ಪಾಲಿಗೆ ಪುಷ್ಪವ್ಯೂಹವಾಗಲಿ. (ಹರಸುವನು)

ಅಭಿಮನ್ಯು : ನಿಮ್ಮೆಲ್ಲರ ಆಶೀರ್ವಾದವು ನನ್ನನ್ನು ವಜ್ರಕವಚದಂತೆ ರಕ್ಷಿಸಿಕೊಂಡಿರಲು ಭಯವೆಲ್ಲಿಯದು ? (ಭೀಮನೊಡನೆ ನಿಷ್ಕ್ರಾಂತ)

ದೃಶ್ಯ ೫ — ರಾಜೋದ್ಯಾನ

ಉತ್ತರೆ : (ಉತ್ತರೆಯೂ ಸಖಿಯರೊಡನೆ ಪ್ರವೇಶಿಸುವಳು) ಸಖಿ, ಈ ದಿನ ನನ್ನ ಮನಸ್ಸಿಗೇನೋ ಬಹಳ ಬೇಸರವಾಗುತ್ತಿರುವುದು.

ಮಾಧವಿ : ಅದರ ಕಾರಣವನ್ನು ನಾನು [illegible] ಬಲ್ಲೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮೋಹಿನಿ : ಅದೇನು ಮಾಧವಿ ?

ಮಾಧವಿ : ಚಂದ್ರನಿಲ್ಲದಿರುವಾಗ ಕನ್ನೈದಿಲೆಯು ಅರಳುವುದು ಹೇಗೆ ಸಾಧ್ಯ ?

ಮೋಹಿನಿ : ಸರಿಯಾಗಿ ಹೇಳಿದೆ, ಸೂರ್ಯನು ಮೇಘಗಳಿಂದ ಮರೆಯಾದಾಗ ಕಮಲವು ಕಾಂತಿಹೀನವಾಗುವುದಲ್ಲವೆ ?

ಉತ್ತರೆ : ನಿಮ್ಮ ಮಾತುಗಳೊಂದೂ ನನಗೆ ಅರ್ಥವಾಗುತ್ತಿಲ್ಲ.

ಮಾಧವಿ : ನಾನು ಅರ್ಥಮಾಡಿಕೊಡುವೆನು. ನೀನು ನಿನ್ನ ಪತಿರಾಜರನ್ನು ನೋಡಿ ಎಷ್ಟು ದಿನಗಳಾಯಿತು ಹೇಳು ?

ಉತ್ತರೆ : (ಲಜ್ಜೆಯಿಂದ ತಲೆಬಾಗುವಳು)

ಮಾಧವಿ : ನಾನು ಬಲ್ಲೆ, ರಾಜಕುಮಾರಿ. ಈ ಹಾಳು ಯುದ್ಧದ ದೆಸೆಯಿಂದ ಯುವರಾಜ ಅಭಿಮನ್ಯುವು ಈ ನಾಲ್ಕು ದಿನಗಳಿಂದ ಅಂತಃಪುರಕ್ಕೇ ಬರಲಿಲ್ಲ. ಆದ್ದರಿಂದಲೇ ನೀನು.....

ಉತ್ತರೆ : ಸುಮ್ಮನಿರು, ಮಾಧವಿ. ಆರ್ಯಪುತ್ರನ ದರ್ಶನಕ್ಕಾಗಿ ನಾನು ಕಾತರಳಾಗಿರುವುದು ನಿಜ. ಆದರೆ ನನ್ನ ಚಿಂತೆಯ ಕಾರಣವು ಅದಲ್ಲ.

ಮಾಧವಿ : ಈ ನಾಲ್ಕು ದಿನಗಳಿಂದ ನಿನ್ನ ರೀತಿಯನ್ನು ನೋಡುತ್ತಿರುವೆನು, ಒಡತಿ. ಆಹಾರಾದಿಗಳಲ್ಲಿ ಉಪೇಕ್ಷೆ, ಯಥಾಕಾಲದಲ್ಲಿ ನಿದ್ರೆ ಮಾಡುವುದಿಲ್ಲ. ಆಗಿಂದಾಗ್ಗೆ ಏನನ್ನೋ ಯೋಚಿಸುತ್ತಾ ಕುಳಿತುಕೊಳ್ಳುವೆ. ಈ ಲಕ್ಷಣಗಳನ್ನು ನೋಡಿದರೆ ನೀನು ವಿರಹದಿಂದ ಪೀಡಿತಳಾಗಿರುವೆ ಎಂದು ತೋರುವುದು.

ಮೋಹಿನಿ : ನೂತನ ಯೌವನ, ನೂತನ ದಾಂಪತ್ಯ, ನೂತನ ಸಮ್ಮಿಳನ ! ಇದರಲ್ಲಿ ಹೀಗಾಗುವುದು ಸಹಜವೇ !

ಮಾಧವಿ : ನಮ್ಮ ವೈದ್ಯಶಾಸ್ತ್ರದಲ್ಲಿ ಇದಕ್ಕೆ ಔಷಧ, ಪತಿಯೊಡನೆ ಸಂ.....

ಉತ್ತರೆ : ಸುಮ್ಮನಿರು ಲಜ್ಜೆಗೆಟ್ಟವಳೆ.....

ಮಾಧವಿ : ಕೋಪವೇಕೆ ಒಡತಿ, ಅಥವಾ ಕಂಡದ್ದನ್ನು ಹೇಳಿದರೆ ಕೆಂಡದಂಥ ಕೋಪ !

ಮೋಹಿನಿ : ಮಾಧವಿ ನಮ್ಮ ಸಖಿಯ ಅವಸ್ಥೆಗೆ ನನಗಿನ್ನೊಂದು ಕಾರಣವು ತೋರುತ್ತಿರುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧವಿ : ಅದೆಂತಹ ಕಾರಣ ?

ಮೋಹಿನಿ : ನನ್ನ ಹತ್ತಿರ ಬಂದರೆ ಕಿವಿಯಲ್ಲಿ ಹೇಳುವೆನು.

ಮಾಧವಿ : (ಹತ್ತಿರ ಹೋಗಿ) ಏನು ಹೇಳು, (ಪಿಸುಮಾತು) ಹೌದು, ಮರೆತಿದ್ದೆ. ನೀನು ಹೇಳುವುದು ನಿಜ. ಮಹಾರಾಣಿಗೆ ತಿಳಿಸಿ, ಒಡತಿಯ ಬಯಕೆಗಳೇನಿರುವುವೋ....

ಉತ್ತರೆ : ನಿಮ್ಮ ಮಾತಿಗೆ ತಡೆಯೇ ಇಲ್ಲ. ಅತ್ತೆಯವರಿಗೆ ತಿಳಿಸು ವಿಚಾರವೇನು ?

ಮಾಧವಿ : ಏನೂ ಇಲ್ಲ, ರಾಜಕುಮಾರಿ. ಮುಂದೆ ಅವರಿಗೊಬ್ಬ ಮೊಮ್ಮಗನು ಹುಟ್ಟುವನೆಂದು.

(ನೇಪಥ್ಯದಲ್ಲಿ ರಣಭೇರಿ, ಕಹಳೆ ಇತ್ಯಾದಿ ಶಬ್ದ ಮತ್ತು ಜಯಧ್ವನಿ.)

ಉತ್ತರೆ : ಏನೀ ಶಬ್ದ !

ಮಾಧವಿ : (ನೋಡಿ) ಪಾಂಡುಪಕ್ಷದ ಯೋಧರು ಯುದ್ಧಕ್ಕಾಗಿ ಶಿಬಿ ವನ್ನು ಬಿಟ್ಟಂತಿದೆ. ಇದವರ ಜಯಧ್ವನಿ.

ಮೋಹಿನಿ : ಒಡತಿ, ಇಲ್ಲಿ ನಿಂತರೆ ಸೈನ್ಯದ ಗತಿಕರ್ಮವು ಚೆನ್ನಾಗಿ ಕಾಣ ವುದು. ಬಂದು ನೋಡಬಾರದೆ ?

ಉತ್ತರೆ : ನಿಮ್ಮಿಷ್ಟಕ್ಕೆ ನಾನೇಕೆ ಬೇಡವೆನ್ನಲಿ. (ನಿಂತು ನೋಡುವರು)

ಮೋಹಿನಿ : ರಾಜಕುಮಾರಿ, ತಡೆಯಿಲ್ಲದೆ ಹರಿಯುವ ಪ್ರವಾಹದಂ ಸೈನ್ಯವು ಹೋಗುತ್ತಿದೆ. ಪದಾತಿ, ಗಜ, ತುರಗ, ರಥ....! ಈ ಮಹ ಸೈನ್ಯದಲ್ಲಿ ಎಷ್ಟು ಜನ ಹಿಂದಿರುಗುವರೋ ಕಾಣೆ !

ಮಾಧವಿ : ಒಡತಿ, ಇತ್ತ ನೋಡು. ಆ ಸ್ವರ್ಣವರ್ಣದ ರಥದ ಮೇ ಕುಳಿತು ನಮ್ಮನ್ನೇ ನೋಡುತ್ತಿರುವ ವೀರನಾರು ?

ಉತ್ತರೆ : (ನಾಚಿಕೆಯಿಂದ) ನನಗಾರೂ ಕಾಣುತ್ತಿಲ್ಲ.

ಮಾಧವಿ : ಹಾಗಿದ್ದರೆ, ಈ ಲಜ್ಜೆಯೇಕೆ ? ಈ ಮಿದು ನಗೆಯೇಕೆ ?... ಇದೇನು ? ಆ ರಥಿಕನು ಸೈನ್ಯ ಪ್ರವಾಹವನ್ನು ಬಿಟ್ಟು ರಾಜೋದ್ಯಾ ವನ್ನು ಪ್ರವೇಶಿಸಿದನು.

ಉತ್ತರೆ : ಎಲ್ಲಿ ? ಎಲ್ಲಿ ?

Sri Vidyabharathi Book Centre, Sringeri

ಮಾಧವಿ : ಇದೋ ಇಲ್ಲಿ. ರಥವು ಸಮೀಪಿಸಿತು. ನಡಿ, ಮೋಹಿ

CC-O. In Public Domain. Digitized by eGangotri

ಇನ್ನು ನಮಗಿಲ್ಲೇನು ಕೆಲಸ ?

ಉತ್ತರೆ : ನಿಲ್ಲಿರಿ, ನನ್ನೊಬ್ಬಳನ್ನೇ ಬಿಟ್ಟು ಹೋಗುವಿರಾ ?

ಮಾಧವಿ : ಒಬ್ಬಳೇ ಏಕೆ ! ನಿನ್ನ ವಿರಹಜ್ವರವನ್ನು ವಾಸಿಮಾಡಬಲ್ಲ ವೈದ್ಯರಾಜನು ಸಮೀಪದಲ್ಲಿರುವನು. (ಹೋಗುವರು)

ಅಭಿಮನ್ಯು : (ಬೇರೆ ದಿಕ್ಕಿನಿಂದ ಅಭಿಮನ್ಯು ಪ್ರವೇಶಿಸುವನು) ಪ್ರಾಣೇಶ್ವರಿ !

ಉತ್ತರೆ : ಪ್ರಾಣನಾಥ (ಆಲಂಗಿಸುವರು) ನಾನು ನನ್ನ ಹೃದಯಾಧಿದೇವನ ದರ್ಶನಕ್ಕಾಗಿ ನಾಲ್ಕು ದಿನಗಳಿಂದಲೂ ಹಂಬಲಿಸುತ್ತಿದ್ದೆನು. ಈ ದಿನ ಅದು ಲಭಿಸಿತು.

ಅಭಿಮನ್ಯು : ಸುಂದರಿ, ನಿನ್ನ ದೇವನ ಸಂದರ್ಶನವನ್ನೇನೋ ಹೊಂದಿದೆ; ಆದರೆ ಅವನ ಸನ್ನಿಧಿಯಲ್ಲಿ ಅರ್ಪಿಸಲು ಏನನ್ನು ಸಿದ್ಧಪಡಿಸಿರುವೆ ಹೇಳು.

ಉತ್ತರೆ : ನಾಥ, ನನ್ನ ಸರ್ವಸ್ವವನ್ನೂ ಕೊಟ್ಟಿರುವೆನು. ಇನ್ನು ನನ್ನದಾಗಿ ಏನು ಉಳಿದಿದೆ ?

ಅಭಿಮನ್ಯು : ನಿನ್ನ ಹೃದಯದ ಪ್ರೇಮ.

ಉತ್ತರೆ : ಅದು ಮೊದಲಿನಿಂದ ನಿನ್ನದೇ ಆಗಿದೆ. ಪುನಃ ಕೊಡುವ ಅಗತ್ಯವಿಲ್ಲ.

ಅಭಿಮನ್ಯು : ಪ್ರೇಯಸಿ, ನಾನದನ್ನು ಬಲ್ಲೆನು. ಆದರೆ ಪ್ರತಿದಿನವೂ ಪ್ರತಿಕ್ಷಣವೂ ನಿನ್ನ ಪ್ರೇಮವನ್ನು ಹೊಸದಾಗಿ ಪಡೆಯಬೇಕೆಂದು ನನ್ನ ಬಯಕೆ. ವಸಂತದ ಬಳ್ಳಿಯು ದಿನದಿನವೂ ಹೊಸ ಹೊಸ ಹೂಗಳಿಂದ ಸೃಷ್ಟಿಕರ್ತನನ್ನು ಆರಾಧಿಸುವುದು. ಪಕ್ಷಿಗಳು ದಿನದಿನವೂ ಹೊಸ ಹೊಸದಾದ ಗಾನದಿಂದ ಪ್ರಕೃತಿಯನ್ನು ನಲಿಸುವುವು. ಸರ್ವಸಾಕ್ಷಿಯಾದ ಸೂರ್ಯದೇವನು ದಿನದಿನವೂ ಹೊಸ ಹೊಸದಾಗಿ ಕಾಂತಿಯಿಂದ ಜಗತ್ತನ್ನು ಬೆಳಗುವನು. ಈ ದಿನದ ಆನಂದವು ನಾಳಿನ ದುಃಖದ ಬೀಜ. ನಾಳಿನ ದುಃಖವು ಮುಂದಿನ ಆನಂದದ ಮೂಲ. ಪ್ರೇಮದ ವಿಚಾರವೂ ಹಾಗೆಯೇ. ವಿರಹದಿಂದ ಸಮ್ಮಿಳನ, ಸಮ್ಮಿಳನದಿಂದ ಪುನಃ ವಿರಹ. ವಿರಹ ಮತ್ತು ಸಮ್ಮಿಳನ, ಈ ಉಭಯ ಭಾವಗಳ ಆಕರ್ಷಣ ವಿಕರ್ಷಣಗಳೇ ಪ್ರೇಮದ ಜೀವ. ಹೃದಯೇಶ್ವರಿ, ನೆನ್ನಿನ ದಿನ ನಾವು ವಿಯೋಗದ ತೀವ್ರ ಶೋಕದಿಂದ ದಗ್ಧರಾಗಿದ್ದೆವು. ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ದಿನ ಪುನಃ ಸಮ್ಮಿಳಿತರಾಗಿರುವೆವು. ಈ ಆನಂದದ ಸುಪ್ರಭಾತದಲ್ಲಿ ಪುನಃ ನಿನ್ನ ಪ್ರೇಮಪೂಜೆಯನ್ನು ಕೈಗೊಳ್ಳಬೇಕೆಂದು ನನ್ನ ಆಸೆ, ಉತ್ತರಾ.

ಉತ್ತರೆ : ನಾಥ, ದೇವರೇ ಪೂಜೆಯನ್ನು ಬಯಸಿದಾಗ, ಭಕ್ತಳು ನಿರಾಕರಿಸುವಳೇ ? ಪ್ರೇಮದ ವಿಷಯದಲ್ಲಿ ನೀನು ಪಂಡಿತನು. ನಿನ್ನ ಇಚ್ಛೆಯಂತೆ ನಾನು ನಡೆಯುವೆನು. ಸಖಿಯರೇ, (ಸಖಿಯರು ಬರುವರು) ಗಂಧ, ಪುಷ್ಪ, ತಾಂಬೂಲಾದಿಗಳನ್ನು ತನ್ನಿರಿ.

ಸಖಿಯರು : ಆಜ್ಞೆ. (ಹೋಗುವರು)

ಉತ್ತರೆ : ಪ್ರಾಣೇಶ್ವರ, ಈ ಪೀಠದಲ್ಲಿ ಕುಳಿತು ನನ್ನ ಪ್ರೇಮಾರಾಧನೆಯನ್ನು ಸ್ವೀಕರಿಸಿರಿ. (ಸಖಿಯರು ಗಂಧ ಪುಷ್ಪಾದಿಗಳನ್ನು ತರುವರು. ಉತ್ತರೆಯು ಅಭಿಮನ್ಯುವನ್ನು ಪೂಜಿಸುವಳು.) ಹೃದಯಾಧಿದೇವನೇ, ನಾನೇ ಆಯ್ದ ಹೂಗಳಿಂದ ಕಟ್ಟಿದ ಈ ಮಾಲಿಕೆಯನ್ನು ಧರಿಸಿ ಭಕ್ತಳಲ್ಲಿ ಪ್ರಸನ್ನನಾಗು. (ಹಾರವನ್ನು ಹಾಕುವಳು)

ಅಭಿಮನ್ಯು : ಸುಂದರಿ, ದೇವರು ಪ್ರಸನ್ನನಾಗಿ ನಿನಗೆ ತನ್ನ ಪಾರ್ಶ್ವದಲ್ಲಿ ಸ್ಥಾನ ಕೊಟ್ಟಿರುವನು. (ಪಾರ್ಶ್ವದಲ್ಲಿ ಕುಳ್ಳಿರಿಸಿಕೊಳ್ಳುವನು.)

ಮಾಧವಿ : ಒಡತಿ, ಈಗ ನೀನು ಇಂದ್ರನ ಅರ್ಧಾಸನವನ್ನೇರಿದ ಶಚಿಯಂತೆ ಶೋಭಿಸುತ್ತಿರುವೆ.

ಮೋಹಿನಿ : ಆದರೆ ಇಂದ್ರನ ಮುಖಮಂಡಲವೇಕೆ ಈ ದಿನ ಇಷ್ಟೊಂದು ಪ್ರಶಾಂತವಾಗಿದೆ ?

ಉತ್ತರೆ : ಪ್ರಿಯತಮ, ಇದೇನು ಇಂತಹ ಮುಖಭಂಗಿ ? ನನ್ನಿಂದೇನಾದರೂ ಅಪರಾಧವಾಯಿತೆ ?

ಮಾಧವಿ : ಯುವರಾಜರನ್ನೇಕೆ ಕೇಳುವೆ? ಅದಕ್ಕೆ ನಾನು ಉತ್ತರ ಕೊಡುವೆನು. ನಿನ್ನ ದೇವರಿಗೆ ನೀನು ಮಾಡಿದ ಪೂಜೆಯಿಂದ ತೃಪ್ತಿಯಿಲ್ಲ.

ಉತ್ತರೆ : ಅದೇಕೆ ?

ಮಾಧವಿ : ಪಾನಕವನ್ನು ಬಯಸಿ ಬಂದವರಿಗೆ ನೀರಿನಿಂದ ತೃಪ್ತಿಯಾಗುವುದೆ ?

ಉತ್ತರೆ : ಹಾಗಾದರೆ ಏನು ಮಾಡಬೇಕು ?

ಮಾಧವಿ : [illegible] ಮಾಡಬೇಕು. ಪ್ರಿಯ ವಚನಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೆಚ್ಚಿಸಿ, ಕಟಾಕ್ಷ ಕುಸುಮಗಳಿಂದ ಅರ್ಚಿಸಿ, ಚುಂಬನವನ್ನು ಬೆರೆಸಿ, ಅದರ ಸುಧೆಯನ್ನು ಸುರಿಸಿ, ಆಲಿಂಗನೆಯ ಆರೋಗಣೆಯನ್ನು ಕೊಡಬೇಕು.

ಉತ್ತರೆ : ಛೀ ! ಲಜ್ಜೆಗೆಟ್ಟವಳೇ ! ನಾಥ, ಈ ದೂರ್ತಳನ್ನು ಶಿಕ್ಷಿಸುವ ಭಾರ ನಿನ್ನದು.

ಅಭಿಮನ್ಯು : ಉದಾಸೀನವೇ ಇವಳಿಗೆ ತಕ್ಕ ಶಿಕ್ಷೆ! ಆದರೆ ಪ್ರೇಯಸಿ, ಈ ದಿನ ಯುದ್ಧದಲ್ಲಿ ನಾನೊಂದು ಮಹತ್ ಕಾರ್ಯವನ್ನು ನಿರ್ವಹಿಸ ಬೇಕಾಗಿದೆ. ನಿನ್ನ ಪ್ರೇಮದ ಆರೋಗಣೆಯನ್ನು ಸನ್ಮಾನಿಸಲು ನನಗೆ ಸಮಯವಿಲ್ಲ. ಏನು ಮಾಡಲಿ ?

ಉತ್ತರೆ : ಈ ನಾಲ್ಕು ದಿನಗಳಿಂದಲೂ ಯುದ್ಧದಲ್ಲಿ ನಿರತನಾಗಿದ್ದೆ. ಈ ದಿನವನ್ನು ನನ್ನೊಡನೆ ಕಳೆಯಬಾರದೆ ?

ಅಭಿಮನ್ಯು : ದ್ರೋಣನ ಚಕ್ರವ್ಯೂಹವನ್ನು ಭೇದಿಸಲು ಯುಧಿಷ್ಠಿರ ರಾಜೇಂದ್ರನ ಅನುಮತಿಯನ್ನು ಪಡೆದು ನಾನು ಹೊರಟಿರುವೆನು. ಪ್ರೇಯಿಸಿ, ನನ್ನನ್ನು ತಡೆಯಬೇಡ, ನಗುಮೊಗದಿಂದ ಕಳುಹಿಸಿಕೊಡು.

ಉತ್ತರೆ : ನಾಥ, ನೀನು ಯುದ್ಧಕ್ಕೆ ಹೋಗಲೇಬೇಕಾದರೆ ನನ್ನನ್ನೂ ಸಂಗಡ ಕರೆದುಕೊಂಡು ಹೋಗು. ನಿಮ್ಮ ತಂದೆಯ ವಿವಾಹಕಾಲದಲ್ಲಿ ಬಲರಾಮನೊಡನೆ ಯುದ್ಧಮಾಡುವಾಗ ಅತ್ತೆಯವರೂ ಸಹಾಯ ಮಾಡಿದರಂತೆ. ಈಗ ನಾನು ನಿನಗೆ ಸಹಾಯಕಳಾಗುವೆನು.

ಅಭಿಮನ್ಯು : ಆ ದಿನ ತಾಯಿಯು ಉಪಾಯವಿಲ್ಲದೆ ಅಸ್ತ್ರಧಾರಣ ಮಾಡ ಬೇಕಾಯಿತು. ಆದರೆ ಯುದ್ಧರಂಗವು ಸ್ತ್ರೀಯರಿಗೆ ಉಚಿತವಾದ ಸ್ಥಾನವಲ್ಲ.

ಉತ್ತರೆ : ಯುದ್ಧಕ್ಕಾಗಿಯೇ ಈ ಹೊಸಬಿಲ್ಲನ್ನು ತಂದಂತಿದೆ. ಇದನ್ನೊಂದು ಸಾರಿ ಹೆದೆಯೇರಿಸಿ.... (ಎಂದು ಬಿಲ್ಲನ್ನು ತೆಗೆದುಕೊಳ್ಳುವಳು)

ಅಭಿಮನ್ಯು : ಈ ಕೋಮಲ ಹಸ್ತಗಳಿಗೆ ಯೋಗ್ಯವಾದ ಕಾರ್ಯವಿದಲ್ಲ. ಅನಂಗ ರಾಜಲಕ್ಷ್ಮಿ, ನಿನ್ನ ಸಖಿಯರು ತಿರಿದು ತಂದ ಹೂಗಳನ್ನು ಹೆದೆಯೇರಿಸು. [illegible] ಚಂಚಲ ಕಟಾಕ್ಷ ಬಾಣಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೂಡು, ಮನ್ಮನಃಶಾಯಿನಿ, ಹೃದಯಮಧ್ಯದಲ್ಲಿ ನನಗಾಶ್ರಯ ಕೊಡು.

ಉತ್ತರೆ : ಅಬ್ಬಬ್ಬಾ ! ಒಂದೇ ಉಸಿರಿನಲ್ಲಿ ಎಷ್ಟೊಂದು ಪ್ರೇಮದ ಮಾತುಗಳು !

ಮಾಧವಿ : ಯುವರಾಜ, ನೀವು ಒಡತಿಯನ್ನು ಯುದ್ಧರಂಗಕ್ಕೆ ಕರೆದು ಕೊಂಡು ಹೋಗದಿದ್ದರೆ ಬಿಡಿ. ನಾನು ಹೇಳಿದಂತೆ ಮಾಡಿರಿ.

ಅಭಿಮನ್ಯು : ಏನದು ?

ಮಾಧವಿ : ನೀವಿಬ್ಬರೂ ಉಪವನದಲ್ಲೇ ವಿನೋದದಿಂದಿರಿ. ನಾನು ಮತ್ತು ಮೋಹಿನಿ ನಿಮ್ಮ ಖಡ್ಗವನ್ನೂ ಬಿಲ್ಲು ಬಾಣಗಳನ್ನೂ ತೆಗೆದುಕೊಂಡು ಯುದ್ಧರಂಗಕ್ಕೆ ಹೋಗಿ ಶತ್ರುಸಂಹಾರ ಮಾಡುವೆವು.

ಮೋಹಿನಿ : ಹೌದು, ಚಕ್ರವ್ಯೂಹವನ್ನು ಭೇದಿಸುವ ಉಪಾಯವನ್ನು ನಮಗೆ ಹೇಳಿಕೊಟ್ಟರೆ ಸಾಕು. ನಿಮ್ಮ ಕರ್ತವ್ಯವು ನೆರವೇರುವುದು; ನಮ್ಮ ಒಡತಿಯ ದುಃಖವೂ ಪರಿಹಾರವಾಗುವುದು.

ಅಭಿಮನ್ಯು : (ನಕ್ಕು) ಅಷ್ಟು ಸುಲಭವಾಗಿ ಮಾಡಲು ಯುದ್ಧವು ಹಬ್ಬದ ಊಟವಲ್ಲ, ಮದುವೆಯ ಸಂಭ್ರಮವಲ್ಲ. ಅಬಲೆಯರು ನೀವು. ನಿಮಗೇಕೆ ಯುದ್ಧದ ಯೋಚನೆ ?

ಮಾಧವಿ : ಯುವರಾಜ, ನಗುವಿರೇಕೆ ? ನಾವು ಹೆಂಗಸರೆಂದು ದುರ್ಲಕ್ಷ್ಯವೇ ! ಮಹಿಷಾದಿ ದಾನವರನ್ನು ಸಂಹಾರ ಮಾಡಿದ ದೇವೀ ದುರ್ಗಿಯೂ ನಮ್ಮಂತೆ ಹೆಂಗಸೇ ! ಒಲಿದರೆ ನಾರಿ, ಮುನಿದರೆ ಮಾರಿ ಎಂಬ ಗಾದೆಯನ್ನು ಕೇಳಿಲ್ಲವೇ ? ನಮಗೊಂದುಸಾರಿ ಯುದ್ಧ ಮಾಡುವ ಅವಕಾಶವು ದೊರಕಲಿ. ನಾವು ಅಬಲೆಯರೋ ಪ್ರಬಲೆಯರೋ ನಿಮಗೇ ತಿಳಿಯುವುದು.

ಉತ್ತರೆ : ನಾಥ, ಮಾಧವಿಯ ವಿಚಾರ ನಿಮಗೆ ತಿಳಿಯದು. ಅವಳು ಮನಸ್ಸು ಮಾಡಿದರೆ ಸ್ತ್ರೀಯರದೇ ಸೈನ್ಯ ದಳವೊಂದನ್ನು ನಿರ್ಮಿಸಿ ಬಿಡುವಳು. ಆಮೇಲೆ ಕೌರವ ಸೈನ್ಯದ ಅವಸ್ಥೆ !.....ಏನು ಹೇಳುವೆ, ಮಾಧವಿ ?

ಮಾಧವಿ : ಅವರೆಲ್ಲರನ್ನೂ ಸಶಸ್ತ್ರರಾಗಿ ಕೈಸೆರೆ ಹಿಡಿದು ಯುವರಾಜರ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಲುಗಳ ಮೇಲೆ ತಂದು ಹಾಕುವೆನು. (ಎಲ್ಲರೂ ನಗುವರು)

ಅಭಿಮನ್ಯು : ಇದು ಉಪಹಾಸದ ಸಮಯವಲ್ಲ, ಉತ್ತರಾ. ಘೋರ ಯುದ್ಧವು ಒದಗಿರುವುದು. ಈಗಲೂ ನೀನು ನಗುತ್ತಿರುವೆ! ಅಥವಾ ಪ್ರಪಂಚದಲ್ಲಿ ಸೃಷ್ಟಿಕರ್ತರಿಬ್ಬರೆಂದು ತೋರುವುದು. ಯುದ್ಧವನ್ನು ನಿರ್ಮಿಸಿದ ಹೃದಯಹೀನನಾದ ವಿಧಿಯೇ ಬೇರೆ. ಹಾಸ್ಯಪ್ರಿಯೆಯಾದ ಗಾನಮಯಿಯಾದ ಉತ್ತರೆಯನ್ನು ನಿರ್ಮಿಸಿದ ಕಲಾವಿದನಾದ ವಿಧಾತನೇ ಬೇರೆ. ಪರಸ್ಪರ ಸಂಬಂಧವಿಲ್ಲದ ಎರಡು ವಿಭಿನ್ನ ಪ್ರಪಂಚಗಳು.

ಉತ್ತರೆ : ಹಾಗಲ್ಲ. ನಿಜವನ್ನು ನಾನು ಹೇಳುವೆನು, ನಾಥ ಒಬ್ಬನಾದ ವಿಧಾತನು ಇಬ್ಬರು ಉತ್ತರೆಯರನ್ನು ನಿರ್ಮಿಸಿರುವನು. ಇದುವರೆಗೆ ಹಾಸ್ಯಮಯಿಯಾದ, ಗಾನಶೀಲೆಯಾದ ಒಬ್ಬ ಉತ್ತರೆಯನ್ನು ನೋಡಿದೆ. ಈಗ ವೀರಪತ್ನಿಯಾದ ವೀರಾಂಗನೆಯಾದ ಮತ್ತೊಬ್ಬ ಉತ್ತರೆಯನ್ನು ನೋಡುವೆ. ಹೋಗು ತರುಣವೀರ! ಯುದ್ಧವು ಕ್ಷತ್ರಿಯನ ಧರ್ಮ. ನೀನಾಧರ್ಮವನ್ನು ಪಾಲನೆಮಾಡು.

ಅಭಿಮನ್ಯು : ಸಂತೋಷಚಿತ್ತಳಾಗಿ ನನ್ನನ್ನು ಕಳುಹಿಸಿಕೊಡಬಲ್ಲೆಯ? ನನಗೋಸ್ಕರ ಸ್ವಲ್ಪವೂ ದುಃಖಿಸುವುದಿಲ್ಲವೇ?

ಉತ್ತರೆ : ದುಃಖಿಸುವುದಿಲ್ಲ, ಅಥವಾ ಪ್ರಚ್ಛನ್ನದಾನದಂತೆ ಮನಸ್ಸಿನ ದುಃಖವನ್ನು ಮುಚ್ಚಿಕೊಂಡು, ಮುಖದಲ್ಲಿ ಹರ್ಷವನ್ನು ಸೂಚಿಸುತ್ತಾ ಪತಿಯನ್ನು ಬೀಳ್ಕೊಳ್ಳಲಾರದ ಪತ್ನಿಯು ವೀರಾಂಗನೆಯೆನಿಸಿಕೊಳ್ಳಬಲ್ಲಳೇ? ನಿನ್ನ ಕರ್ತವ್ಯದಲ್ಲಿ ನೀನು ಸ್ಥಿರನಾಗು, ಪ್ರಾಣೇಶ್ವರ, ಉತ್ತರೆಯು ತನ್ನ ಭಾಗದ ಕರ್ತವ್ಯವನ್ನು ಸಾಹಸವದನೆಯಾಗಿ ನಿರ್ವಹಿಸುವಳು.

ಅಭಿಮನ್ಯು : (ಕ್ಷಣಕಾಲ ಉತ್ತರೆಯನ್ನು ದಿಟ್ಟಿಸಿ) ನಾನು ನೋಡುವುದೇನನ್ನು ಈಶ್ವರ! ಸ್ವರ್ಣದ ಪುತ್ತಲಿಯಲ್ಲಿ ಶಿರೀಷದ ಮಾರ್ಧವ! ಸಂಪಿಗೆಯ ಗಂಧದಲ್ಲಿ ಮಲ್ಲಿಗೆಯ ಮಾಧುರ್ಯ! ಇಹ ಸಂಸಾರದ ದುಃಖ ಮಧ್ಯದಲ್ಲಿ ಸ್ವರ್ಗದ ಆನಂದಕೇಳಿ! ಧನ್ಯೆ! ಉತ್ತರಾ! ಆರ್ಯಾವರ್ತದಲ್ಲಿ ನೀನು ನಾರೀರತ್ನಳು!

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತರೆ : ನೀನು ಕ್ಷತ್ರಿಯರತ್ನನು. ಯುದ್ಧವು ನಿನ್ನ ಗೌರವ ! ಕೀರ್ತಿ ! ಸಂಪತ್ತು !

ಅಭಿಮನ್ಯು : ಆದರೆ ನಿನಗಾವ ಗೌರವವೂ ಇಲ್ಲವೋ ? ಈ ದಿನ ಎಷ್ಟೋಂದು ಜನ ವೀರಪತ್ನಿಯರು, ವೀರಮಾತೆಯರು, ಹೃದಯ ದುಃಖಾವೇಗವನ್ನು ಅಡಗಿಸಿಕೊಂಡು, ಕಣ್ಣೀರನ್ನು ಭೂಮಿಗುದುರಿಸ ಸಾಹಸಮುಖಿಯರಾಗಿ ಪತಿ, ಪುತ್ರರಿಂದ ಬೀಳ್ಕೊಂಡಿರುವರು. ಅವ ಗಾವ ಗೌರವವೂ ಇಲ್ಲವೆ, ಉತ್ತರಾ ?

ಉತ್ತರೆ : ಇರುವುದು, ನಾಥ, ರಣಾಂಗಣದಲ್ಲಿ ಕಾದಾಡುತ್ತಾ ಸ್ವಾಮಿಯ ಮಡಿದಾಗ ಆತನ ಗೌರವದಿಂದ ದರ್ಪಿತಳಾಗದ ಮಡದಿ ಯಾರು ? ಶ ಮಧ್ಯದಲ್ಲಿ ಪುತ್ರನ ಸಾಹಸದ ವರ್ಣನೆಯನ್ನು ಕೇಳಿ ಆನಂದ ಭಾಷ್ಪ ವನ್ನು ಸುರಿಸದ ಮಾತೆ ಯಾರು ? ಪುರುಷನ ಗೌರವವೇ ನಾರಿ ಗೌರವ, ಜೀವನ ಸರ್ವಸ್ವ.

ಅಭಿಮನ್ಯು : ಹಾಗಾದರೆ, ಈ ಕುರುಕ್ಷೇತ್ರದ ಮಹಾಯುದ್ಧದಲ್ಲಿ ನಾನ ಪ್ರಾಣತ್ಯಾಗ ಮಾಡಿದರೆ ನನಗೋಸ್ಕರ ಅಳುವುದಿಲ್ಲವೆಂದು ಹೇಳು ಪ್ರೇಯಸಿ.

ಉತ್ತರೆ : ಅಳುವುದಿಲ್ಲ, ಪ್ರಭು. ನಿನ್ನ ಆಜ್ಞೆಗೆ ವಿರುದ್ಧವಾಗಿ ಒಂದು ತೊಟ್ಟು ಕಂಬನಿ ಭೂಮಿಗೆ ಬಿದ್ದರೂ, ಕೈಯಾರೆ ಕಣ್ಣುಗಳನ್ನು ಕಿತ್ತು ನಿನ್ನ ಚರಣದಲ್ಲಿ ಸಮರ್ಪಿಸುವೆನು. ಉತ್ತರೆಯು ವೀರಸತಿ ಪತಿಯ ಆಜ್ಞೆಯು ಅವಳಿಗೆ ದೇವರ ಆಜ್ಞೆಯಂತೆ.

ಅಭಿಮನ್ಯು : ಇನ್ನು ನನಗೆ ಅನುಜ್ಞೆಯನ್ನು ಕೊಡು. ನೀನು ಹಾಕಿದ ಪ್ರೇಮದ ವಿಜಯಮಾಲೆಯಿಂದ ಭೂಷಿತವಾಗಿ ನಾನು ರಣಾಂಗಣದ ಬೆಳಗುವೆನು. ನನಗಿನ್ನು ಅಪಜಯವಿಲ್ಲ. (ಸುಭದ್ರೆಯ ಪ್ರವೇಶ)

ಸುಭದ್ರೆ : ಕುರುಕ್ಷೇತ್ರದ ಧರ್ಮಯುದ್ಧದಲ್ಲಿ ನಿನ್ನಂತಹ ವೀರಯೋಧನಿ ತ್ರಿಕಾಲದಲ್ಲಿಯೂ ಅಪಜಯವಿಲ್ಲ.

ಅಭಿಮನ್ಯು : ತಾಯಿ, ನಿನ್ನ ಆಶೀರ್ವಾದವು ಸರ್ವದಾ ನನ್ನನ್ನು ರಕ್ಷಿಸಲಿ ನನಗೆ ಯುದ್ಧಕ್ಕೆ ಅನುಮತಿಯನ್ನು ಕೊಡು.

ಸುಭದ್ರೆ : ಅಭಿಮನ್ಯು ಕುಮಾರ, ಈ ದಿನ ನೀನು ದ್ರೋಣನ ಚಕ್ರವ್ಯೂ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಭೇದಿಸುವುದಾಗಿ ಪಾಂಡವ ಸಭೆಯಲ್ಲಿ ಪ್ರತಿಜ್ಞೆ ಮಾಡಿದೆಯಂತೆ, ಅದು ನಿಜವೇ ?

ಅಭಿಮನ್ಯು : ಹೌದು, ತಾಯಿ. ಇಂದು ನಾನು ಸುಭದ್ರೆಯು ವೀರಮಾತೆ ಯೆಂಬುದನ್ನು ಜಗತ್ತಿಗೆ ತಿಳಿಸುವೆನು. ಇಂದಿನ ನನ್ನ ಅಸಮ ಸಾಹಸ ದಿಂದ ಆಚಾರ್ಯ ದ್ರೋಣನು ಸ್ತಂಭಿತನಾಗುವನು. ನನ್ನನ್ನು ಹರಸು ತಾಯಿ. (ನಮಿಸುವನು)

ಸುಭದ್ರೆ : ಜಯಶಾಲಿಯಾಗು ಪುತ್ರ. ನಿನ್ನ ತಾಯಿಯ ಪ್ರೇಮವೂ, ತಂದೆಯ ಶೌರ್ಯವೂ, ಶ್ರೀಕೃಷ್ಣನ ಮಹಿಮೆಯೂ ಪಾಂಡುನಂದನರ ಆಶೀರ್ವಾದವೂ, ಉತ್ತರೆಯ ಸೌಭಾಗ್ಯವೂ ನಿನ್ನನ್ನು ಎಡೆಬಿಡದೆ ರಕ್ಷಿಸಲಿ.

ಜನನಿಯ ದಾಸ್ಯವನು ಹರಿಸೆ ಸುರರಂ ಗೆಲ್ದು
ಅಮೃತವನು ತರಲೆಳಸಿ ತಾಯ್ಗೆ ನಮಿಸಿ,
ವೀರ ಗರುತ್ಮಂತನನುಮತಿಯ ಕೇಳ್ದಾಗ
ವಿನತೆಯಿತ್ತಮಿತ ಶುಭವಿರಲಿ ನಿನಗೆ ;
ವೃತನನು ಸಂಹರಿಸೆ ದಿವಿಜಪತಿಯೆಳಸಿ ಋಷಿ
ಪುಂಗವರ ಪದಕಮಲಕೆರಗಲಾಗ,
ಅವರಿತ್ತ ಸರ್ವೋತ್ತಮಾಶೀರ್ವಚನದೊಳ್
ಮೊರೆದ ಸನ್ಮಂಗಳವು ನಿನಗಾಗಲಿ ;
ಜನಕಜೆಯ ಕೂಡಿ ಕಾನನಕೆ ಪೋಗುವೆನೆಂದು
ರಾಮನತಿಭಕ್ತಿಯಿಂ ನಮಿಸಲಾಗ,
ಕೌಸಲ್ಯೆಯೊಲಿದಿತ್ತ ಸರ್ವಲೋಕಾಭೇದ್ಯ
ರಕ್ಷೆಯು ಹಿರಿಬಲ್ಮೆ ನಿನ್ನೊಳಿರಲಿ ;
ತ್ರಿಪುರರನು ಕೊಲಲೆಂದು ಪೊರಮಡುತೆ ಷಣ್ಮುಖಂ
ಮಾತೆ ಕಾತ್ಯಾಯಿನಿಗೆ ನಮಿಸಲಾಗ,
ಜಗದಾದಿಜನನಿಯಿತ್ತಸಮ ಶಕ್ತ್ಯಾಯುಧದ
ವಿಜಯ ಲಾಭದ ಗರಿಮೆ ನಿನಗಾಗಲಿ ;
ವ್ಯೂಹವನು ಭೇದಿಸುತೆ ಶತ್ರುಗಳ ಕೊಂದೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಪಿತನಿಗೆ ಸಾಟಿ ಧೀರನಾಗು,
ಶತ್ರು ನಿಕರವ ಹರಿಸಿ ಲೋಕೈಕವೀರನೆನಿಸಿ,
ವಿಜಯವನು ಪಡೆ, ಕೀರ್ತಿಶಾಲಿಯಾಗು.

ಅಭಿಮನ್ಯು : ತಾಯಿ, ಅನುಗ್ರಹಿತನಾದೆನು. ನಿನ್ನ ಆಶೀರ್ವಾದದ ಮಹಿಮೆಯಿಂದ ದ್ರೋಣನ ಚಕ್ರವ್ಯೂಹವನ್ನು ಆಟದ ಮಣ್ಣಿನ ಕೋಟೆಯಂತೆ ಭೇದಿಸುವೆನು. ಉತ್ತರಾ, ನಗುತ್ತಾ ನನ್ನನ್ನು ಬೀಳ್ಕೊಡು. (ಉತ್ತರೆಯ ಕೈಯನ್ನು ಸುಭದ್ರೆಯ ಕೈಲಿಟ್ಟು) ತಾಯಿ, ನೋವೇನೆಂಬುದನ್ನು ತಿಳಿಯದ ಈ ನನ್ನ ಮುದ್ದು ಮಲ್ಲಿಗೆಯನ್ನು ನಿನ್ನ ಕೈಲಿಡುವೆನು. ಇಂದಿನ ಯುದ್ಧದ ದುರ್ಭರ ಸಂದೇಹದಿಂದ ಅದು ಸುಡದಿರಲಿ. ಇಂದಿನ ಮಹತ್ ಸಾಹಸದಲ್ಲಿ ನಾನೊಂದು ವೇಳೆ.....

ಸುಭದ್ರೆ : ಅಭದ್ರವನ್ನು ನುಡಿಯಬೇಡ, ಕುಮಾರ. ವೀರ ಕ್ಷತ್ರಿಯನಿಗೆ ರಣಭೂಮಿಯು ತಾಯಮಡಿಲಿನಂತೆ, ಶಸ್ತ್ರಾಸ್ತ್ರಗಳು ಒಡಹುಟ್ಟಿದ ಬಂಧುಗಳಂತೆ, ಕೀರ್ತಿಯು ನಚ್ಚಿನ ನಂಟನಂತೆ. ಸಾವು ಬದುಕುಗಳೆಂಬ ಆಳತೆಗೋಲಿನಿಂದ ಅವನು ಪ್ರತಿನಿತ್ಯವೂ ಜೀವನವನ್ನು ಅಳೆಯುವನು. ಅಂಜಿ ನಿರಾಶನಾಗುವುದಿಲ್ಲ. ಹೋಗು ಪುತ್ರ. ಜಯಶಾಲಿಯಾಗಿ ಹಿಂದಿರುಗು.

(ಅಭಿಮನ್ಯುವು ಹೋಗುವನು. ಕ್ಷಣಕಾಲ ಉತ್ತರೆಯೂ ಸುಭದ್ರೆಯೂ ಅವನು ಹೋದಕಡೆಯನ್ನೇ ನೋಡುತ್ತಾ ಸುಮ್ಮನೆ ನಿಲ್ಲುವರು)

ಉತ್ತರೆ : ತಾಯಿ, ನಿನ್ನ ಮಡಿಲಿನಲ್ಲಿ ನನಗಾಶ್ರಯವನ್ನು ಕೊಡು. ಅಭಾಗಿನಿ ಉತ್ತರೆಯ ದುಃಖವನ್ನು ನೀನು ಮಾತ್ರ ತಿಳಿಯಬಲ್ಲೆ.

ಸುಭದ್ರೆ : ಸ್ಥಿರಳಾಗು, ಉತ್ತರಾ, ವೃಥಾ ಅಮಂಗಳದ ಆಶಂಕೆಯಿಂದ ಮನಸ್ಸಿನ ಶಾಂತಿಯನ್ನು ನಾಶಮಾಡಿಕೊಳ್ಳಬೇಡ. ನೀನು ವೀರ ಕ್ಷತ್ರಿಯಳು. ವೀರ ವಿರಾಟನ ಪುತ್ರಿಯಾಗಿ ಜನಿಸಿದೆ. ವೀರನ ಕೈಹಿಡಿದೆ. ಮುಂದೆ ವೀರನಾದ ಮಗನನ್ನು ಪಡೆಯುವೆ. ಇಂತಹ ನೀನು ಒಂದು ಯುದ್ಧದ ಸಲುವಾಗಿ ಕಾತರಳಾಗುವೆಯಾ ?

(ಹೋಗುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ೬—ಯುದ್ಧಕ್ಷೇತ್ರ

ದ್ರೋಣ : (ದ್ರೋಣನು ಚಿಂತಿಸುತ್ತಾ ಪ್ರವೇಶಿಸುವನು) ಮೃತ್ಯುಂಜಯೀ ಭೀಷ್ಮನು ಪರಾಜಿತನಾದನು. ಜರಾಜೀರ್ಣನಾದ ದ್ರೋಣನೀಗ ಸೇನಾಧಿಪತಿ. ಈ ರಣಯಜ್ಞದ ಹತ್ಯಾಕಾಂಡವು ಇಂದು ದ್ರೋಣನ ಬೆನ್ನು ಬಿದ್ದಿರುವುದು. ಹಿಂಸೆಯ ಅಧಿಕಾರ ಮುಕುಟದ ಭಾರದಿಂದ ದ್ರೋಣನಿಂದು ತಲೆಬಾಗಿರುವನು. ಹೇ ಕೃತಾಂತ, ನಿನ್ನ ಪ್ರಳಯ ರಂಗದಲ್ಲಿ ನನಗಿಂತಹ ಪಾತ್ರವನ್ನು ಕೊಟ್ಟಿಯೇಕೆ? ನನ್ನಿಂದ ಅಸ್ತ್ರ ವಿದ್ಯೆಯನ್ನು ಕಲಿತ ಕುರುಪಾಂಡವರೀಗ ರಣೋನ್ಮತ್ತರಾಗಿ ಒಬ್ಬರ ನ್ನೊಬ್ಬರು ವಧೆ ಮಾಡುತ್ತಾ ನಿನ್ನ ಅಂಧಃಕಾರಪುರಿಯ ಸಾಂದ್ರತೆ ಯನ್ನು ಹೆಚ್ಚಿಸುತ್ತಿರುವರು ; ಮತ್ತು ನಾನು, ನಾಣ್ಗೇಡಿಯಂತೆ ಯುಕ್ತಾಯುಕ್ತ ವಿವೇಚನೆಯನ್ನು ತೊರೆದು, ಈ ಭಯಂಕರ ನರಮೇಧ ದಲ್ಲಿ ದೀಕ್ಷಿತನಾಗಿರುವೆನು.

ಯುಧಿ : (ಯುಧಿಷ್ಠಿರನು ವೇಗದಿಂದ ಬರುವನು) ಕುರುಕ್ಷೇತ್ರದ ಧರ್ಮ ಯುದ್ಧದಲ್ಲಿ ಅಧರ್ಮದ ಧೂಮಕೇತುವು ಉದಯಿಸಿರುವುದು. ನೀನು ದಳಪತಿಯಾಗಿದ್ದು ಹೀಗಾಗುವುದೇ ಗುರುದೇವ ?

ದ್ರೋಣ : ಏನಾಯಿತು, ಯುಧಿಷ್ಠಿರ ?

ಯುಧಿ : ನೀನು ರಚಿಸಿದ ಚಕ್ರವ್ಯೂಹವು ಅಭಿಮನ್ಯು ಕುಮಾರನ ಸಾವಿನ ಸಿಡಿಯಾಗಿ ಪರಿಣಮಿಸುವುದು. ನಮ್ಮೆಲ್ಲರ ಅನುರೋಧವನ್ನು ಲಕ್ಷಿಸದೆ ಕುಮಾರನು ವ್ಯೂಹವನ್ನು ಪ್ರವೇಶಿಸಿದನು. ಆಮೇಲೆ ಮಹಾ ದೇವನ ವರದಿಂದ ಮದೋನ್ಮತ್ತನಾದ ಸೈಂಧವನು ವ್ಯೂಹ ಮುಖದಲ್ಲಿ ಕುಳಿತು ನಮ್ಮನ್ನು ಒಳಗೆ ಹೋಗದಂತೆ ಪ್ರತಿಬಂಧಿಸಿರುವನು. ಈಗ ಪ್ರಕ್ಷುಬ್ಧವಾದ ಕೌರವ ಸೈನ್ಯದ ಮಧ್ಯದಲ್ಲಿ ಕುಮಾರನು ಏಕಾಂಗಿ ! ನಾವಾರೂ ಅವನ ಸಹಾಯಕ್ಕೆ ಹೋಗಲಾರದವರಾಗಿರುವೆವು.

ದ್ರೋಣ : ಅರ್ಜುನನೆಲ್ಲಿ ? ಮಹಾದೇವನ ವರವು ಅವನನ್ನು ಮಾತ್ರ ಪ್ರತಿಬಂಧಿಸಲಾರದು.

ಯುಧಿ : ಅರ್ಜುನನು ಸಂಶಪ್ತಕರೊಡನೆ ಹೋರಾಡುತ್ತಿರುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನನ್ನು ಹಿಂದಿರುಗಿಸುವ ಸಂಭವವಿಲ್ಲ. ಗುರುದೇವ, ಇದು ಧರ್ಮ ಯುದ್ಧವಲ್ಲ. ಇದಕ್ಕೊಂದು ಪ್ರತೀಕಾರವನ್ನು ಚಿಂತಿಸು.

ದ್ರೋಣ : ನಾನು ಕೇವಲ ಭೃತ್ಯನು. ಏನೂ ಮಾಡಲಾರದವನಾಗಿರುವೆನು, ಯುಧಿಷ್ಠಿರ. ಕೌರವರ ಅನ್ನವನ್ನು ತಿಂದೆ. ಅವರ ಆಜ್ಞೆಯನ್ನು ಪಾಲಿಸುವುದು ಈಗೆನ್ನ ಕರ್ತವ್ಯ.

ಯುಧಿ : ಈ ಮಾತುಗಳು ಆಚಾರ್ಯ ದ್ರೋಣರ ಬಾಯಿಂದ ಹೊರಟಿತೆ !

ದ್ರೋಣ : ಹೌದು ಧರ್ಮರಾಜ. ಸೇವಾಪಾಶದಿಂದ ಇಂದು ಕೋಟಿ ಕೋಟಿ ದ್ರೋಣರು ಧರ್ಮದ ಹೆಸರನ್ನು ಕೂಡಾ ಮರೆತಿರುವರು. ಅವರ ಬಾಗಿದ ಕಣ್ಣುಗಳಿಗೆ ಬೀಳುವುದು ತಮ್ಮ ಹಸಿದ ಹೊಟ್ಟೆ, ಒಡೆಯನ ಅಡಿದಾವರೆ, ಇವೆರಡೇ ! ಎಲ್ಲಿ ಮಾನವನು ಮೆದುಳಿನ ಜ್ಞಾನಭಂಡಾರವನ್ನು, ತೋಳುಗಳ ಕಲಿತನದ ಸಿರಿಯನ್ನು, ಸಂತೆಯಲ್ಲಿ ಮಾರಲಿಡುವನೋ ಅಲ್ಲಿ ಧರ್ಮಕ್ಕೆ ಸ್ಥಳವೆಲ್ಲಿಯದು ?

ಯುಧಿ : (ಕಿವಿಗಳನ್ನು ಮುಚ್ಚಿಕೊಂಡು) ಹಾ ! ನಾನು ಕೇಳುತ್ತಿರುವುದೇನು ! ಈಶ್ವರ ! ಆಚಾರ್ಯ, ನೀನು ನನ್ನ ಶಿಕ್ಷಾಗುರುವಾದ ದ್ರೋಣನೇ ? ಅಥವಾ ಯಾವುದಾದರೊಂದು ದುಷ್ಟಭೂತ ನಿನ್ನ ಶರೀರವನ್ನು ಆಶ್ರಯಿಸಿರುವುದೋ ! ಸಹಿಸಲಾರೆನು, ಸಹಿಸಲಾರೆನು. (ಹೋಗುವನು)

ದುರ್ಯೋಧನ : (ಬೇರೆ ಕಡೆಯಿಂದ ದುರ್ಯೋಧನನು ಬರುವನು) ಇದೇನು ? ಆಚಾರ್ಯ, ಕೈಗೆ ಸಿಕ್ಕ ಶತ್ರುವನ್ನು ಹಾಗೆಯೇ ಬಿಡುವುದೆ ? ಭೀಷ್ಮನ ತರುವಾಯ ನಿಮ್ಮನ್ನು ಸೇನಾಪತಿಯಾಗಿ ಮಾಡಿದುದು ಇದಕ್ಕಾಗಿಯೋ ?

ದ್ರೋಣ : ದುರ್ಯೋಧನ !

ದುರ್ಯೋಧನ : ಅಷ್ಟುಮಾತ್ರವಲ್ಲ. ಅಭಿಮನ್ಯುವಿನಂತಹ ಸಾಮಾನ್ಯ ಬಾಲಕನಿಂದ ಕುರುಸೈನ್ಯವನ್ನುದ್ಧರಿಸಲಾರದೆ ಹೋದಿರಿ ! ಪರಾಜಿತರಾಗಿ ಇಲ್ಲಿಗೆ ಓಡಿಬಂದಿರಿ ! ಇದಕ್ಕಿಂತ ಅಪಮಾನವೇ ?

ದ್ರೋಣ : ಅಭಿಮನ್ಯುವನ್ನು ಸಾಮಾನ್ಯನೆಂದು ತಿಳಿದೆಯ, ದುರ್ಯೋಧನ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅವನ ಗಂಭೀರ ಮುಖಮುದ್ರೆಯನ್ನೊಂದು ಸಾರಿ ದೃಷ್ಟಿಸು. ಆ ಹದಿನೆಂಟು ವರ್ಷದ ಬಾಲಕನಲ್ಲಿ ಅರ್ಜುನನ ವಿಕ್ರಮ, ಭೀಮನ ಸಾಹಸ, ಯುಧಿಷ್ಠಿರನ ಸ್ಥೈರ್ಯ ಮತ್ತು ಕೃಷ್ಣನ ಮನೋಹಾರಕ ಮಾಧುರ್ಯವು ಸಮ್ಮಿಳಿತವಾಗಿರುವುದು.

ದುರ್ಯೋಧನ : ಈ ಮಾತುಗಳನ್ನಾಡಲು ಲಜ್ಜೆಯಿಲ್ಲವೆ, ಆಚಾರ್ಯ ?

ದ್ರೋಣ : ಅಭಿಮಾನಾಸ್ಪದವಾದ ವಿಷಯದಲ್ಲಿ ಲಜ್ಜೆಯೇಕೆ ? ಆ ವೀರ ಬಾಲಕನ ಪರಾಕ್ರಮವನ್ನು ನೋಡಿ ನನ್ನ ಸರ್ವಾಂಗವೂ ಪುಳಕಿತ ವಾಗುತ್ತಿರುವುದು. ದ್ರೋಣನ ಜೀವಿತದಲ್ಲಿ ಇದು ಅತ್ಯಂತ ಅಭಿಮಾನದ ಸಂವಿಧಾನ. ಜಗತ್ತಿನಲ್ಲಿ ದ್ರೋಣನ ಶಿಷ್ಯರೆಂತಹವರೆಂದರೆ, ಆ ಶಿಷ್ಯನೊಬ್ಬನ ಮಗನ ಸಂಗಡ ಸೆಣಸಲು ಸ್ವಯಂ ದ್ರೋಣನೂ ಅಸಮರ್ಥನು! ನೋಡು, ಕುರುರಾಜ, ಅಭಿಮನ್ಯುವಿನ ಆಘಾತದಿಂದ ಸೈನ್ಯವು ತಲ್ಲಣಗೊಂಡಿರುವುದು. ಅದೋ ! ಕೃತವರ್ಮನು ಪರಾಸ್ತನಾದನು. ಸಾರಥಿಯನ್ನು ಕಳೆದುಕೊಂಡ ದುಶ್ಶಾಸನನ ರಥದ ಕುದುರೆಗಳು ಶಿಬಿರದ ಕಡೆಗೆ ಓಡುತ್ತಿರುವುವು. ಭಲೆ ! ಅಭಿಮನ್ಯು ಕುಮಾರ !

(ಕರ್ಣನು ಓಡಿಬರುವನು)

ಕರ್ಣ : ಪ್ರಮಾದವಾಯಿತು ! ಪ್ರಮಾದವಾಯಿತು ! ಆಚಾರ್ಯ, ಅಭಿಮನ್ಯುವಿನ ವಧೆಯ ಹೊರತು ಕುರುಸೈನ್ಯಕ್ಕೆ ನಿಸ್ತಾರವಿಲ್ಲ.

ದ್ರೋಣ : ಅದನ್ನು ಬಲ್ಲೆ. ಆದರೇನು ಮಾಡುವುದು, ಕರ್ಣ. ಈ ದಿನದ ಅದ್ಭುತ ಘಟನೆಗಳಿಂದ ನನ್ನ ಬುದ್ಧಿ ಸ್ತಂಭಿತವಾಗಿರುವುದು. ದ್ರೋಣನ ಶಿಷ್ಯನಿಗೆ ಶಿಷ್ಯನಾದ ಅಷ್ಟಾದಶ ವರ್ಷದ ತರುಣ ವೀರನೊಬ್ಬನು ಸಮಗ್ರ ಕುರುಸೈನ್ಯದೊಡನೆ ಸೆಣಸುತ್ತಿರುವನು. ಅಸ್ತ್ರಾಚಾರ್ಯನೆಂಬ ದ್ರೋಣನ ಕೀರ್ತಿ ಈ ದಿನ ಸಾರ್ಥಕವಾಯಿತು.

ದುರ್ಯೋಧನ : ಸರ್ವನಾಶ ! ಅತ್ತನೋಡು ಆಚಾರ್ಯ, ಕುಮಾರ ಲಕ್ಷ್ಮಣನು ಅಭಿಮನ್ಯುವಿಗೆದುರಾದನು.

ದ್ರೋಣ : ಪ್ರಮಾದವಾಯಿತು. ಎಲ್ಲರೂ ನಡೆಯಿರಿ. ಪ್ರಾಣಪಣವಾಗಿ ಯಾರಾದರೂ ರಾಜಪುತ್ರನನ್ನು ರಕ್ಷಿಸಬೇಕು.

(ಎಲ್ಲರೂ ಆತುರದಿಂದ ನಿಷ್ಕ್ರಮಿಸುವರು)

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕುನಿ : (ಶಕುನಿಯು ಪ್ರವೇಶಿಸುವನು) ಇನ್ನು ನನ್ನ ಪ್ರತಿಶೋಧದ ದಾವಾಗ್ನಿಯು ಹತ್ತಿ ಉರಿಯಲಾರಂಭಿಸುವುದು. ದುರ್ಯೋಧನನು ಪುತ್ರಶೋಕದಿಂದ ಹಂಬಲಿಸುವನು, ಆಃ ಹಃ ಹಾಃ ! ಶಕುನಿಗೀಗ ಪರಮಾನಂದ ! ಆದರೆ ಈ ಪರಾಜಯದಿಂದ ಹತಾಶನಾದ ದುರ್ಯೋಧನನು ಪಾಂಡವರೊಡನೆ ಸಂಧಿಗೆಳಸಿದರೆ ? ಪಾಂಡವರು ಅದಕ್ಕೊಪ್ಪಿದರೆ ? ಇಲ್ಲ, ಇಲ್ಲ, ಹಾಗೆಂದಿಗೂ ಆಗಕೂಡದು. ಶಕುನಿಯ ಪ್ರತಿಜ್ಞೆಯು ಎಂದಿಗೂ ಭಂಗವಾಗುವುದಿಲ್ಲ.....(ಯೋಚಿಸಿ) ಇದಕ್ಕೊಂದು ತಂತ್ರವನ್ನು ಹೂಡುವೆನು. ಇದುವರೆಗೆ ಆರ್ಯಾವರ್ತದಲ್ಲಿ ಯಾರೂ ಕಂಡು ಕೇಳದ ದುಸ್ಸಹ ಹತ್ಯಾಚಾರವೊಂದು ಕುರುಕ್ಷೇತ್ರದಲ್ಲಿ ನಡೆಯುವಂತೆ ಮಾಡುವೆನು. ಆ ನೆನಪಿನಿಂದ ದಗ್ಧರಾದ ಪಾಂಡವರು ಸಮಗ್ರ ಪೃಥ್ವಿಯ ಆಧಿಪತ್ಯದ ಸಲುವಾಗಿಯೂ ಸಂಧಿಗೊಡಂಬಡುವುದಿಲ್ಲ. ಕ್ಷಮಿಸು, ಅಭಿಮನ್ಯು. ಈ ದಿನ ಅಧರ್ಮ ಯುದ್ಧದಲ್ಲಿ ನೀನು ಮೃತನಾಗುವೆ. ಏಕೆಂದರೆ, ಕುರುಕುಲವನ್ನು ಸಮೂಲವಾಗಿ ನಾಶ ಮಾಡಬಲ್ಲ ದುಸ್ಸಹ ದ್ವೇಷಾಗ್ನಿಯು ಅರ್ಜುನನ ಹೃದಯದಲ್ಲಿ ಪ್ರಜ್ವಲಿತವಾಗಲು ನಿನ್ನ ಮರಣವು ಅಗತ್ಯ.

(ದುರ್ಯೋಧನ, ದ್ರೋಣ, ದುಶ್ಶಾಸನ, ಕರ್ಣಾದಿಗಳು ಪ್ರವೇಶಿಸುವರು)

ದುರ್ಯೋಧನ : ಪುತ್ರನು ಹತನಾದನು, ಶಕುನಿ. ಕುಮಾರ ಲಕ್ಷ್ಮಣನು ನಮ್ಮನ್ನು ತ್ಯಜಿಸಿದನು.

ಶಕುನಿ : ಹತನಾದನು ! ನಡೆಯಿರಿ. ಕುಮಾರನ ಮರಣಕ್ಕೆ ಕಾರಣನಾದ ಅಭಿಮನ್ಯುವನ್ನು ನಾವೆಲ್ಲರೂ ಸೇರಿ ಸಂಹಾರ ಮಾಡುವ.

ಕರ್ಣ : ಬಹು ಜನರು ಒಬ್ಬನನ್ನು ಆಕ್ರಮಣ ಮಾಡುವುದು ಧರ್ಮಯುದ್ಧವಲ್ಲ.

ಶಕುನಿ : ಯುದ್ಧಗಳಲ್ಲಿ ಧರ್ಮಾಧರ್ಮಗಳ ಗೊಡವೆಯೇಕೆ ?

ಕರ್ಣ : ಅಲ್ಲದೆ ಆಚಾರ್ಯ ದ್ರೋಣನು ಅಂತಹ ಯುದ್ಧಕ್ಕೆ ಸಮ್ಮತಿಸುವುದಿಲ್ಲ.

ಶಕುನಿ : ಏಕೆ ಸಮ್ಮತಿಸುವುದಿಲ್ಲ ? ಧರ್ಮದ ನೆವದಿಂದ ಒಬ್ಬ ಬಾಲಕನ ವಧೆಗೆ ಹಿಂಜರಿಯುವ ಮೃದುಹೃದಯನಾದ ಬ್ರಾಹ್ಮಣನು ಈ ಮಹಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಯುದ್ಧದ ಸೇನಾಧಿಪತ್ಯವನ್ನು ನಿರ್ವಹಿಸುವುದು ಸಾಧ್ಯವೆ? ಯುದ್ಧ ಕ್ಷೇತ್ರವು ಧರ್ಮಸೂಕ್ಷ್ಮಗಳನ್ನು ವಿವೇಚಿಸುವ ವಿದ್ವತ್ ಸಭೆಯಲ್ಲ. ಅಗ್ನಿವೃಷ್ಟಿಯನ್ನು ಸುರಿಸುವ ಪರ್ವತದಡಿಯಲ್ಲಿ ತಂಗಾಳಿಗೆ ಸ್ಥಾನವೆಲ್ಲಿಯದು? ಯುದ್ಧವು ಹಿಂಸೋನ್ಮತ್ತಳಾದ ಅಂಧರಾಕ್ಷಸಿ; ಧರ್ಮ, ನೀತಿ ಮತ್ತು ವಿವೇಕಗಳಿಗೆ ಮೃತ್ಯುಸ್ವರೂಪಿಣಿ. ಅವಳಿಗೆ ಸ್ತ್ರೀಪುರುಷರೆಂಬ ಭೇದವಿಲ್ಲ. ಬಾಲ ವೃದ್ಧರೆಂಬ ವಿವೇಚನೆಯಿಲ್ಲ. ಏನಾದರೊಂದು ಉಪಾಯದಿಂದ ಶತ್ರುವನ್ನು ವಧಿಸುವುದು ಯುದ್ಧದ ಸಾಮಾನ್ಯ ನೀತಿ.

ದುರ್ಯೋಧನ : ಹೌದು, ಇದೆನ್ನ ಆಜ್ಞೆ. ನೀವೆಲ್ಲರೂ ಸೇರಿ ಅಭಿಮನ್ಯುವನ್ನು ಆಕ್ರಮಣ ಮಾಡಿರಿ.

ದ್ರೋಣ : ಕೌರವೇಶ್ವರ, ಇಂದು ನಾನು ನಿನ್ನ ಸೇನಾಧಿಪತಿ. ನಿನ್ನ ಆಜ್ಞೆಯನ್ನು ಪಾಲಿಸುವೆನು.....ನೀವೆಲ್ಲರೂ ನನ್ನ ಸಂಗಡ ಬನ್ನಿರಿ.

(ಎಲ್ಲರೂ ನಿಷ್ಕ್ರಮಿಸುವರು)

(ಪ್ರವೇಶ : ಸೈಂಧವ)

ಸೈಂಧವ : ಮಹಾದೇವನ ವರಪ್ರಸಾದದಿಂದ ಯುಧಿಷ್ಠಿರ ಭೀಮ ನಕುಲ ಸಹದೇವಾದಿ ಮಹಾರಥಿಕರನ್ನು ತಡೆಗಟ್ಟಿದೆನು. ಆದರೆ ಈ ಅಲ್ಪ ಅಭಿಮನ್ಯುವಿನ ಎದುರು ಪರಾಜಯವನ್ನೊಪ್ಪಿಕೊಳ್ಳಬೇಕಾಯಿತು. ದ್ರೋಣನ ನೇತೃತ್ವದಲ್ಲಿ ನಾವೇಳು ಜನರು ಏಳು ಸಾರಿ ಅವನನ್ನು ಆಕ್ರಮಣ ಮಾಡಿದೆವು. ಏಳುಸಾರಿಯೂ ಸೋತುದಾಯಿತು. ಭಲ! ಅಭಿಮನ್ಯು! ಆದರೆ ಈ ಸಾರಿ ನೀನು ಉದ್ಧಾರವಾಗುವುದಿಲ್ಲ. ಇದು ಸೈಂಧವನ ಕೊನೆಯ ಪ್ರಯತ್ನ. ಈ ಸಾರಿ ನಮ್ಮಿಬ್ಬರಲ್ಲೊಬ್ಬರು ಮೃತರಾಗಲೇಬೇಕು.

(ಚಕ್ರಹಸ್ತನಾದ ಅಭಿಮನ್ಯುವನ್ನು ದ್ರೋಣ, ಕರ್ಣ, ದುಶ್ಶಾಸನರು ಬೆನ್ನಟ್ಟಿ ಬರುವರು. ಅನ್ಯಪಾಶದಿಂದ ಸೈಂಧವನು ಆಕ್ರಮಣ ಮಾಡುವನು)

ಅಭಿಮನ್ಯು : ಎಂತಹ ಅಧರ್ಮ, ಅತ್ಯಾಚಾರವಿದು! ಹೇ ಜಗದೀಶ್ವರ! ಹೇ ಧರ್ಮಸ್ವರೂಪ! ನೀನಿದಕ್ಕೆ ಸಾಕ್ಷಿ!.........ಕೌರವನ ಅನ್ನದಿಂದ ಪರಿಪುಷ್ಟರಾದ ಕಾಪುರುಷರೇ, ಎರಡು ಹಿಡಿ ಕದನ್ನದ ಸಲುವಾಗಿ ಧರ್ಮ, ನೀತಿ ಮತ್ತು ಮನುಷ್ಯತ್ವಕ್ಕೆ ತಿಲಾಂಜಲಿಯನ್ನು ಕೊಟ್ಟಿರಾ? ನನ್ನ ರಥವು ಭಗ್ನವಾಯಿತು. ಧನುಸ್ಸು ಮುರಿಯಿತು. ಬತ್ತಳಿಕೆಯು

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಿದಾಗಿದೆ. ಈ ಚಕ್ರದ ಹೊರತಾಗಿ ಕೈಯಲ್ಲಿ ಮತ್ತಾವ ಆಯುಧವೂ ಇಲ್ಲ. ಇಂತಹ ನನ್ನನ್ನು ನೀವೇಳು ಜನ ಮಹಾರಥಿಕರು, ವೀರಾಧಿ ವೀರರು, ಏಲಕಾಲದಲ್ಲಿ ಆಕ್ರಮಣ ಮಾಡುವಿರಾ? ಧಿಕ್ಕಾರವಿರಲಿ ನಿಮ್ಮ ವರ್ತನೆಗೆ ! ಇಂತಹ ನೃಶಂಸತೆಯು ಕೌರವ ಪಕ್ಷದ ವೀರರಿಗೊಪ್ಪದು. ನೀವು ವೀರರಲ್ಲ, ಕುರುಸೈನ್ಯದ ಕಳಂಕಸ್ವರೂಪರು ! ಕ್ಷತ್ರಿಯ ಧರ್ಮದ ಸಪ್ತ ಅಭಿಶಾಪ! ನಿಮ್ಮಲ್ಲಿ ಒಂದು ಅಣುವಿನಷ್ಟು ಮನುಷ್ಯತ್ವವು ಇನ್ನೂ ಉಳಿದಿದ್ದರೆ ಒಬ್ಬೊಬ್ಬರಾಗಿ ಬನ್ನಿರಿ. ನಿರಾಯುಧನಾಗಿ ನಿಮ್ಮೊಡನೆ ಹೋರಾಡುವೆನು. ಆದರೀ ಅಮಾನುಷ ಅತ್ಯಾಚಾರವೇಕೆ ?

ಕುರುಸೈನ್ಯಕಧಿಪರೆನಿಸುತೆ
ನಿರಸ್ತ್ರನಾದೆನ್ನೊಳಿಂತು ನಡೆವಿರಾ ! ಛೀ ! ಕೇ
ಸರಿ ಶಿಶುವಂ ಮೇಳೈಸಿದ
ಕರಿಯೂಥಂ ಲಜ್ಜೆಯುಳಿದು ವಿಜೃಂಭಿಸವೋಲ್

ದುಶ್ಶಾಸನ : ಆಕ್ರಮಣ ಮಾಡಿರಿ. ಒಂದು ಅಲ್ಪ ಚಕ್ರದ ಭಯದಿಂದ ಹಿಮ್ಮೆಟ್ಟುವಿರಾ ?

ಅಭಿಮನ್ಯು : ಹಾಗಾದರೆ ಇದರ ಮಹಿಮೆಯನ್ನು ನಿಮಗೆ ತೋರಿಸುವೆನು.

(ಚಕ್ರವನ್ನೆಸೆಯುವನು. ಎಲ್ಲರೂ ಸೇರಿ ಅದನ್ನು ತಡೆಯುವರು)

ದುಶ್ಶಾಸನ : ಕೃತವರ್ಮ, ಬೃಹದಶ್ವ ಇದು ನಿಮ್ಮ ಅನುಕೂಲಾವಸರ. ಪ್ರಹಾರ ಮಾಡಿರಿ. ಅಭಿಮನ್ಯುವು ನಿರಸ್ತ್ರನಾದನು.

ಅಭಿಮನ್ಯು : ಈ ಬಾಹುಗಳಲ್ಲಿ ಶಕ್ತಿಯಿರುವವರೆಗೂ ಅಭಿಮನ್ಯುವೆಂದಿಗೂ ನಿರಸ್ತ್ರನಾಗುವುದಿಲ್ಲ.

(ಎದುರಾಳಿಯೊಬ್ಬನನ್ನು ಮುಷ್ಟಿಯಿಂದ ಹೊಡೆದು ಗದೆಯನ್ನು ಕಿತ್ತುಕೊಳ್ಳುವನು. ಸೈಂಧವನು ಹಿಂದಿನಿಂದ ಬಂದು ಅದನ್ನು ತನ್ನ ಗದೆಯಿಂದ ದೂರ ಹಾರಿಸುವನು)

ಸೈಂಧವ : ಅಭಿಮನ್ಯುವಿನ ಶಪಥವನ್ನು ವಿಫಲವಾಗಿ ಮಾಡಲು ಈ ಸೈಂಧವನೊಬ್ಬನಿರುವನು. ಹೊಡೆ, ದುಶ್ಶಾಸನ.

ಅಭಿಮನ್ಯು : ಧಿಕ್ಕಾರ ಸೈಂಧವ, ಈ ನಿನ್ನ ವಂಚನೆಯಿಂದ ವೀರೋಚಿತ ಯುದ್ಧವನ್ನು ಕಟುಕನ ಹಿಂಸಾಕ್ರಿಯೆಗಿಂತ ಹೀನವಾಗಿ ಮಾಡಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಧಾತ! ಘೋರ ನರಕವೊಂದನ್ನು ರಚಿಸಲು ಇಷ್ಟೊಂದು ಅಭಿಸಂಧಿಯೇಕೆ? ತಂದೆ! ಪೂಜ್ಯನಾದ ಯುಧಿಷ್ಠಿರ! ಕುರುಕ್ಷೇತ್ರದ ಅಧಿಪತಿ ವಾಸದೇವ! ನನ್ನನ್ನು ಬಲಿಗೊಡಲು ನೀವೆಲ್ಲರೂ ಸೇರಿ ಈ ಅಧರ್ಮದ ಯೂಪಸ್ತಂಭವನ್ನು ನಿರ್ಮಿಸಿದಿರೋ..... ...ಬನ್ನಿರಿ ಒಬ್ಬೊಬ್ಬರಾಗಿ. ಅಭಿಮನ್ಯುವು ನಿರಾಯುಧನಾದರೂ ಹೇಡಿಯಲ್ಲ. ತನ್ನೊಂದು ಮುಷ್ಠಿಯ ಆಘಾತದಿಂದ ನಿಮ್ಮಂತಹ ಶತಾಧಿಕ ಮಾನವ ಕೀಟಗಳನ್ನು ಧ್ವಂಸಮಾಡುವನು.

ಸೈಂಧವ : ಮುಷ್ಠಿಯುದ್ಧಕ್ಕೆ ತೊಡಗಿದರೆ ಖಂಡಿತವಾಗಿ ಸೋಲುವೆ, ದುಶ್ಯಾಸನ, ಗದೆಯಿಂದ ಹೊಡೆ. ನಾನು ಹಿಂದಿನಿಂದ ಹೊಡೆಯುವೆನು.

(ಇಬ್ಬರೂ ಅಭಿಮನ್ಯುವಿನ ಮೇಲೆ ಬೀಳುವರು. ಗದಾಘಾತದಿಂದ ಅಭಿಮನ್ಯುವಿನ ಪತನ)

ಅಭಿಮನ್ಯು : ದೈವವೇ, ನೀನೂ ನನ್ನಲ್ಲಿ ಪರಾಙ್ಮುಖನಾದೆಯು? ಆಚಾರ್ಯ! ತಂದೆಗೆ ಶಸ್ತ್ರ ಶಿಕ್ಷಣವನ್ನು ಕೊಟ್ಟ ಗುರು! ಕೌರವರ ದಳಪತಿ! ಬ್ರಾಹ್ಮಣ ತಿಲಕ! ನಿನ್ನ ಸೇನಾಧಿಪತ್ಯದಲ್ಲಿ ಇಂತಹ ಅನರ್ಥವಾಯಿತೇ! ಕ್ಷತ್ರಿಯೋಚಿತವಾದ ಆಶೋತ್ತರಗಳಿಂದ ವಂಚಿತನಾಗಿ, ಈ ನವತಾರುಣ್ಯದಲ್ಲಿ, ಈ ಅಧರ್ಮ ಯುದ್ಧದಲ್ಲಿ ಪರಾಜಯ ಹೊಂದಿ ಪ್ರಾಣ ತ್ಯಾಗ ಮಾಡಲು ನಾನು ದುಃಖಿಸುತ್ತಿಲ್ಲ. ಆದರೆ ನಿನ್ನ ಅಧಃಪತನವನ್ನು ನೋಡಿ ನನ್ನ ಹೃದಯವು ಕಂಪಿಸುವುದು. ಕೊನೆಗೆ.....ಹಾ! ಈಶ್ವರ!

(ಪ್ರಾಣತ್ಯಾಗ)

(ದ್ರೋಣನು ಅಭಿಮನ್ಯುವನ್ನು ನೋಡುತ್ತಾ ತಲೆಯಮೇಲೆ ಕೈಯಿಟ್ಟುಕೊಂಡು ನಿಲ್ಲುವನು. ಸೈಂಧವ ದುಶ್ಯಾಸನರು ಅಟ್ಟಹಾಸದಿಂದ ನಗುವರು)

ದೃಶ್ಯ ೭ — ಸುಭದ್ರೆಯ ಅಂತಃಪುರ

(ಉತ್ತರೆಯು ತಲ್ಪದ ಮೇಲೆ ಮಲಗಿರುವಳು. ಮಾಧವಿಯು ಸಮೀಪದಲ್ಲಿ ಕುಳಿತು ಸೇವೆ ಮಾಡುತ್ತಿರುವಳು. ಸುಭದ್ರೆ ಪ್ರವೇಶಿಸಿ)

ಸುಭದ್ರೆ : ಮಾಧವಿ, ಉತ್ತರೆಗೆ ಈಗ ಹೇಗಿದೆ?

ಮಾಧವಿ : ಅತ್ತು ಅತ್ತು ಸಾಕಾಗಿ ಕೊನೆಗೆ ಸ್ವಲ್ಪ ನಿದ್ರೆ ಹೋಗಿರುವಳು.

ಸುಭದ್ರೆ : ನಿದ್ರೆ ಮಾಡಲಿ. ಈ ಬಾಲಿಕೆಯ ಕೋಮಲ ಹೃದಯವು ಯುದ್ಧದ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಬಳಲಿ ಬೆಂಡಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗಿದೆ. ಇನ್ನೇನು ಸಂಜೆಯಾಗುತ್ತಾ ಬಂತು. ಯುದ್ಧ ಭೂಮಿಯಿಂದ ಎಲ್ಲರೂ ಹಿಂದಿರುಗುವರು. ಆಗ ಅವಳಿಗೆ ಸಮಾಧಾನವಾಗುವುದು.

ಮಾಧವಿ : ಮಹಾರಾಣಿ ಈ ಯುದ್ಧವು ಉಚಿತವಾದುದೆ ?

ಸುಭದ್ರೆ : ಮಾಧವಿ, ನನ್ನ ಹೃದಯದಲ್ಲಿಯೂ ಈ ಪ್ರಶ್ನೆಯು ಮೇಲಿಂದ ಮೇಲೆ ಕೇಳಿಬರುತ್ತಿದೆ. ಪ್ರತಿದಿನವೂ ಎಷ್ಟೋಂದು ಜನರು ಹತರಾಗುತ್ತಿರುವರು. ಎಷ್ಟು ಸಂಸಾರಗಳು ಅನಾಥವಾಗುವುವು. ಎಷ್ಟು ಜನರು ತಮಗೆ ಪ್ರಿಯರಾದವರನ್ನು ಕಳೆದುಕೊಂಡು ಪುತ್ರಹೀನರೂ, ಪತಿಹೀನೆಯರೂ ಆಗುತ್ತಿರುವರು. ಇಷ್ಟೊಂದು ಜನರ ದುಃಖಕ್ಕೆ ಕಾರಣವಾದ ಯುದ್ಧವು ಧರ್ಮವೇ ಎಂದು ನನ್ನ ಸಂದೇಹ.

ಮಾಧವಿ : ಮಹಾರಾಣಿ, ದ್ರೌಪದಿ ದೇವಿಯವರು ಇದಕ್ಕೆ ಉತ್ತರ ಕೊಡಬಲ್ಲರು.

ಸುಭದ್ರೆ : ಯಾರು ಏನಾದರೂ ಹೇಳಲಿ. ಈ ದಿನ ಅಣ್ಣನು ಹಿಂತಿರುಗಿದ ಕೂಡಲೇ ಇನ್ನೊಂದು ಸಾರಿ ಸಂಧಿಗೆ ಪ್ರಯತ್ನಿಸುವಂತೆ ಬೇಡಿಕೊಳ್ಳುವೆನು. ಈ ಘೋರ ಹತ್ಯಾಕಾಂಡವು ಇನ್ನಾದರೂ ನಿಲ್ಲಲಿ. ಮಾಧವಿ, ಉತ್ತರೆಗೆ ಚೆನ್ನಾಗಿ ನಿದ್ರೆ ಬಂದಂತಿದೆ. ನಡೆ, ನಾವೂ ಸ್ವಲ್ಪ ವಿಶ್ರಮಿಸಿಕೊಳ್ಳೋಣ. (ಹೋಗುವರು)

ಉತ್ತರೆ : (ಕನವರಿಸುತ್ತಾ) ಎಷ್ಟು ದೂರದಿಂದ ನನ್ನನ್ನು ಕರೆಯುವೆ ನಿಲ್ಲು, ನಿಲ್ಲು, ನಾಥ. ನಾನೂ ಬರುವೆನು. (ಎಚ್ಚರಗೊಳ್ಳುವಳು)

(ಸುಭದ್ರೆಯ ಪ್ರವೇಶ)

ಸುಭದ್ರೆ : ಮಗಳೇ ಏನಾಯಿತು ? ಏಕೆ ಹೆದರಿದೆ ?

ಉತ್ತರೆ : ಅಮ್ಮ, ನಾನೊಂದು ಭಯಂಕರವಾದ ಕನಸನ್ನು ಕಂಡೆ.

ಸುಭದ್ರೆ : ಕನಸು ! ಏನಾಕನಸು ?

ಉತ್ತರೆ : ಹೇಳಲು ಭಯವಾಗುವುದಮ್ಮ. ರಣಭೂಮಿಯಲ್ಲಿ ನಾನೊಬ್ಬಳೇ ಹೋಗುತ್ತಿದ್ದೆ. ಎಲ್ಲ ಕಡೆಯೂ ಮೃತದೇಹಗಳು ರಾಶಿರಾಶಿಯಾಗಿ ಬಿದ್ದಿದ್ದವು. ಅಕಸ್ಮಾತ್ತಾಗಿ ನನ್ನೆದುರಿಗೆ ಒಂದು ಭಯಂಕರ ಕರಾಳಾಕೃತಿ ಕಾಣಿಸಿಕೊಂಡಿತು. ನಾನು ಹೆದರಿ ಮುಖವನ್ನು ಮುಚ್ಚಿಕೊಂಡೆ. ಆಗ ನಾನು ಪತಿಯ ಕಂಠಸ್ವರದಲ್ಲಿ 'ಭಯಪಡಬೇಡ ; ತಲೆಯೆತ್ತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡು' ಎಂದು ಹೇಳಿದ ಹಾಗಾಯಿತು. ಕಣ್ಣು ಬಿಟ್ಟು ನೋಡಿದೆ. ನನ್ನ ಪತಿಯು ಒಂದು ಎತ್ತರವಾದ ಸ್ಥಳದಲ್ಲಿ ಕುಳಿತುಕೊಂಡು ನನ್ನನ್ನು ಕರೆಯುತ್ತಿದ್ದನು. ಅಷ್ಟರಲ್ಲಿ ನನಗೆ ಎಚ್ಚರವಾಯಿತು.

ಸುಭದ್ರೆ : ಇದು ನಿನ್ನ ಚಿಂತೆಯ ಫಲ. ಕನಸಿನಲ್ಲಿ ಕಂಡುದಕ್ಕೆ ಯಾರಾದರೂ ಭಯಪಡುವರೆ ?

ಉತ್ತರೆ : ನನಗೆ ಹಾಗೆ ತೋರುತ್ತಿಲ್ಲ; ಅಮ್ಮ. ಈಗಲೂ ಆ ದೃಶ್ಯವು ನನ್ನ ಕಣ್ಣಿಗೆ ಕಟ್ಟಿದಂತಿದೆ !

ಸುಭದ್ರೆ : ಭಯದ ಕಾರಣವೇನೂ ಇಲ್ಲ. ಅಭಿಮನ್ಯು ಅಸಹಾಯ ವೀರನು. ಅವನ ಬೆಂಗಾವಲಾಗಿ ಭೀಮಾದಿಗಳು ಹೋಗಿರುವರು. ಇನ್ನು ಭಯವೆಲ್ಲಿಯದು ? (ನೇಪಥ್ಯದಲ್ಲಿ ಚೀತ್ಕಾರ ಧ್ವನಿ) ಶಿಬಿರದಲ್ಲಿ ಚೀತ್ಕಾರವೇಕೆ ? ಮಾಧವಿ ಏನಾಯಿತು ನೋಡು. (ಮಾಧವಿ ಹೋಗುವಳು) ಅಕಸ್ಮಾತ್ತಾಗಿ ರೋಧನ ಧ್ವನಿ, ನನ್ನ ಮನಸ್ಸಿನಲ್ಲಿಯೂ ಭಯಸಂಚಾರವಾಗುತ್ತಿರುವುದು. ಏನು ಮಾಡುವೆ, ದೇವಾ !

(ಮಾಧವಿಯು ರಕ್ತಸಿಕ್ತವಾದ ಪುಷ್ಪಹಾರವನ್ನು ಹಿಡಿದು ಸೈನಿಕರೊಡನೆ ಪ್ರವೇಶಿಸುವಳು)

ಸುಭದ್ರೆ : ಯಾರು ಈ ದೂತನು !

ಉತ್ತರೆ : ಅದು ನಾನು ಕೈಯಾರೆ ಸ್ವಾಮಿಗೆ ಹಾಕಿದ ಪುಷ್ಪ ಮಾಲೆ !

ಸುಭದ್ರೆ : (ಮಾಲೆಯನ್ನು ತೆಗೆದುಕೊಂಡು) ರಕ್ತದಿಂದ ತೊಯ್ದು ಭಿನ್ನ ಭಿನ್ನವಾಗಿದೆ !

ದೂತ : ಮಹಾರಾಣಿ, ಕುಮಾರ ಅಭಿಮನ್ಯುವು ಎದುರಿಲ್ಲದ ದರ್ಪದಿಂದ ಕಾದಾಡಿ ಚಕ್ರವ್ಯೂಹವನ್ನು ಭೇದಿಸಿದನು... ...

ಸುಭದ್ರೆ : ಭಾಪು, ಕುಮಾರ ! ನನ್ನ ಹರಕೆಯು ಫಲಿಸಿತು.

ದೂತ : ಅಭಿಮನ್ಯುವಿನ ಶೌರ್ಯದಿಂದ ಕೌರವ ಸೈನ್ಯವು ಹತವಾಯಿತು. ಕರ್ಣಾದಿ ಮಹಾರಥಿಕರು ಪರಾಜಿತರಾದರು. ಕುರುಕ್ಷೇತ್ರದಲ್ಲಿ ಎಲ್ಲ ಕಡೆಯಲ್ಲೂ ಅಭಿಮನ್ಯುವಿನ ಜಯಜಯಕಾರವೇ ಕೇಳಿಬರುತ್ತಿತ್ತು.

ಸುಭದ್ರೆ : ಧನ್ಯ ಕುಮಾರ. ಪಾರ್ಥಪುತ್ರನೆಂಬ ನಿನ್ನ ಹೆಸರು ಈಗ ಸಾರ್ಥಕವಾಯಿತು ! ... ಆಮೇಲೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ದೂತ : ಆದರೆ....

ಸುಭದ್ರೆ : ಆದರೇನು ? ಈಗ ನನ್ನ ಕುಮಾರನೆಲ್ಲಿ ? ಯುದ್ಧಭೂಮಿಯಲ್ಲಿ ಗಾಯಹೊಂದಿ ಬಿದ್ದಿರುವನೆ ?

ದೂತ : ಇಲ್ಲ. ಮಹಾರಾಣಿ....

ಸುಭದ್ರೆ : ಹೇಳು, ಹೇಳು ! ದೂತ, ನಿನ್ನ ಅಮಂಗಲದ ಸುದ್ದಿಯನ್ನು ಒಂದೇಸಾರಿಗೆ ಹೇಳಿಬಿಡು !

ದೂತ : ಚಕ್ರವ್ಯೂಹದಲ್ಲಿ ಯುದ್ಧಮಾಡುತ್ತಾ ಕುಮಾರ ಅಭಿಮನ್ಯುವು ವೀರಸ್ವರ್ಗವನ್ನು ಪಡೆದನು.

ಸುಭದ್ರೆ : ಹಾ ! ಪುತ್ರ !

ಉತ್ತರೆ : ಹಾ ! ಪ್ರಾಣೇಶ್ವರ ! (ಮೂರ್ಛೆ ಹೋಗುವಳು)

(ಸೈನಿಕನು ಹೋಗುವನು)

ಸುಭದ್ರೆ : ಹಾ ! ಕುಮಾರ, ರಣದೇವತೆಯು ಕೊನೆಗೂ ನಿನ್ನನ್ನು ಆಹುತಿ ಗೊಂಡಳೇ !

ಮಾಧವಿ : ಮಹಾರಾಣಿ, ಸ್ವಲ್ಪ ಸಮಧಾನ ಹೊಂದಿರಿ. ಉತ್ತರೆಯ ಅವಸ್ಥೆಯಾದರೋ....

ಸುಭದ್ರೆ : (ಉತ್ತರೆಗೆ ಶಿಶಿರೋಪಚಾರ ಮಾಡುತ್ತಾ) ಮಾಧವಿ, ಈ ಮಹತ್ ದುಃಖದ ಸಮ್ಮುಖದಲ್ಲಿ ನನ್ನ ದುಃಖ ಅವಾಕ್ಕಾಗಿರುವುದು !

ಉತ್ತರೆ : (ಎಚ್ಚೆತ್ತು) ಎಲ್ಲಿ ನನ್ನ ಸ್ವಾಮಿಯ ಜಯಮಾಲೆ. (ಹಾರವನ್ನು ತೆಗೆದುಕೊಂಡು) ಎಲೈ ಕುಸುಮಗಳೇ, ನನ್ನ ಸ್ವಾಮಿಯೂ ನಿಮ್ಮಂತೆ ರಕ್ತದಿಂದ ತೊಯ್ದು, ಕ್ಷತವಿಕ್ಷತನಾಗಿ ರಣಭೂಮಿಯಲ್ಲಿ ಬಿದ್ದಿರುವನು. ಆತನಿಂದ ನೀವು ನನಗೆ ಯಾವ ಸಂದೇಶವನ್ನು ತಂದಿರುವಿರಿ? ಅಂತ್ಯಕಾಲದಲ್ಲಿ ನನ್ನ ಪ್ರಾಣಕಾಂತನು ನನ್ನನ್ನು ಸ್ಮರಿಸಿದನೆ ?......... ನಿಮಗೆ ಬಾಯಿಲ್ಲ. ನೀವು ಮಾತನಾಡಲಾರಿರಿ. ಆದರೂ ಬಾಡಿದ ನಿಮ್ಮ ಆಕೃತಿಯು ನನ್ನ ಕಾಂತನ ಕರುಣಕಥೆಯನ್ನು ಸಹಸ್ರಮುಖದಿಂದ ನನಗೆ ಹೇಳುತ್ತಿವೆ. ನಿಮ್ಮ ಬಣ್ಣವು ಕುರುಕ್ಷೇತ್ರದಲ್ಲಿ ನನ್ನ ಸ್ವಾಮಿಯು ರಕ್ತಘಟಿತವಾದ ಚರಿತ್ರೆಯನ್ನು ಚಿತ್ರಿಸುತ್ತಿದೆ. ಬನ್ನಿರಿ. ನಿಮ್ಮನ್ನು ನನ್ನ ಹೃದಯದಲ್ಲಿಟ್ಟುಕೊಳ್ಳುವೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಭದ್ರೆ : ಮಗಳೇ ಸೈರಿಸು, ಸೈರಿಸು.

ಉತ್ತರೆ : (ಎದ್ದು ನಿಂತು) ಇದೋ ಸ್ವರ್ಗದಲ್ಲಿ ನಿಂತು ನನ್ನ ಸ್ವಾಮಿಯು ನನ್ನನ್ನು ಕರೆಯುತ್ತಿರುವನು. ಬಂದೆ, ಬಂದೆ, ಪ್ರಾಣೇಶ್ವರ. ನಾನೀಗ ವೀರಸತಿ. ಈ ವಸ್ತ್ರಭೂಷಣಗಳು ಈಗ ನನಗೊಪ್ಪುವುದಿಲ್ಲ. ಇವುಗಳನ್ನೀಗಲೇ ತ್ಯಾಗಮಾಡುವೆನು. ನನ್ನ ಧರ್ಮಕ್ಕೆ ಅನುಗುಣವಾದ ವೇಷವನ್ನು ಧರಿಸುವೆನು. ಚಿತಾಗ್ನಿಯಲ್ಲಿ ಈ ದೇಹವನ್ನು ದಹಿಸಿ ನನ್ನ ಸ್ವಾಮಿಯ ಸನ್ನಿಧಿ ಸೇರುವೆನು. (ಉನ್ಮತ್ತಭಾವದಿಂದ ಹೋಗುವಳು)

(ಕೃಷ್ಣನು ಪ್ರವೇಶಿಸುವನು)

ಕೃಷ್ಣ : ತಂಗಿ !

ಸುಭದ್ರೆ : ಅಣ್ಣಾ, ನನ್ನ ಪ್ರಿಯಕುಮಾರನನ್ನು ಎಲ್ಲಿ ಬಿಟ್ಟು ಬಂದೆ? ನನ್ನ ಪ್ರೇಮದ ನಿಧಿಯೆಲ್ಲಿ ? ಧನಂಜಯನ ಪ್ರಾಣಪದಕವೆಲ್ಲಿ ? ನಿನ್ನ ಮುದ್ದಿನ ಅಳಿಯನೆಲ್ಲಿ? ಉತ್ತರೆಯ ಜೀವನಸರ್ವಸ್ವವೇನಾಯಿತು ?

ಕೃಷ್ಣ : ಸುಭದ್ರಾ, ಪ್ರಾಜ್ಞಳಾದ ನೀನೂ ಪಾಮರಸ್ತ್ರೀಯರಂತೆ ಹೀಗೆ ಅಳುವುದೇ ? ನಿನ್ನ ಕುಮಾರನು ರಣರಂಗದಲ್ಲಿ ಕ್ಷತ್ರಿಯ ದರ್ಪದಿಂದ ಹೋರಾಡಿ ವೀರಸ್ವರ್ಗವನ್ನು ಪಡೆದನು.

ಸುಭದ್ರೆ : ಈ ದಿನ ಪ್ರಾತಃಕಾಲ ಕುಮಾರನು ನನ್ನ ಅನುಮತಿಯನ್ನು ಕೇಳಿದಾಗ ಕುರುಕ್ಷೇತ್ರದ ಧರ್ಮಯುದ್ಧದಲ್ಲಿ ನಿನಗೆ ಪರಾಜಯವಿಲ್ಲವೆಂದು ಹರಸಿದೆನು ಅಣ್ಣಾ. ಯಾವ ಪಾಪದಿಂದ ನನ್ನ ಆ ಶುಭಕಾಮನೆಗಳು ವ್ಯರ್ಥವಾದವು ?

ಕೃಷ್ಣ : ಧರ್ಮಯುದ್ಧದಲ್ಲಿ ಅಭಿಮನ್ಯುವಿಗೆ ಎಂದಿಗೂ ಪರಾಜಯವಿಲ್ಲ. ತಂಗಿ ಏನು ಹೇಳಲಿ, ಈ ದಿನ ಅಧರ್ಮಯುದ್ಧದಲ್ಲಿ ಕುಮಾರನು ಹತನಾದನು. ಸೈಂಧವಾದಿ ಸಪ್ತರಥಿಕರು ನಿರಾಯುಧನೂ ನಿಸ್ಸಹಾಯಕನೂ ಆದ ಕುಮಾರನನ್ನು ಸುತ್ತುಗಟ್ಟಿ ಸಂಹರಿಸಿದರು. ಅದಕ್ಕಾಗಿಯೇ ನನಗಿಷ್ಟೊಂದು ಚಿಂತೆ.

ಸುಭದ್ರೆ : ಅಣ್ಣಾ, ನೀನಿದ್ದೂ ಕುರುಕ್ಷೇತ್ರದಲ್ಲಿ ಅಧರ್ಮದ ಕಾಳ ಸರ್ಪವು ತಲೆಯೆತ್ತಿತೇ? ಹಾ ! ಈಶ್ವರ ! ನಿನ್ನ ಚಕ್ರವೂ, ನನ್ನ ಪತಿಯ ಗಾಂಡೀವವೂ ಇಂದು ನಿಷ್ಪ್ರಯೋಜಕವಾದುವೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣ : ಆದರೆ ಸುಭದ್ರಾ, ನೀನು ನೋಡುವೆ, ಅಭಿಮನ್ಯುವನ್ನು ಕೊಂದ ಪಾಪಿಗಳು ಹೊಂದುವ ದುರ್ಮರಣವನ್ನು. ಇದಕ್ಕಾಗಿ ಶ್ರೀಕೃಷ್ಣನು ತನ್ನ ಶಪಥವನ್ನು ಭಂಗಮಾಡಿ ಚಕ್ರವನ್ನು ಪ್ರಯೋಗಿಸುವುದಕ್ಕೂ ಸಿದ್ಧನಿರುವನು.

ಸುಭದ್ರೆ : ನಿನ್ನ ಚಕ್ರವೂ ನನ್ನ ಕಂದನನ್ನು ಪುನಃ ನನಗೆ ತಂದುಕೊಡ ಬಲ್ಲದೆ ಅಣ್ಣ? ಹೀಗಾಗುವುದೆಂದು ಯಾರು ತಿಳಿದಿದ್ದರು ! ಅರ್ಜುನನು ಯಾರ ತಂದೆಯೋ, ವಾಸುದೇವನು ಯಾರ ತಾಯಿಯ ಒಡಹುಟ್ಟಿದ ವನೋ ಅಂತಹ ಅಭಿಮನ್ಯುವಿಗೆ ಈ ದುರ್ಮರಣವೇ ? ಹಾ ಈಶ್ವರಾ !

ಕೃಷ್ಣ : ಅಳಬೇಡ, ಸುಭದ್ರಾ. ಕಣ್ಣೀರನ್ನೊರಸಿಕೊಂಡು ಕ್ಷತ್ರಿಯ ದರ್ಪ ದಿಂದ ತಲೆಯೆತ್ತಿ ನಡೆ. ಇಂದು ನಿನ್ನ ಕುಮಾರನು ಅಮರತ್ವದ ಸನ್ಮಾನದಿಂದ ಸ್ವರ್ಗದಲ್ಲಿ ಬೆಳಗುತ್ತಿರುವನು. ಇಂದು ಮೊದಲು ಭಾರತ ವರ್ಷದ ಪ್ರತಿಯೊಂದು ಮನೆಯಲ್ಲಿಯೂ ವೀರಮಾತೆಯರು, ವೀರಪತ್ನಿ ಯರು, ವೀರ ಭಗಿನಿಯರು, ಸಜಲನಯನರಾಗಿ ಕಂಪಿತಕಂಠದಿಂದ ನಿನ್ನ ಪುತ್ರನ ಗುಣಗಾನ ಮಾಡುವರು. ಧೈರ್ಯ, ಸ್ಥೈರ್ಯ, ಸಾಹಸ, ತ್ಯಾಗ ಮತ್ತು ಅಭಿಮಾನದಲ್ಲಿ ಜಗತ್ತಿನ ತರುಣರಿಗೆ ಅಭಿಮನ್ಯುವು ಆದರ್ಶನಾಗುವನು. ಅವನ ನಾಮಸ್ಮರಣದಿಂದ ಭಾರತ ತರುಣರ ಹೃದಯವು ಉತ್ಫುಲ್ಲವಾಗಿ, ಕಣ್ಣುಗಳಿಂದ ಆನಂದ ಭಾಷ್ಪಗಳು ಸುರಿ ಯುವವು. ತಾವರೆಯ ಪರಿಮಳದಂತೆ, ವಸಂತದ ತಂಗಾಳಿಯಂತೆ, ಕವಿಯ ಮಧುರ ಗಾನದಂತೆ, ಅಭಿಮನ್ಯುವಿನ ರೋಮಾಂಚಕಾರಿ ಯಾದ ಚರಿತ್ರೆಯು ಭಾರತ ಸಂತಾನದಿಂದ ಪಠಿಸಲ್ಪಡುವುದು. ಈ ದುಃಖಮಯವಾದ ಜೀವನ ನಿಶಿಯಲ್ಲಿ ಅವನು ಪೂರ್ಣಿಮೆಯ ಚಂದ್ರ ನಂತೆ ಬೆಳಗುವನು. ಅವನ ಅಚ್ಚಳಿಯದ ಕೀರ್ತಿಜ್ಯೋತ್ಸ್ನೆಯಿಂದ ಭಾರತ ವೀರರ ಸಂತಪ್ತ ಹೃದಯದ ಶೋಕೋದ್ವೇಗವು ಶಾಂತವಾಗು ವುದು. ಅಭಿಮನ್ಯುವೆಂಬ ಹೆಸರು ವೀರರ ಮೃತಸಂಜೀವಿನಿ ! ಶತೃ ಗಳನ್ನು ತಲ್ಲಣಗೊಳಿಸುವ ರಣದುಂದುಭಿ ! ಮರ್ತ್ಯದಲ್ಲಿ ಸ್ವರ್ಗ ಸಾಮ್ರಾಜ್ಯವನ್ನು ಪ್ರತಿಷ್ಠಿಸುವ ಪುಣ್ಯಸ್ಮೃತಿ ! ಇಂತಹ ನಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುತ್ರನಿಗೆ ಮರಣವೆ ? ವೀರಮಾತೆ, ಚಿಂತೆಯನ್ನು ತೊರೆ. ನಿನ್ನ ಕುಮಾರನು ಅಮರತ್ವವನ್ನು ಹೊಂದಿದನು.

(ಅರ್ಜುನನು ಬರುವನು)

ಅರ್ಜುನ : ಏಕೆ ಸುಭದ್ರಾ ! ಅಳುತ್ತಿರುವೆ ? ಅಭಿಮನ್ಯುವಿನ ಸಲುವಾಗಿಯೇ ! ಹೋದನು ! ಹೋದನು ! ನಮ್ಮನ್ನು ತ್ಯಜಿಸಿ ವೀರಸ್ವರ್ಗವನ್ನು ಪಡೆದನು.

ಸುಭದ್ರೆ : ಅಭಿಮನ್ಯು ! ಅಭಿಮನ್ಯು ! ಎಲ್ಲಿರುವೆ ಕುಮಾರ !

ಅರ್ಜುನ : ಬಾ, ಪ್ರಾಣೇಶ್ವರಿ. ನಿನ್ನೊಡನೆ ನಾನೂ ಅಳುವೆನು. ನಮ್ಮ ರೋಧನದ ಹಾಹಾಕಾರದಿಂದ ಈ ಜಗತ್ತಿನ ಸೃಷ್ಟಿಯು ದ್ರವಿಸುವಂತೆ ಮಾಡೋಣ. ನಿನ್ನ ವೀರಪುತ್ರನು, ನನ್ನ ಏಕಮಾತ್ರ ಅಭಿಮನ್ಯುವು ಇಂದಿನ ಯುದ್ಧದಲ್ಲಿ ಹತನಾದನು. ದೌರ್ಭಾಗ್ಯನಾದ ನಾನು ಅವನ ರಕ್ಷಣೆಗಾಗಿ ಕಿರುಬೆರಳೆತ್ತಲೂ ಶಕ್ತನಾಗಲಿಲ್ಲ, ಪರಮೇಶ್ವರ ! ನನ್ನ ಗಾಂಡೀವದ ಕೌಶಲವು ಇಂದೇನಾಯಿತು ? ನನ್ನ ಯಾವ ಪಾಪಕ್ಕಾಗಿ ಸೈಂಧವನಿಗಿಂತಹ ವರವನ್ನು ಕೊಟ್ಟೆ ?

ಕೃಷ್ಣ : ಸ್ಥಿರನಾಗು, ಅರ್ಜುನ. ನೀನು ಆದರ್ಶ ಮಾನವನು. ನಿನಗೀ ದೌರ್ಬಲ್ಯವು ಶೋಭಿಸದು.

ಅರ್ಜುನ : ಮಾನವನು ಇಷ್ಟೊಂದು ದುಃಖವನ್ನು ಸಹಿಸುವುದು ಹೇಗೆ ಸಾಧ್ಯ, ವಾಸುದೇವ ? ಕಣ್ಣುಗಳನ್ನು ಮರುಭೂಮಿಯಂತೆ ನಿರ್ಜಲವಾಗಿ ಮಾಡಿ, ಹೃದಯದಲ್ಲಿ ಹಿಮರಾಶಿಯನ್ನು ತುಂಬಿ, ವಜ್ರಮುಷ್ಟಿಯಿಂದ ದುಃಖವನ್ನಡಗಿಸಿದರೂ ಒಂದೊಂದು ನಿಟ್ಟುಸಿರಿನಲ್ಲಿಯೂ ಅದು ತನ್ನ ಅಸ್ಫುಟ ಆವೇಗವನ್ನು ಪ್ರಕಟಿಸುವುದು. (ಉತ್ತರೆಯು ವಿಧವಾ ವೇಷದಲ್ಲಿ ಪ್ರವೇಶಿಸುವಳು) ನೋಡು, ನೋಡು, ಆ ದುಃಖದೇವತೆಯ ಮೂರ್ತಿಮಂತ ಸ್ವರೂಪವನ್ನು ! ಅನಿಮಿಷ ದೃಷ್ಟಿಯಿಂದ ಆಕಾಶವನ್ನು ನೋಡುತ್ತಾ, ಶಿಬಿರದಲ್ಲಿ ಸ್ಮಶಾನದ ದಗ್ಧ ಛಾಯೆಯನ್ನು ಬೀರುತ್ತಿರುವ ಆ ಕರುಣಾಮಯೀ ಬಾಲಿಕೆಯನ್ನು. ಬಳಿಕ ನನ್ನನ್ನು ಸ್ಥಿರನಾಗುವಂತೆ ಹೇಳು.

ಉತ್ತರೆ : (ಸ್ವ) ಪ್ರಾಣೇಶ್ವರ, ಸ್ವರ್ಗದ ಉಚ್ಚಾಸನದಲ್ಲಿ ಕುಳಿತು ಎವೆಯಿಕ್ಕದ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಣ್ಣುಗಳಿಂದ ನನ್ನನ್ನು ನೋಡುತ್ತಿರುವೆಯಾ ? ನೋಡು, ನೋಡು ಸೂರ್ಯಕಾಂತಿಯ ಹೂವಿನಂತೆ ಉತ್ತರೆಯು ನಿನ್ನಕಡೆಗೇ ಮುಖವನ್ನು ತಿರುಗಿಸಿರುವಳು. ನಾನು ಅಳುತ್ತಿಲ್ಲ, ಪ್ರಭು. ನನ್ನನ್ನು ಕರೆಯುವೆಯಾ, ಪ್ರಿಯತಮ ಇದೋ ಬಂದೆ, ಬಂದೆ !

ಸುಭದ್ರೆ : (ಸುಭದ್ರೆಯು ಸಮಾಧಾನಪಡಿಸುವಳು) ಶಾಂತಳಾಗು, ಪುತ್ರಿ. ಛೀ! ವಿಧಾತ! ಈ ಕುಸುಮರಾಶಿಯಲ್ಲಿ ಇಂತಹ ಘೋರವಾದ ಸಿಡಿಲನ್ನು ತಂದಿಟ್ಟೆಯೇಕೆ ? ನಿನ್ನ ಸೃಷ್ಟಿಯು ಎಷ್ಟೊಂದು ಹೃದಯ ಹೀನ !

ಅರ್ಜುನ : ಇದನ್ನು ನೋಡುವ ನನ್ನ ಕಣ್ಣುಗಳು ಇಂಗಿಹೋಗವೇಕೆ ?

ಕೃಷ್ಣ : ಸಮಾಧಾನ ಹೊಂದು ಅರ್ಜುನ.

ಅರ್ಜುನ : ಸಹಿಸಲಾರೆನು ! ಸಹಿಸಲಾರೆನು ಈ ಬೇಗೆಯನ್ನು. ಈ ಸಂಕಟದಿಂದ ಉದ್ಧಾರವಾಗುವ ಉಪಾಯವೇನೂ ಇಲ್ಲವೆ ?

ಉತ್ತರೆ : (ಚಮುಕಿತಳಾಗಿ) ಇರುವುದು, ಗುರುದೇವ. ಆರ್ಯಧರ್ಮ ವಿಂದು ನಷ್ಟವಾಯಿತೆಂದು ಭಾರತವರ್ಷದಲ್ಲಿ ಒಂದು ವಿಕಟ ಹಾಹಾ ಕಾರವೆದ್ದಿರುವುದು. ನೀನದನ್ನು ಸುಳ್ಳಾಗಿ ಮಾಡು. ಮಗನಿಗಾಗಿ ಅಳುವುದು ತಂದೆಗೆ ಸಹಜ. ನೀನೂ ಅದರಂತೆ ಅಳುವೆ, ಅಳು. ಆದರೀ ರೋಧನದಿಂದ ಆ ವೀರಮೂರ್ತಿಯನ್ನು ಹಿಂದಿರುಗಿಸುವುದು ಯಾರಿಗೆ ಸಾಧ್ಯ ? ಏಳು, ತಂದೆಯೆ. ಕ್ಷತ್ರಿಯ ವೀರನು ನೀನು. ಕಣ್ಣುಗಳನ್ನು ಕವಿದಿರುವ ದುಃಖದ ಜವನಿಕೆಯನ್ನು ಕಿತ್ತೊಗೆದು ಕ್ಷತ್ರಿಯೋಚಿತವಾದ ಕರ್ಮದಲ್ಲಿ ಪಾದಾರ್ಪಣ ಮಾಡು. ಕುರುಕ್ಷೇತ್ರದ ಧರ್ಮಯುದ್ಧದಲ್ಲಿ ಕ್ಷತ್ರಿಯ ವೀರನೊಬ್ಬನು ಅಧರ್ಮದ ಅತ್ಯಾಚಾರಕ್ಕೆ ಸಿಕ್ಕು ಹತನಾಗಿರುವನು, ಅಸ್ತ್ರಗಳ ಆಘಾತದಿಂದ ಅವರನ್ನು ಕೇಳು–ಏಳು ಜನ ಮಹಾರಥಿಕರು ಒಟ್ಟುಗೂಡಿ ನಿರಸ್ತ್ರನಾದ ಒಬ್ಬ ತರುಣ ವೀರನನ್ನು ಹೇಗೆ ಸಂಹರಿಸಿದರೆಂಬುದನ್ನು. ನಿನ್ನ ಗಾಂಡೀವದ ಠೇಂಕಾರದಿಂದ ಆ ಪಾಷಂಡರ ಹೃದಯವು ಕಂಪಿಸಲಿ. ಜನಾರ್ಧನ, ನಿನ್ನ ಪಾಂಚಜನ್ಯವು ಸುಮ್ಮನಿರುವುದೇಕೆ ? ಆರ್ಯಾವರ್ತದಲ್ಲಿ ಅಧರ್ಮದ ಕಾಳಸರ್ಪವು ತಲೆಯೆತ್ತಿರುವುದು, ಅದನ್ನು ನಾಶಮಾಡಿದ ಹೊರತು ಧರ್ಮ ಸಂಸ್ಥಾಪಕನಾದ ನಿನಗೆ ಶಾಂತಿಯೆಲ್ಲಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜುನ : ಸರಿಯಾಗಿ ಹೇಳಿದೆ, ಕ್ಷತ್ರಿಯ ನಂದಿನಿ. ಕೇಳಿರಿ, ಭಾರತ ವೀರರೆಲ್ಲರೂ, ಅರ್ಜುನನ ಭೀಷಣ ಶಪಥವನ್ನು. ಅಭಿಮನ್ಯುವಿನ ಮರಣಕ್ಕೆ ಕಾರಣನಾದ ಸೈಂಧವನನ್ನು ನಾಳೆ ಸೂರ್ಯನು ಮುಳುಗುವುದರೊಳಗಾಗಿ ಸಂಹರಿಸುವೆನು. ಯಕ್ಷ ರಾಕ್ಷಸರಾದಿಯಾಗಿ ಯಾರೂ ಅವನನ್ನು ಉಳಿಸಲಾರರು. ಇಂದ್ರನು ವಜ್ರಾಯುಧವನ್ನು ಅಡ್ಡವಿಟ್ಟರೂ, ಸ್ವಯಂ ಪಾರ್ವತೀಪತಿಯು ಶೂಲಪಾಣಿಯಾಗಿ ಎದುರಿಗೆ ನಿಂತರೂ, ಅರ್ಜುನನು ತನ್ನ ಶಪಥದಿಂದ ವಿಚಲಿತನಾಗುವುದಿಲ್ಲ. ಚತುರ್ದಶ ಭುವನಗಳಲ್ಲಿ ಸಪ್ತ ಸಾಗರಗಳಲ್ಲಿ, ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಎಲ್ಲಿ ಅಡಗಿಕೊಂಡಿದ್ದರೂ ಆ ಸೈಂಧವನನ್ನು ಹಿಡಿದುತಂದು ಅವನ ಹೃದಯದ ಬಿಸಿರಕ್ತದಿಂದ ನನ್ನ ರಣದಾಹವನ್ನು ಶಾಂತಮಾಡುವೆನು. ಒಂದು ವೇಳೆ ನಾನೀ ಪ್ರತಿಜ್ಞೆಯನ್ನು ನಿರ್ವಹಿಸಲು ಅಶಕ್ತನಾದರೆ, ಸೈಂಧವನು ಜೀವಿಸಿದ್ದು ಸೂರ್ಯನು ಅಸ್ತಂಗತನಾದರೆ, ಆಗ ಪ್ರಜ್ವಲಿತ ಚಿತೆಯಲ್ಲಿ ನಾನು ದೇಹತ್ಯಾಗ ಮಾಡುವೆನು.

ಕೃಷ್ಣ : ಇದೆಂತಹ ಕಠಿಣ ಪ್ರತಿಜ್ಞೆ, ಪಾರ್ಥ ! ಆದರೇನು ಮಾಡುವುದು ? ಪಾಪಿಗಳ ದಂಡವಿಧಾನವಾಗಲೇ ಬೇಕು.

ಉತ್ತರೆ : ಪೂಜ್ಯ ಪಿತ, ವಾಸುದೇವ, ತಾಯಿ, ಇನ್ನು ನನಗನುಜ್ಞೆಯನ್ನು ಕೊಡಿರಿ. ಉತ್ತರೆಯು ವೀರ ಸತಿಯಂತೆ; ತನ್ನ ಕಾಂತನ ದೇಹವನ್ನು ತೊಡೆಯ ಮೇಲಿಟ್ಟುಕೊಂಡು ಚಿತಾಗ್ನಿಯಲ್ಲಿ ದೇಹತ್ಯಾಗ ಮಾಡುವಳು.

ಕೃಷ್ಣ : ಪುತ್ರಿ, ಶಾಂತಳಾಗು, ಶಾಂತಳಾಗು. ಭರತವಂಶದ ಭವಿಷ್ಯ ಸಂತಾನವನ್ನು ನೀನು ಗರ್ಭದಲ್ಲಿ ಧರಿಸಿರುವೆ. ಗರ್ಭವತಿಯರು ಚಿತೆಯನ್ನೇರುವುದು ಧರ್ಮನಿಷಿದ್ಧ.

ಉತ್ತರೆ : ಹಾಗಾದರೆ ನನ್ನ ಗತಿಯೇನು, ವಾಸುದೇವ. ಸ್ವಾಮಿಯನ್ನುಳಿದು ನಾನು ಜೀವಿಸಲಾರೆ.

ಕೃಷ್ಣ : ಪುತ್ರಿ, ನೀನು ಇಹಲೋಕದಲ್ಲಿ ನಿನ್ನ ಕರ್ತವ್ಯವನ್ನು ಮುಗಿಸಿ ಪುನಃ ಪತಿಯ ಸಾಯುಜ್ಯವನ್ನು ಪಡೆಯುವೆ. ಅಲ್ಲಿಯವರೆಗೂ ನಿನ್ನ ಪತಿಯು ಚಂದ್ರಲೋಕದಲ್ಲಿ ನಿನ್ನ ಆಗಮನವನ್ನು ನಿರೀಕ್ಷಿಸುವನು.

ಉತ್ತರೆ : ಎಲ್ಲಿ ? ಎಲ್ಲಿ, ನನ್ನ ಪತಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣ : ಅದೋ ನೋಡು.

(ಚಂದ್ರಲೋಕದಲ್ಲಿ ಅಭಿಮನ್ಯುವಿನ ದರ್ಶನ)

ಅಭಿಮನ್ಯು : ಉತ್ತರೆ, ನಿನ್ನ ಸಂತಾನದಿಂದ ಭರತವಂಶದ ಭವಿಷ್ಯ ಕೀರ್ತಿಯು ಪ್ರತಿಷ್ಠಿತವಾಗಲಿ. ಆಮೇಲೆ ನೀನು ನನ್ನ ಸಾಯುಜ್ಯವನ್ನು ಪಡೆಯುವೆ. ಅಲ್ಲಿಯವರೆಗೆ ನನ್ನ ತಂದೆಯಾದ ಚಂದ್ರನ ಶೀತಲ ಕಿರಣಗಳು ನಿನ್ನ ದುಃಖಾಗ್ನಿಯನ್ನು ಶಾಂತಮಾಡುವುವು.

(ಜವನಿಕೆ)

ದೃಶ್ಯ ೮ — ಯುದ್ಧರಂಗ

(ದುರ್ಯೋಧನ, ಶಕುನಿ, ಸೈಂಧವ ಮುಂತಾದವರು ಪ್ರವೇಶಿಸುವರು)

ದುರ್ಯೋಧನ : ಪ್ರಾಣಭಯವಿಲ್ಲ. ಸಿಂಧುರಾಜ. ಆಚಾರ್ಯನಿಂದ ನಿರ್ಮಿತವಾದ ಚಕ್ರವ್ಯೂಹದ ಮಧ್ಯದಲ್ಲಿ ನೀನು ಸುರಕ್ಷಿತನಾಗಿರುವೆ.

ಶಕುನಿ : ಎಂತಹ ವ್ಯೂಹವದು ! ಹತ್ತು ಹರದಾರಿಯ ಸುತ್ತ ಸೈನ್ಯವು ಒಂದೇ ಸಮನಾಗಿ ನಿಂತಿದೆ. ಅರ್ಜುನನಿಗೆ ಮಾತ್ರವಲ್ಲ, ಸ್ವಯಂ ಮೃತ್ಯುವಿಗೂ ಅದು ದುರ್ಭೇದ್ಯ.

ಸೈಂಧವ : ಆದರೆ ಸೂರ್ಯಾಸ್ತದೊಳಗಾಗಿ ನನ್ನನ್ನು ವಧಿಸುವುದಾಗಿ ಅರ್ಜುನನ ಪ್ರತಿಜ್ಞೆ. ಅವನ ಪ್ರತಿಜ್ಞೆ ಇದುವರೆಗೆ ಭಂಗವಾಗಿಲ್ಲ.

ದುರ್ಯೋಧನ : ತನ್ನ ಪ್ರಾಣಗಳನ್ನಾದರೂ ಕೊಟ್ಟು ನಿನ್ನನ್ನು ರಕ್ಷಿಸುವುದಾಗಿ ಆಚಾರ್ಯರು ಅಭಯ ಕೊಟ್ಟಿರುವರು. ಈ ದುರ್ಭೇದ್ಯವಾದ ರಕ್ಷಾಕವಚವನ್ನು ತೊಟ್ಟು ನಾನು ನಿನ್ನ ಬೆಂಗಾವಲಾಗಿರುವೆನು. ಸ್ವಲ್ಪವೂ ಭಯವಿಲ್ಲ, ಸೈಂಧವ.

ಶಕುನಿ : ಭಯಕ್ಕೆ ಕಾರಣವಾದರೂ ಎಲ್ಲಿ? ನಾವೆಲ್ಲರೂ ಬದುಕಿದ್ದು ನೀನು ಸಾಯುವುದೆಂದರೆ....(ಸೈಂಧವನು ಕಂಪಿಸುವನು) ನಡುಗುವೆಯೇಕೆ ಸಿಂಧುರಾಜ ? ಮೃತ್ಯುವಿನ ನಿರೀಕ್ಷೆಯಿಂದ ಮೈಯಲ್ಲಿ ನಡುಕ ಹುಟ್ಟಿತಲ್ಲವೇ ? ಹುಟ್ಟಲಿ. ಆದ ಮಾತ್ರಕ್ಕೇನು ? ಹುಟ್ಟಿದಾಗಲೇ ಸಾವು ಸಿದ್ಧ. ಅದಕ್ಕಾಗಿ ನೀನು ಚಿಂತಿಸಬೇಡ.

ಸೈಂಧವ : ಅರ್ಜುನನು ನನ್ನನ್ನು ಕೊಲ್ಲುವುದು ಖಂಡಿತ. ನೀವಿಷ್ಟು ಜನರಿರುವಿರಿ. ಯಾರೂ ನನ್ನನ್ನುಳಿಸಲಾರಿರಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ : ಉಳಿಸುವ ಆಗತ್ಯವೂ ಇಲ್ಲ. ನೋಡು ಆಗಲೇ ಸೂರ್ಯನು ಪಶ್ಚಿಮಾದ್ರಿ ಶಿಖರವನ್ನು ಸೇರಿರುವನು. ಅಸ್ತಕನಾಗಲು ಅರ್ಧ ಗಳಿಗೆ ಮಾತ್ರ ಉಳಿದಿರುವುದು. ಅರ್ಜುನನು ವ್ಯೂಹದ ಅಂಚನ್ನೂ ಮುಟ್ಟಿಲ್ಲ. ನಿಶ್ಚಿಂತನಾಗು, ಮಿತ್ರ.

ಸೈಂಧವ : ನಿಮ್ಮ ಮಾತುಗಳು ವ್ಯರ್ಥ ! ಮೃತ್ಯುವು ಸಮೀಪಿಸಿರುವನು. ಅವನ ಶೀತಲ ನಿಶ್ವಾಸದಿಂದ ನನ್ನ ದೇಹ ಕಂಪಿಸುತ್ತಿರುವುದು ಇಂದ್ರಿಯಗಳು ಸ್ತಂಭಿತವಾಗಿರುವುವು. ಇನ್ನು ಸಮಯವಿಲ್ಲ. ರಕ್ಷಿಸು, ಕುರುರಾಜ.

ಶಕುನಿ : ನಾವು ಸಮೀಪದಲ್ಲಿರುವಾಗ ಮೃತ್ಯುವೂ ನಿನ್ನನ್ನು ಮುಟ್ಟಲಾರನು. ಇನ್ನು ಅರ್ಜುನನ ಬಾಣ ! ಅದರಿಂದಾಗುವುದೇನು, ಸಿಂಧುರಾಜ ?

ಸೈಂಧವ : ನನ್ನ ಶಿರಚ್ಛೇದನ ! ಹಾ ! ಹಾ ! ಒಮ್ಮಿಂದೊಮ್ಮೆಲೆ ತಲೆಯು ಹೀಗೇಕೆ ಚಲಿಸುತ್ತಿರುವುದು ! ಹಿಡಿಯಿರಿ, ಹಿಡಿಯಿರಿ.

(ತನ್ನ ತಲೆಯನ್ನು ಎರಡು ಕೈಗಳಿಂದಲೂ ಹಿಡಿಯುವನು)

ಶಕುನಿ : ಇಷ್ಟೊಂದು ಚೆನ್ನಾಗಿ ಬೆಳೆದ ದೇಹವಿರುವಾಗ ಒಂದು ತಲೆಗಾಗಿ ಚಿಂತಿಸುವುದೇ, ಹುಚ್ಚು ಸೈಂಧವ ! ತಲೆ ಹೋದರೂ ದೇಹವನ್ನು ಮಾತ್ರ ನಾವು ಸುರಕ್ಷಿತವಾಗಿ ನೋಡಿಕೊಳ್ಳುವೆವು. ಅಹ್ಹಹ್ಹಾ !

ದುರ್ಯೋಧನ : ಮಾವ, ಈ ಸಂಕಟದಲ್ಲಿಯೂ ಉಪಹಾಸವೇ ?

ಶಕುನಿ : ಏನೇ ಮಾಡಲಿ, ದುರ್ಯೋಧನ, ನಗುತ್ತಾ ಹುಟ್ಟಿದೆನು. ನಗುತ್ತಲೆ ಬದುಕಿದೆನು. ಕೊನೆಗೊಂದು ದಿನ ನಗುತ್ತಲೇ ಸಾಯುವೆನೆಂದು ತೋರುವುದು. (ಹೋಗುವರು)

ಕೃಷ್ಣ : (ಪ್ರವೇಶಿಸಿ) ಸೂರ್ಯಾಸ್ತಕ್ಕೆ ಅರ್ಧಗಳಿಗೆ ಮಾತ್ರ ಉಳಿದಿರುವುದು. ಈ ಅಲ್ಪಾವಸರದಲ್ಲಿ ದ್ರೋಣಾಚಾರ್ಯರಿಂದ ರಕ್ಷಿತನಾದ ಸೈಂಧವನ ಮಸ್ತಕವು ಭೂಮಿಗುರುಳಬೇಕು. ಇಲ್ಲವೇ ಅರ್ಜುನನು ಪ್ರತಿಜ್ಞಾಭಂಗದಿಂದ ಪ್ರಾಣತ್ಯಾಗ ಮಾಡುವನು. ಈ ಸಂಕಟದಿಂದ ಅವನನ್ನು ಉದ್ಧರಿಸಲು ನಾನೊಂದು ಉಪಾಯ ಹೂಡುವೆನು. ಜಾಗೃತಳಾಗು, ನನ್ನ ಯೋಗಮಾಯೆ ! ರಾಶಿರಾಶಿ ಅಂಧಕಾರವನ್ನು ಪ್ರಸವಿಸು. ಕ್ಷಣಕಾಲ ಜಗತ್ತು ಕತ್ತಲೆಯಿಂದ ತುಂಬಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

[ಕೃಷ್ಣನು ಧ್ಯಾನಮಗ್ನನಾಗುವನು. ಅಂಧಃಕಾರವು ಕವಿಯುವುದು. ಅರ್ಜುನನು ಪ್ರವೇಶಿಸುವನು.]

ಅರ್ಜುನ : ಸೂರ್ಯನ ಅಸ್ತವಾಯಿತು. ಅಂಧಕಾರವು ಎಲ್ಲೆಲ್ಲಿಯೂ ಕವಿಯುತ್ತಿರುವುದು.....ಕೇವಲ ಜಗತ್ತಿನ ಅಂಧಃಕಾರವಲ್ಲ, ಅರ್ಜುನನ ಜೀವನದ ಅಂಧಕಾರ. ಪ್ರತಿನಿತ್ಯದ ಸೂರ್ಯಾಸ್ತವಲ್ಲ, ಧನಂಜಯನ ಯಶಃಸೂರ್ಯನ ಅಸ್ತಮಾನ. ಈ ದಿನ ನನ್ನ ಪ್ರತಿಜ್ಞಾಭಂಗವಾಯಿತು. ನನ್ನ ಪುತ್ರನ ಮರಣಕ್ಕೆ ಕಾರಣನಾದ ಸೈಂಧವ ಇನ್ನೂ ಜೀವಿಸಿರುವನು! ಸ್ವಯಂ ಮಹಾದೇವನೊಡನೆ ಸೆಣಸಿ ಪಾಶುಪತಾಸ್ತ್ರವನ್ನು ಪಡೆದ ನನಗೆ ಇಂತಹ ಅಪಮಾನವೇ! ಇನ್ನು ನನ್ನ ಪ್ರತಿಜ್ಞೆಯಂತೆ ಅಗ್ನಿಯಲ್ಲಿ ಪ್ರಾಣತ್ಯಾಗ ಮಾಡುವೆನು. ನನ್ನ ಪ್ರಿಯ ಸಹೋದರರ ಮ್ಲಾನಮುಖಗಳನ್ನು ನೋಡುವ ಮೊದಲೇ ಈ ತುಚ್ಛ ಜೀವನವನ್ನು ಕೊನೆಗಾಣಿಸುವೆನು....ಆದರೆ ಶ್ರೀಕೃಷ್ಣನೆಲ್ಲಿ? ವಾಸುದೇವ ಅಂತ್ಯಕಾಲದಲ್ಲೊಂದು ಸಾರಿ ನಿನ್ನನ್ನು ನೋಡುವ ಆಸೆ. ಜನಾರ್ಧನ! ಚಕ್ರಪಾಣಿ! ಎಲ್ಲಿರುವೆ? ಎಲ್ಲಿರುವೆ? (ಕೃಷ್ಣನನ್ನು ನೋಡಿ) ಸ್ತಬ್ಧನಂತೆ ಇಲ್ಲೇಕೆ ನಿಂತಿರುವೆ, ಪ್ರಾಣಸಖ? ನನ್ನ ಶಪಥವು ಭಂಗವಾಯಿತೆಂದು ಚಿಂತೆಯೇ? ಜಯಾಪಜಯಗಳು ಯಾರ ಅಧೀನ? ಮಾನವನ ಘಟನಾಶಕ್ತಿಗೆ ಅತೀತವಾದುದನ್ನು ಚಿಂತಿಸಿ ಫಲವೇನು? ಬಾ, ಮಿತ್ರ. ಕುರುಕ್ಷೇತ್ರದ ಅಂತರ್ಹಿತ ರಣದಾಹವು ಅಗ್ನಿರೂಪದಿಂದ ಪುನಃ ಪ್ರಜ್ವಲಿತವಾಗಲಿ ಅರ್ಜುನನು ನಿನ್ನ ನಾಮಗಳನ್ನು ಸ್ಮರಿಸುತ್ತಾ ಜ್ವಲಂತ ಚಿತಾಗ್ನಿಯಲ್ಲಿ.....

ಕೃಷ್ಣ : ಏನು ನಿನ್ನ ಚಿತೆಯನ್ನು ನಾನು ಹೊತ್ತಿಸುವುದೆ!

ಅರ್ಜುನ : ಅರ್ಜುನನ ಲಲಾಟದಲ್ಲಿ ಅಂತಹ ಮಹಾಪುಣ್ಯ ಬರೆದಿದ್ದರೆ ಆಗಕೂಡದೇಕೆ, ಪ್ರಭು? (ಸೈಂಧವ, ಶಕುನಿ, ದುರ್ಯೋಧನ, ಕರ್ಣ ಮುಂತಾದವರು ಪಂಜುಗಳನ್ನು ಹಿಡಿದು ದೂತರೊಡನೆ ಬರುವರು)

ಶಕುನಿ : ಇದೋ ಅರ್ಜುನನಿಲ್ಲಿಯೇ ಇರುವನು. ಭಯವಿಲ್ಲ, ಸಿಂಧುರಾಜ. ದುರ್ಯೋಧನನ ಪಾರ್ಶ್ವವನ್ನು ಬಿಟ್ಟು ಮುಂದೆ ಬಾ. ನಿನ್ನ ಶಪಥವೇನಾಯಿತೆಂದು ಅರ್ಜುನನನ್ನು ಕೇಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ದುರ್ಯೋಧನ : ಅರ್ಜುನ, ನೀನು ವೀರನು. ಪ್ರತಿಜ್ಞೆಯಂತೆ ಅಗ್ನಿಯಲ್ಲಿ ಪ್ರಾಣತ್ಯಾಗ ಮಾಡು. ಮೂರು ಲೋಕದ ಹೊಗಳಿಕೆಗೆ ಪಾತ್ರನಾಗುವೆ.

ಸೈಂಧವ : ಮರಣಕ್ಕೆ ಸಿದ್ಧನಾಗು, ಧನಂಜಯ. ನಾನು ನಿನ್ನ ಚಿತೆಯನ್ನುರಿಸುವೆನು.

ಕೃಷ್ಣ : ಅದಕ್ಕಿಷ್ಟೊಂದು ಅವಸರವೇಕೆ? ಅರ್ಜುನನು ವೀರಶಿಖಾಮಣಿ, ಅವಶ್ಯವಾಗಿ ಪ್ರತಿಜ್ಞೆಯಂತೆ ನಡೆಯುವನು. ನಾನು ಸ್ವಹಸ್ತದಿಂದ ಚಿತೆಯನ್ನುರಿಸುವೆನು. ಪಾರ್ಥ, ಪ್ರಾಣಸಖ, ಮೃತ್ಯುವಿನ ಸಮ್ಮುಖದಲ್ಲಿ ದ್ವೇಷದ್ವಂದ್ವಗಳನ್ನು ತ್ಯಜಿಸಿ ಕೌರವ ವೀರರನ್ನು ಅಭಿನಂದಿಸು. ಈ ಚಿರ ನೂತನವಾದ ಸುಂದರ ಜಗತ್ತನ್ನು ಒಂದು ಸಾರಿ, ಕಡೆಯ ಸಾರಿ ದೃಷ್ಟಿಸಿ ನೋಡು. ನನ್ನೀ ಪ್ರಸಾರಿತ ಹಸ್ತವು ದೀಪ್ತಿಮಯವಾದ ದೂರದ ದೀಪದಂತೆ ನಿನ್ನ ಭವಿಷ್ಯದ ಹಾದಿಯನ್ನು ಬೆಳಗಲಿ.

(ಆಕಸ್ಮಿಕವಾಗಿ ಕತ್ತಲೆ ಹರಿದು, ಸೂರ್ಯನು ಗೋಚರವಾಗುವನು)

ಸೈಂಧವ : ಹಾ! ಇದೇನು! ಇದೇನು!

ಶಕುನಿ : ಸರ್ವನಾಶ! ಓಡು ಸಿಂಧುರಾಜ. (ಸೈಂಧವನು ಓಡುವನು)

ಕೃಷ್ಣ : ಸುಮ್ಮನೆ ನೋಡುವಿಯೇಕೆ? ಬಾಣವನ್ನು ಹೂಡು ಅರ್ಜುನ, ಸೈಂಧವನ ವಧೆಯ ಹೊರತು ಸೂರ್ಯನು ಅಸ್ತಂಗತನಾಗುವುದಿಲ್ಲ. (ಅರ್ಜುನನು ಸೈಂಧವನ ಹಿಂದೆ ಓಡುವನು) ಆದರೆ ಎಚ್ಚರವಿರಲಿ. ಪಾರ್ಥ, ಸೈಂಧವನ ಛಿನ್ನಮಸ್ತಕವು ಭೂಮಿಗುರುಳಲಾಗದು. ಸಮ್ಯಂತಪಂಚಕ ತೀರ್ಥದಲ್ಲಿ ಅವನ ತಂದೆಯಾದ ವೃದ್ಧ ಕ್ಷತ್ರನು ಸಂಧ್ಯೋಪಾಸನೆಯಲ್ಲಿ ಕುಳಿತಿರುವನು. ಸೈಂಧವನ ಮಸ್ತಕವು ಅವನ ಉಡಿಯಲ್ಲಿ ಬೀಳುವಂತೆ ಹೊಡೆ, ಇಲ್ಲವೇ ನೀನು ಹತನಾಗುವೆ.

(ನೇಪಥ್ಯದಲ್ಲಿ ದೊಡ್ಡ ಧ್ವನಿ. ಬಾಣವಿದ್ಧವಾದ ಸೈಂಧವನ ತಲೆಯು ಮೇಲೆ ಹೋಗುವುದು. ದುರ್ಯೋಧನಾದಿಗಳು ಸ್ತಂಭಿತರಾಗಿ ನಿಲ್ಲುವರು)

ತೃತೀಯಾಂಕ

ದೃಶ್ಯ ೧—ಯುದ್ಧರಂಗ

(ರಥಾರೂಢರಾದ ಕೃಷ್ಣಾರ್ಜುನರೂ, ಕರ್ಣನೂ ಗೋಚರವಾಗುವರು)

Sri Vidyabharathi Book Centre, Sringeri

ಕೃಷ್ಣ : ಸರ್ವನಾಶ! ಸರ್ವನಾಶ! ಕರ್ಣನು ಬಿಟ್ಟ ನಾಗಾಸ್ತ್ರವು ಭೀಷಣ

CC-O. In Public Domain. Digitized by eGangotri

ಧೂಮಕೇತುವಿನಂತೆ ಅಂತರಿಕ್ಷವನ್ನು ಬೇಧಿಸಿಕೊಂಡು ತೀವ್ರ ವೇಗದಿಂದ ನಿನ್ನ ಮಸ್ತಕದ ಗುರಿ ಹಿಡಿದು ಬರುತ್ತಿರುವುದು. ಅರ್ಜುನ, ಪ್ರಾಣ ಸಖ, ಬಂಧು ! ಯಾವ ಉಪಾಯದಿಂದ ನಿನ್ನನ್ನೀಗ ರಕ್ಷಿಸಲಿ ? ಉಪಾಯ ! ಉಪಾಯ ! ನಾನಿಂದು ನಿರುಪಾಯನು ! ಪೃಥ್ವಿಯ ವಕ್ಷವನ್ನು ಭೇದಿಸಿ ಭೂಗರ್ಭದಲ್ಲಿ ನಿನ್ನ ರಥವನ್ನು ಬಚ್ಚಿಡುವೆನು.... ಬಂದಿತು, ಬಂದಿತು. ತಲೆಯನ್ನು ತಗ್ಗಿಸು ಪಾರ್ಥ ! ತಗ್ಗಿಸು, ತಗ್ಗಿಸು, ತ....ಗ್ಗಿ.....ಸು.....

(ಕೃಷ್ಣನ ಕಾಲ್ತುಳಿತದಿಂದ ರಥವು ಭೂಮಿಗಿಳಿಯುವುದು, ಮಹಾಶಬ್ದವಾಗಿ ನಾಗಾಸ್ತ್ರದಿಂದ ಹೊಡೆಯಲ್ಪಟ್ಟ ಅರ್ಜುನನ ಕಿರೀಟ ಭೂಮಿಗೆ ಬೀಳುವುದು)

ಅರ್ಜುನ : (ಕಂಪಿಸುತ್ತಾ) ಜ....ನಾ.....ರ್ಧ.....ನ !

ಕೃಷ್ಣ : ಧೈರ್ಯವನ್ನು ತಾಳು, ಅರ್ಜುನ. ಭಯಗ್ರಸ್ತನಾಗಬೇಡ.

ಅರ್ಜುನ : ಭಯವಿಲ್ಲ, ವಾಸುದೇವ. ಇಂದ್ರನ ವಜ್ರವು, ವರುಣನ ಪಾಶವು, ಕುಬೇರನ ಕುಲಿಶವು ಯಾರ ಕೀರಿಟವನ್ನು ಸ್ಪರ್ಶಿಸುವುದೂ ಕೂಡ ಸಾಧ್ಯವಿಲ್ಲವೋ. ಆ ನನ್ನ ಕೀರಿಟ ಈ ದಿನ ಕರ್ಣನ ಒಂದಲ್ಪ ಬಾಣದಿಂದ ಭೂಮಿಗುರುಳಿರುವುದು ! ಆ ಕರ್ಣನಾರು ಜನಾರ್ಧನ ?

ಕೃಷ್ಣ : ಸ್ಥಿರನಾಗು ಅರ್ಜುನ. (ಕರ್ಣನು ರಥದಿಂದಿಳಿಯುವನು)

ಕರ್ಣ : ವ್ಯರ್ಥವಾಯಿತು, ವ್ಯರ್ಥವಾಯಿತು. (ನೇಪಥ್ಯದಲ್ಲಿ ಅಶರೀರವಾಣಿ) "ಮರಣಕ್ಕೆ ಸಿದ್ಧನಾಗು ಕರ್ಣ. ನಿನ್ನ ಸಮಯವು ಒದಗಿರುವುದು. ಕ್ಷತ್ರಿಯನು ನೀನು. ಆದರೆ ಸಾಮಾನ್ಯ ಮನುಷ್ಯನಂತೆ ನಿರಸ್ತ್ರನಾಗಿ ನಿಶ್ಚೇಷ್ಟನಾಗಿ ರಣಭೂಮಿಯಲ್ಲಿ ಮಡಿಯುವೆ ! ಇದು ಬ್ರಾಹ್ಮಣನ ಅಭಿಶಾಪ".

ಕರ್ಣ : ಬ್ರಾಹ್ಮಣನ ಶಾಪದಿಂದ ಕ್ಷತ್ರಿಯನ ತೇಜಸ್ಸು ನಷ್ಟವಾಗುವುದಿಲ್ಲ. (ಕರ್ಣನ ರಥದ ಗಾಲಿಯು ಮುರಿಯುವುದು) ಇದೇನು ಒಮ್ಮಿಂದೊಮ್ಮೆ ರಥಚಕ್ರವೇಕೆ ಭಂಗವಾಯಿತು ! ರಥವು ಭೂಮಿಗಿಳಿಯುತ್ತಿರುವುದು. (ಅಸ್ತ್ರಗಳನ್ನು ತ್ಯಾಗಮಾಡಿ ರಥವನ್ನು ಮೇಲೆತ್ತಲು ಪ್ರಯತ್ನಿಸಿ ವಿಫಲನಾಗಿ) ಆಶ್ಚರ್ಯ ! ಒಂದಲ್ಪ ರಥದ ಗಾಲಿಯನ್ನು ಎತ್ತಿಹಿಡಿಯುವ ಶಕ್ತಿಯೂ ನನಗಿಲ್ಲವೆ ? (ಪುನಃ ಪ್ರಯತ್ನಿಸಿ ವಿಫಲನಾಗಿ) ಇದು ನಿಜವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣನ ಶಾಪ ! ಮೃತ್ಯುವಿನಂತೆ ನನ್ನ ಬೆನ್ನುಬಿದ್ದು ಸಮಯವನ್ನು ಕಾದುಕೊಂಡಿದ್ದಿತೆಂದು ತೋರುವುದು. ಮಾತೆ, ವಸುಂದರೆ, ಕರ್ಣನು ಬಾಹುಗಳ ಸಹಾಯದಿಂದ ಉದ್ಧಾರವಾಗುವನೆಂದು ನನ್ನ ರಥದ ಚಕ್ರಗಳನ್ನು ಗರ್ಭದಲ್ಲಿ ಧರಿಸಿಕೊಂಡೆಯ ? ಇಂದು ನಿನ್ನಲ್ಲೂ ಇಷ್ಟೊಂದು ಸ್ವಾರ್ಥ ! ಇಷ್ಟೊಂದು ಹಿಂಸೆ! ಬಿಡು, ತಾಯಿ, ನನ್ನ ರಥವನ್ನು ಬಿಡು. ಕಾಣುವುದಿಲ್ಲವೇ ? ಕರ್ಣನ ಕಣ್ಣುಗಳಲ್ಲಿಂದು ಅಶ್ರುಜಲವು ಸುರಿಯುತ್ತಿರುವುದು. ಬಿಡು, ತಾಯಿ. ಈ ಸಾರಿ ಬಿಡು, ಆಜೀವವೂ ಕ್ರೀತದಾಸನಂತೆ ನಿನ್ನ ಸೇವೆ ಮಾಡುವೆನು. (ಪುನಃ ಪ್ರಯತ್ನ, ಪುನಃ ನಿರಾಶೆ)

ಕೃಷ್ಣ : ನೋಡುವೆಯೇಕೆ, ಅರ್ಜುನ ? ಬಾಣವನ್ನು ತೊಡು, ಕರ್ಣನನ್ನು ವಧೆಮಾಡು. ನಿನ್ನ ರಥವನ್ನು ನಾನು ಉದ್ಧರಿಸುವೆನು.

ಕರ್ಣ : ಇದೆಂತಹ ಭೀಷಣ ದೃಶ್ಯ ! ಜೀವನ ಮರಣಗಳ ಅಪೂರ್ವ ಸಂಧ್ಯೆಯಿದು. ಉದಯೋನ್ಮುಖ ಸೂರ್ಯನಂತೆ ಅರ್ಜುನನ ರಥವು ಭೂಗರ್ಭದಿಂದ ಮೇಲೇಳುತ್ತಿರುವುದು. ಅಸ್ತಂಗತ ಚಂದ್ರನಂತೆ ನನ್ನ ರಥವು ಅಂಧಃಕಾರದ ಗುಹೆಯಲ್ಲಿ ಲೀನವಾಗುತ್ತಿರುವುದು..........ಅರ್ಜುನನ ಉತ್ಥಾನ, ಕರ್ಣನ ಪತನ.....ನಾವಿಬ್ಬರೂ ಸಹೋದರರು. ತೂಗು ಹಲಗೆಯ ಆಟವನ್ನಾಡುವ ಬಾಲಕರಂತೆ ಅರ್ಜುನನೊಂದು ಕಡೆ, ನಾನೊಂದು ಕಡೆ. ಮೇಲಕ್ಕೇಳುವೆವು. ಕೆಳಗೆ ಬೀಳುವೆವು. ಈಗ ನನ್ನ ಸರದಿಯಾದುದರಿಂದ ಬೀಳುತ್ತಿರುವೆನು. ಇದು ಬ್ರಾಹ್ಮಣನ ಶಾಪವಲ್ಲ. ಜೀವನದ ರಹಸ್ಯ ತತ್ವ. ಕಾಲಚಕ್ರದ ಚಿರಪರಿಚಿತ ಆವರ್ತ....ಕುಂತಿ, ನೀನಿಂದು ಜಗಜ್ಜನನಿಯಾದ ಮಹಾಕಾಳಿಯ ರೂಪವನ್ನು ಧರಿಸಿರುವೆ. ಆದುದರಿಂದಲೇ ಜೀವನವೂ ಮರಣವೂ ಒಮ್ಮೆಗೇ ಒಂದೇ ಕಾಲದಲ್ಲಿ ನಿನ್ನನ್ನಾಶ್ರಯಿಸಿರುವುವು. ನನಗೆ ಜನ್ಮವನ್ನು ಕೊಟ್ಟ ಉದರವು ಇಂದು ನನ್ನ ಮರಣವನ್ನೂ ಗರ್ಭದಲ್ಲಿ ಧರಿಸಿತ್ತೆಂಬುದನ್ನು ತಿಳಿದೆನು. ಧನ್ಯೆ ! ಜನನಿ—ವಾಸುದೇವ, ಇದೋ ನನ್ನ ಅಂತಿಮ ನಮಸ್ಕಾರ.

(ಅರ್ಜುನನು ಬಾಣವನ್ನು ಬಿಡುವನು. ಕರ್ಣನ ಪತನ)

ಕೃಷ್ಣ : ಹೋಗು, ವೀರ ! ದಾನದಲ್ಲಿ ಮುಕ್ತಹಸ್ತನೂ, ಯುದ್ಧದಲ್ಲಿ ಅಪ್ರತಿಮನೂ ಆಗಿ ಆರ್ಯಾವರ್ತವನ್ನು ಬೆಳಗಿದೆ. ಸ್ನೇಹಪಾಶದಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬದ್ಧನಾಗಿ ಬಂಧುಬಾಂಧವರನ್ನೂ, ಪ್ರಾಣಗಳನ್ನೂ ತ್ಯಾಗಮಾಡಿದೆ. ಮುಕ್ತನು ನೀನು ! ನೀನು ಆತ್ಮಕ್ಕೆ ಚಿರ ವಿಶ್ರಾಂತಿ ದೊರಕುವುದು ! ಹೋಗು ಕರ್ಮವೀರ, ನನ್ನ ಪ್ರಿಯ ಬಂಧು, ಕೌಂತೇಯ !

ಅರ್ಜುನ : ಏನು ? ಏನು ಹೇಳಿದೆ, ವಾಸುದೇವ !

ಕೃಷ್ಣ : ಏನೂ ಇಲ್ಲ. ಈ ಮೃತವೀರನಿಗೆ ಅಭಿವಾದನ ಮಾಡು, ಅರ್ಜುನ.
(ಕೃಷ್ಣಾರ್ಜುನರು ಅಭಿವಾದನ ಮಾಡುವರು, ನೇಪಥ್ಯದಲ್ಲಿ ಯುಧಿಷ್ಠಿರನ ಧ್ವನಿ)
ಅರ್ಜುನ ! ಅರ್ಜುನ ! ನಿಲ್ಲು, ನಿಲ್ಲು ! ಕರ್ಣನನ್ನು ವಧಿಸಬೇಡ.
(ಕೃಷ್ಣಾರ್ಜುನರು ಸ್ತಬ್ಧರಾಗುವರು. ವೇಗದಿಂದ ಯುಧಿಷ್ಠಿರನ ಪ್ರವೇಶ)

ಯುಧಿಷ್ಠಿರ : ಅರ್ಜುನ, ನಿಲ್ಲು, ನಿಲ್ಲು. ಕರ್ಣನ ಮೇಲೆ ಅಸ್ತ್ರವನ್ನೆತ್ತಬೇಡ. ಅವನು ಪ್ರಥಮ ಪಾಂಡವನು. ನಮ್ಮೆಲ್ಲರ ಜ್ಯೇಷ್ಠ ಸಹೋದರನು. (ಕರ್ಣನು ಮೃತನಾಗಿರುವುದನ್ನು ನೋಡಿ) ಮುಗಿಯಿತು ! ಮುಗಿಯಿತು ! ಈ ಭ್ರಾತೃಹತ್ಯೆಯನ್ನೇಕೆ ಮಾಡಿಸಿದೆ, ಕೇಶವ !

[ತೆರೆ]

ದೃಶ್ಯ ೨ — ಯುದ್ಧರಂಗ

(ಶಕುನಿ ಏಕಾಂಗಿ)

ಶಕುನಿ : ನನ್ನ ಇಷ್ಟೊಂದು ಪರಿಶ್ರಮ ವಿಫಲವಾಯಿತು. ನನ್ನ ಬುದ್ಧಿ ಕೌಶಲದಿಂದ ದುರ್ಯೋಧನನ ಬಂಧುಮಿತ್ರರು ಒಬ್ಬೊಬ್ಬರಾಗಿ ಹತರಾದರು. ಆದರೂ ಅವನ ಕಣ್ಣುಗಳಲ್ಲಿ ಒಂದುತೊಟ್ಟು ನೀರೂ ಬರಲಿಲ್ಲ. ರಾಜ್ಯದಲ್ಲಿ ಅಶಾಂತಿಯ ಬಿರುಗಾಳಿಯನ್ನೆಬ್ಬಿಸಿ ಹಸ್ತಿನಾವತಿಯ ರತ್ನ ಸಿಂಹಾಸನವನ್ನು ರಕ್ತದ ಕೋಡಿಯಲ್ಲಿ ಮುಳುಗಿಸಿದೆನು. ಅವನು ಆ ಕಡೆ ದೃಷ್ಟಿಸಲೂ ಇಲ್ಲ. ರೋಮ ರೋಮದಲ್ಲಿ ಕೋಟಿ ಸಿಡಿಲಿನ ಆಘಾತವನ್ನುಂಟುಮಾಡಿದೆನು. ಅವನು ಚಲಿಸಲಿಲ್ಲ. ಎಂತಹ ಅಭಿಮಾನಶಾಲೀ ವೀರಪುರುಷನಿವನು ! ಅವನ ಅಧಃಪತನಕ್ಕಾಗಿ ನಾನು ಮಾಡಿದ ಕೂಟತಂತ್ರ ಅವನ ಮಹತ್ವದ ಗುಣಗಳನ್ನು ಒಂದೊಂದಾಗಿ ಪ್ರಕಾಶಕ್ಕೆ ತರುತ್ತಿರುವುವು. ಇನ್ನೊಂದು ಸಾರಿ ಪ್ರಯತ್ನಿಸಿ ನೋಡುವೆನು. ಅವನ ಸ್ವಾಭಿಮಾನವನ್ನು ನಾಶಮಾಡಿ ಪಾಂಡವರ ಪದತಲದಲ್ಲಿ ತಲೆಬಾಗುವಂತೆ ಮಾಡುವೆನು. ಇದೋ ಅವನೇ ಬಂದ.

Sri Vidyabharathi Book Centre, Sringeri

CC-O. In Public Domain. Digitized by eGangotri

(ದುರ್ಯೋಧನನ ಪ್ರವೇಶ)

ದುರ್ಯೋಧನ : ಶಕುನಿ, ಸುಮ್ಮನಿರುವಿಯೇಕೆ ? ಇದು ಯುದ್ಧದ ಕೊನೆಯ ದಿನ. ನಿರಾಶನಾಗಬೇಡ.

ಶಕುನಿ : ದುರ್ಯೋಧನ, ಇನ್ನಾದರೂ ಈ ಯುದ್ಧವನ್ನು ಸಾಕುಮಾಡು.

ದುರ್ಯೋಧನ : ಸಾಕುಮಾಡು ! ನೀನು ಹೀಗೆ ಹೇಳುವುದೇ, ಶಕುನಿ ?

ಶಕುನಿ : ಹೌದು. ನಾನು ಹೇಳುವೆನು. ಸರ್ವರ ವಿರುದ್ಧವಾಗಿ ನಾನು ನನ್ನ ಹೃದಯ ಮಧ್ಯದಲ್ಲಿ ಈ ಯುದ್ಧದ ವಿಷಬೀಜವನ್ನು ನೆಟ್ಟೆನು. ಆ ಕಾರ್ಯಕ್ಕಾಗಿ ಈಗ ದುಃಖಿಸುತ್ತಿರುವೆನು. ನಾನು ನಿನ್ನ ಹಿತಾಕಾಂಕ್ಷಿ. ಯುದ್ಧವನ್ನು ಸಾಕುಮಾಡು.

ದುರ್ಯೋಧನ : ಈ ಯುದ್ಧಕ್ಕೆ ನೀನು ಕಾರಣನಲ್ಲ, ಶಕುನಿ. ರಾಜ್ಯವು ವೀರರ ಸಂಪತ್ತು. ಕುರುಪಾಂಡವರ ರಾಜ್ಯಲೋಭದಿಂದ ಈ ಯುದ್ಧವು ಪ್ರಾರಂಭವಾಯಿತು. ಸ್ವಯಂ ನಾನು ಅದನ್ನು ಪ್ರತಿಷ್ಠಾಪಿಸಿದೆನು. ನೀನಿಲ್ಲದಿದ್ದ ಪಕ್ಷದಲ್ಲಿ ಅರಗಿನ ಮನೆಯ ಪ್ರಕರಣವು ನಿಲ್ಲಬಹುದಾಗಿತ್ತು. ಕಪಟದ್ಯೂತಕ್ಕೆ ಎಡೆಯಿರಲಿಲ್ಲ. ರಾಜಸಭೆಯಲ್ಲಿ ಪಾಂಚಾಲಿಯ ಅಪಮಾನವಾಗುತ್ತಿರಲಿಲ್ಲ. ಆದರೆ ಯುದ್ಧವು ಮಾತ್ರ ಖಂಡಿತವಾಗಿ ನಡೆಯುತ್ತಿತ್ತು.

ಶಕುನಿ : ಯುದ್ಧವನ್ನು ನಿಲ್ಲಿಸು ದುರ್ಯೋಧನ. ನಿನ್ನ ಕೈ ಹಿಡಿದು ಬೇಡುವೆನು. ನಾನು ನಿನ್ನ ಹಿತೈಷಿ.

ದುರ್ಯೋಧನ : ನಿನ್ನ ನೂರು ಜನ ಸಹೋದರರನ್ನು ನಿರಾಹಾರದಿಂದ ಕೊಂದ ನನಗೆ ನೀನು ಹಿತೈಷಿಯಾಗುವುದು ಸಾಧ್ಯವೆ ?

ಶಕುನಿ : ಈಗಾಮಾತುಗಳೇಕೆ, ದುರ್ಯೋಧನ ?

ದುರ್ಯೋಧನ : ಆದರೂ ನಿನ್ನನ್ನು ಸಮೀಪದಲ್ಲಿಟ್ಟುಕೊಂಡೆ. ಹೆಜ್ಜೆ ಹೆಜ್ಜೆಗೂ ನರಕದ ಹಾದಿಗೆ ತಳ್ಳುವೆಯೆಂದು ತಿಳಿದಿದ್ದರೂ ಆನಂದದಿಂದ ಪ್ರಿಯಬಂಧುವೆಂದು ನಿನ್ನನ್ನು ಆಲಂಗಿಸಿದೆ. ನಿನ್ನ ಕೂಟ ತಂತ್ರಗಳಿಗೆ ಹೆದರಲಿಲ್ಲ. ಇದರ ಕಾರಣವು ಗೊತ್ತೇ, ಶಕುನಿ ? ನೀನು ತುಚ್ಛ, ವಂಚಕಿ, ಮಿಥ್ಯಾಪವಾದಿ, ಕ್ಷುದ್ರಜೀವಿಯೆಂದು ನಾನು ನಿನ್ನನ್ನು ನಿರ್ಲಕ್ಷ್ಯ ಮಾಡಿದೆನು. ಅಷ್ಟೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕುನಿ : ಸ್ಥಿರನಾಗು, ದುರ್ಯೋಧನ. ಆಗಿಹೋದುದನ್ನು ಚಿಂತಿಸಿ ಫಲವೇನು ? ಈಗ ನೀನು ಪಾಂಡವರ ಕ್ಷಮೆಯನ್ನು ಬೇಡು. ಅವರು ಸಂತುಷ್ಟರಾಗಿ ನಿನ್ನ ರಾಜ್ಯವನ್ನು ನಿನಗೆ ಕೊಡುವರು.

ದುರ್ಯೋಧನ : ಏಕೆ ? ಗುರುಹತ್ಯೆಯನ್ನು ನೋಡಿದ್ದಾಯಿತು. ನನ್ನ ಸಹೋದರರೂ, ಪುತ್ರರೂ ಒಬ್ಬೊಬ್ಬರಾಗಿ ಯುದ್ಧಕ್ಷೇತ್ರದಲ್ಲಿ ಮೃತರಾದರು. ಈಗಲೂ ನಿನ್ನ ಪ್ರತಿಹಿಂಸೆಯ ಜ್ವಾಲೆಯು ಆರಲಿಲ್ಲವೇ, ಶಕುನಿ ? ಈಗ ಮತ್ತಾವ ಹೊಸ ತಂತ್ರವನ್ನು ಹೂಡಲಿರುವೆ ? ದುರ್ಯೋಧನನ ಸ್ಥಿರಲಕ್ಷ್ಯವು ಲಕ್ಷ ಶಕುನಿಗಳ ಕೂಟಬುದ್ಧಿಯನ್ನು ಪರಾಜಿತಮಾಡಿ ಸ್ವರ್ಗದ ಮಾರ್ಗವನ್ನು ಹಿಡಿಯಬಲ್ಲುದು. ಪಾಂಡವರ ಪದತಲದಲ್ಲಿ ನನ್ನ ನತ ಮಸ್ತಕವನ್ನು ನೋಡಲು ಸಂಕಲ್ಪಿಸಿರುವೆಯಲ್ಲವೆ, ಮಾವ ? ಆಗಲಿ, ಶತೃಪಕ್ಷವನ್ನು ಸೇರು. ದುರ್ಯೋಧನನ ಪ್ರಚಂಡ ಧ್ವಂಸವನ್ನು ನೋಡಿ ಚಕಿತನಾಗುವೆ–ಇಲ್ಲವೇ ಮಿತ್ರನಂತೆ ನನ್ನ ಸಂಗಡ ಬಾ. ಜೀವನದ ಚರಮಸ್ಪಂದನದಿಂದ ಶತೃಹೃದಯವು ಕಂಪಿಸುವುದನ್ನು ನೋಡುವೆ. (ನಿಷ್ಕ್ರಾಂತ)

ಶಕುನಿ : ಎಂತಹ ಅಪಮಾನ ! ನನ್ನನ್ನು ಯಾರೂ ಇಷ್ಟೊಂದು ತುಚ್ಛಭಾವದಿಂದ ನೋಡಿರಲಿಲ್ಲ. ದುರ್ಯೋಧನ.....(ಕೋಪವನ್ನಡಗಿಸಿಕೊಂಡು) ಬೇಡ, ಬೇಡ ಹೋಗು, ವೀರ. ಚಿಕ್ಕಂದಿನಿಂದಲೂ ಪ್ರತಿಹಿಂಸೆಯಲ್ಲಿ ಮಗ್ನವಾಗಿದ್ದ ನನ್ನ ಹೃದಯವು ಸ್ನೇಹ ಮಮತೆಗಳನ್ನು ಕಂಡರಿಯದು. ಈಗ–ಜೀವನದ ಕೊನೆಗಾಲದಲ್ಲಿ ನಾನು ನಿನ್ನ ಮಿತ್ರನೆನಿಸುವೆನು. ನೂತನ ಪೌರುಷದಿಂದ ಉತ್ತೇಜಿತನಾಗಿ ಯುದ್ಧ ಮಾಡಿ ವೀರಸ್ವರ್ಗವನ್ನು ಪಡೆ. ನಾನೂ ನಿನ್ನನ್ನು ಹಿಂಬಾಲಿಸುವೆನು. ಇಂದು ಶಕುನಿಗೆ ಮರಣದ ಹೊರತು ಇನ್ನೇನೂ ಉಳಿದಿಲ್ಲ. ಕುರುಕ್ಷೇತ್ರದ ಧರ್ಮಯುದ್ಧದಲ್ಲಿ ಅವನು ಸಂಪಾದಿಸಿದುದು ಕೇವಲ ದುರ್ಯಶ–ಉಪಮಾತೀತವಾದ ದುರ್ಭರ ಚಿಂತಾಗ್ನಿ ! (ಹೋಗುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ದೃಶ್ಯ ೩—ವೈಶಂಪಾಯನ ಸರೋವರ

(ವಿದುರನೂ ಗಾಂಧಾರಿಯೂ ಪ್ರವೇಶಿಸುವರು)

ವಿದುರ : ಕುರುಕ್ಷೇತ್ರದಲ್ಲೆಲ್ಲಿಯೂ ಹುಡುಕಿದ್ದಾಯಿತು. ಆದರೆ ಅವನ ಸುಳಿವಿಲ್ಲ. ಕಾಲುಹಿಡಿದು ಬೇಡುವೆನು, ಹಿಂದಿರುಗು ಮಹಾರಾಣಿ.

ಗಾಂಧಾರಿ : ವಿದುರ, ಬಹುವಾಗಿ ಆಯಾಸಗೊಂಡಿರುವೆ. ಇಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊ. ನಾನು ಸುತ್ತ ಮುತ್ತ ನೋಡಿಬರುವೆನು.

ವಿದುರ : ನಾನು ಆಯಾಸಗೊಂಡಿಲ್ಲ, ತಾಯಿ. ಕಾಣುವುದಿಲ್ಲವೇ, ಈ ಕದನದ ವಿರಾಟ್ ಆಂದೋಳನದಿಂದ ಭೂಮಿಯು ಆಯಾಸಗೊಂಡಿರುವುದು. ಪ್ರಕೃತಿಯು ಶಾಂತಳಾಗಿರುವಳು. ಇದು ಕುರುಕ್ಷೇತ್ರದ ಅಂತ್ಯ. ಮುಂದೆ ಇನ್ನೆಲ್ಲಿ ಹೋಗುವುದು, ಮಹಾರಾಣಿ?

ಗಾಂಧಾರಿ : (ಉದ್ವೇಗದಿಂದ) ವಿದುರ, ಇದು ಕುರುಕ್ಷೇತ್ರದ ಅಂತ್ಯ ಮಾತ್ರವಲ್ಲ. ಪ್ರಪಂಚದ ಅಂತ್ಯ! ಬ್ರಹ್ಮಾಂಡದ ಮಹಾಪ್ರಳಯ! ಹಾಗಾದರೆ, ಸೃಷ್ಟಿಯ ಈ ಅಂತಿಮ ಮುಹೂರ್ತದಲ್ಲಿ ನನ್ನ ಕುಮಾರನು ಎಲ್ಲಿ ಅವಿತುಕೊಂಡಿರುವನು? ದುರ್ಯೋಧನ! ದುರ್ಯೋಧನ! ಇಂದು ನೀನೆಲ್ಲಿ? ಯುದ್ಧದಲ್ಲಿ ಸತ್ತೆಯ? ಹಾಗಾದರೆ ನಿನ್ನ ಶರೀರವು ಕುರುಕ್ಷೇತ್ರದಲ್ಲೆಲ್ಲಿಯೋ ಬಿದ್ದಿರಬೇಕು—ಹುಡುಕು, ವಿದುರ.

ವಿದುರ : ಹಿಂತಿರುಗು ಮಹಾರಾಣಿ.

ಗಾಂಧಾರಿ : ನಿನ್ನದೆಂತಹ ಗಂಡುಕರುಳು. ಮನಸ್ಸಿನಲ್ಲಿ ಸ್ವಲ್ಪವೂ ದಯೆಯಿಲ್ಲವೆ? ದುರ್ಯೋಧನನಿಂದ ಆದ ಅಪಮಾನವನ್ನು ಇನ್ನೂ ಮರೆತಿಲ್ಲವೆಂದು ತೋರುವುದು. ಸತ್ತವರ ಮೇಲೆ ಕೋಪವು ಬೇಡ, ವಿದುರ. ನನ್ನ ಆಸೆಯು ದುರ್ಯೋಧನನನ್ನೊಂದು ಸಾರಿ ನೋಡಬೇಕೆಂದು. ಗಾಯಹೊಂದಿ ನರಳುತ್ತಾ ಬಿದ್ದಿದ್ದರೆ, ಮರಣದ ತೀವ್ರ ದಾಹದಿಂದ ಒಣಗಿದ ಅವನ ಗಂಟಲಿಗೆ ಒಂದು ಒಳಲೆ ಗಂಗಾಜಲವನ್ನು ಬಿಡುವೆನು. ಸತ್ತಿದ್ದರೆ ಅವನ ಮುಚ್ಚಿದ ಕಣ್ಣುಗಳನ್ನೊಂದುಸಾರಿ ಮುದ್ದಿಸುವೆನು. ಇಷ್ಟನ್ನು ನೀನು ಸಹಿಸಲಾರೆ, ಘಳಿಗೆ ಘಳಿಗೆಗೂ ಹೆಜ್ಜೆ ಹೆಜ್ಜೆಗೂ ನನ್ನನ್ನು ತಡೆಯುವೆ, ನನ್ನ ಹಾದಿಯಲ್ಲಿ ಇಲ್ಲದ ಆತಂಕಗಳನ್ನು ತಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಕುವೆ. ಬಾರಿಬಾರಿಗೂ ಹಿಂತಿರುಗುವಂತೆ ಹೇಳುವೆ. ನನ್ನ ಸಂಗಡ ಬರುವುದು ಕಷ್ಟವಾದರೆ ನೀನು ಹೋಗು, ವಿದುರ. ನೂರು ಜನ ಮಕ್ಕಳು ಹೋದರು. ನೀನೂ ಹೋದೆಯೆಂದು ಭಾವಿಸುವೆನು.

ವಿದುರ : ಏನು ಬೇಕಾದರೂ ಹೇಳು, ಮಹಾರಾಣಿ. ಆದರೆ ಮನೆಗೆ ಹಿಂದಿರುಗು. (ದುರ್ಯೋಧನನು ಸರೋವರದಿಂದೇಳುವನು)

ದುರ್ಯೋಧನ : ತಾಯಿ !

ಗಾಂಧಾರಿ : ಅವನ ದನಿ ! ಅವನ ದನಿ ! ನಿನಗೆ ಕೇಳಿಸಿತೇ, ವಿದುರ ? ಅಥವಾ ಇದೂ ಕೃಷ್ಣನ ಮಾಯೆಯೋ ?.....

ದುರ್ಯೋಧನ : (ಮುಂದೆ ಬಂದು) ತಾಯಿ, ನಾನು ನಿಜವಾಗಿ ನಿನ್ನ ದುರ್ಯೋಧನನು, ಇದುವರೆಗೂ ವೈಶಂಪಾಯನ ಸರೋವರದಲ್ಲಿ ಅಡಗಿದ್ದೆನು.

ಗಾಂಧಾರಿ : ನೀನು ನಿಜವಾಗಿ ನನ್ನ ದುರ್ಯೋಧನನೇ ! ಹಾಗಾದರೆ ಪ್ರಾಣಭಯದಿಂದ ಸರೋವರದಲ್ಲೇಕೆ ಅಡಗಿ ಕುಳಿತಿದ್ದೆ ?—ಎಂತಹ ಅಧಃಪತನವಿದು, ವಿದುರ. ಇದನ್ನು ನೋಡುವುದಕ್ಕಾಗಿಯೇ ನಾವಿಲ್ಲಿಗೆ ಬಂದದ್ದು ? ಹೇಳು ದುರ್ಯೋಧನ, ಹೇಳು, ನನ್ನ ಪ್ರಿಯ ಕುಮಾರ, ಸಮುಖ ಯುದ್ಧದಲ್ಲಿ ಮಡಿದೆನೆಂದು ಹೇಳು. ರಣಕ್ಷೇತ್ರದಲ್ಲಿ ಗಾಯಗೊಂಡು ಬಿದ್ದಿರುವೆನೆಂದು ಹೇಳು. ಆ ಮಾತಿನ ಗೌರವವನ್ನು ಮನಸ್ಸಿನಲ್ಲಿಟ್ಟುಕೊಂಡು, ಅಭಾಗಿನಿಯಾದ ನಿನ್ನ ತಾಯಿಯು ಉಳಿದ ಕಾಲವನ್ನು ಕಳೆಯುವಳು.

ದುರ್ಯೋಧನ : ಮೊದಲು ನನ್ನ ಮಾತನ್ನು ಕೇಳು, ತಾಯಿ. ಅನಂತರ ಇಷ್ಟವಿದ್ದರೆ ತಿರಸ್ಕಾರಮಾಡು.

ಗಾಂಧಾರಿ : ನನಗೆ ನಿನ್ನ ಮಾತುಗಳೊಂದೂ ಬೇಡ. ಕುಲಾಂಗನೆಯ ಅಪಮಾನಕ್ಕೆ ಕೈ ಹಾಕಿ ಹಸ್ತಿನಾವತಿಯ ರಾಜಸಭೆಯಲ್ಲೊಂದು ಸಾರಿ ಸತ್ತೆ. ಯುದ್ಧಭೂಮಿಯಲ್ಲಿ ಏಳುಜನ ಮಹಾರಥಿಕರು ಒಟ್ಟುಗೂಡಿ ಅಭಿಮನ್ಯು ಕುಮಾರನನ್ನು ಯಾಗಪಶುವಿನಂತೆ ಕೊಂದಾಗ ಮತ್ತೊಂದು ಸಾರಿ ಸತ್ತೆ. ಮರಣಕ್ಕಂಜಿ ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತು ಈಗ ಮೂರನೆಯ ಸಾರಿ ಸಾಯುಲಿರುವೆ. ವೀರಮಾತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಾಂಧಾರಿಗೆ ಇದೆಂತಹ ಅವನತಿ ! ಮಕ್ಕಳು ಶೂರರಾದರೆ ಸಾಯುವುದು ಒಂದು ಸಾರಿ ! ಹೇಡಿಗಳಾದರೆ ಸಾವಿರ ಸಾರಿ ! (ಅಳು)

ದುರ್ಯೋಧನ : ಅಳಬೇಡ, ತಾಯಿ. ಇಷ್ಟು ದಿನಗಳ ಯುದ್ಧದಿಂದಲೂ ನನ್ನ ರಣತೃಷ್ಣೆಯು ಮುಗಿದಿಲ್ಲ. ನರಕಳೇಬರದಿಂದ ದೇವಿಯ ಮೂರ್ತಿಯನ್ನು ನಿರ್ಮಿಸಿ, ರಕ್ತದ ಕಾಲುವೆಯಲ್ಲಿ ಸ್ನಾನಮಾಡಿ, ಅಸ್ತಿಮಾಂಸಗಳ ನೈವೇದ್ಯವನ್ನು ಮುಂದಿಟ್ಟು, ಹೃದಯದ ಬಿಸಿನೆತ್ತರಿಂದ ಅಭಿಷೇಕ ಮಾಡಿದೆನು. ಕೈಯಾರೆ ಅಗ್ನಿಕುಂಡವನ್ನು ಉರಿಮಾಡಿ ಲಕ್ಷಲಕ್ಷ ಜೀವರ ಪ್ರಾಣಗಳನ್ನು ಹರಿಸಿ ಮಾತೆಗೆ ಆಹುತಿ ಕೊಟ್ಟೆನು. ಇನ್ನುಳಿದಿರುವುದು ಆರತಿಯು ಮಾತ್ರ. ಅದೂ ಜಾಗ್ರತೆಯಾಗಿ ಮುಗಿಯುವುದು. ದುರ್ಯೋಧನನು ಕೊನೆಗೊಂದು ಸಾರಿ ಪ್ರಳಯದ ಧೂಮಕೇತುವಿನಂತೆ ಉಜ್ವಲ ಪ್ರಕಾಶದಿಂದ ಭೂಮ್ಯಾಕಾಶಗಳನ್ನು ಬೆಳಗಿಸಿ ಬಳಿಕ ಅವಿನಾಶಿಯಾದ ಅನಂತದ ಪ್ರಶಾಂತ ಉದರದಲ್ಲಿ ಲೀನನಾಗುವನು.

ವಿದುರ : ದುರ್ಯೋಧನ, ಜಗತ್ತಿನ ಒಂದು ವಿಖ್ಯಾತ ರಾಜವಂಶದಲ್ಲಿ ಅಪಾರಸಂಪತ್ತಿಗೆ ಅಧಿಕಾರಿಯಾಗಿ ಹುಟ್ಟಿದೆ. ಆದರದರಿಂದ ಪ್ರಪಂಚಕ್ಕಾದ ಮಂಗಳವೇನು ? ಪ್ರಾಣವು ಹೋಯಿತು ! ಮಾನವು ಹೋಯಿತು ! ಸರ್ವನಾಶವಾಯಿತು ! ವಿಶಾಲ ಪೃಥ್ವಿಯು ನಿನ್ನ ಬಂಧುಬಾಂಧವರ ಹಾಹಾಕಾರದಿಂದ ತುಂಬಿರುವುದು.

ದುರ್ಯೋಧನ : ಪ್ರಾಣವು ಪ್ರಕೃತಿಯ ಕ್ರೀಡಾವಸ್ತು ! ಮಣ್ಣಿಗೆ ಸಮಾನ ! ಅದು ಹೋದರೇನಾಯಿತು ? ಆದರೆ ಮಾನವು ಹೋಯಿತೆಂಬುದು ಸುಳ್ಳು, ವಿದುರ. ದುರ್ಯೋಧನನ ಮಸ್ತಕವು ಯಾವಾಗಲೂ ಅವನತವಾಗುವುದಿಲ್ಲ, ಕಂಡೆಯಾ ? ಇದು ಜಗತ್ತಿನ ಮಂಗಳ, ಸರ್ವನಾಶವಲ್ಲ. ಕುರುಭೂಮಿಯು ಹಾಹಾಕಾರದಿಂದ ತುಂಬಿರುವುದು. ಆದರೆ ಈ ಹಾಹಾಕಾರದಿಂದ ಭಾರತ ವರ್ಷದಲ್ಲಿ ಪುಣ್ಯ ಸಿಂಹಾಸನವೊಂದು ಸ್ಥಾಪಿತವಾಗುವುದು. ರಕ್ತದಿಂದ ತೊಯ್ದು ಯಾಗಸ್ತಂಭಕ್ಕೆ ಕಟ್ಟಲ್ಪಟ್ಟ ಜಗತ್ತು ಆಶಂಕದಿಂದ ಕಂಪಿಸುತ್ತಿತ್ತು. ಶೋಣಿತ ತರ್ಪಣದಿಂದ ಪೃಥ್ವಿಯ ಇತಿಹಾಸವು ರಚಿಸಲ್ಪಡುತ್ತಿತ್ತು. ಇನ್ನು ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವೇಷವನ್ನು, ಹಿಂಸೆಯುನ್ನು ಮರೆತು ವಿಶಾಲ ಜಗತ್ತಿನ ನಿವಾಸಿಗಳು ಸಹೋದರ ಸಹೋದರಿಯರಂತೆ ಸ್ನೇಹದಿಂದ ವರ್ತಿಸುವರು.

ಗಾಂಧಾರಿ : ಏನು ಹೇಳಿದೆ ಕುಮಾರ ! ಹೇಳು, ಹೇಳು, ಮತ್ತೊಂದು ಸಾರಿ ಹೇಳು, ಸಮಸ್ತ ಪ್ರಪಂಚವೂ ಕೇಳಲಿ.

ದುರ್ಯೋಧನ : ವಿದುರ, ಹೆಜ್ಜೆಯ ಸಪ್ಪಳವು ಕೇಳುತ್ತಿರುವುದು. ಹೋಗು, ಉಳಿದಿರುವ ನನ್ನ ಸಹಾಯಕರಿಗೆ ತಿಳಿಸು. ದುರ್ಯೋಧನನು ಮೃತನಾಗಿಲ್ಲ. ದೇವಿಯ ಆರತಿಯನ್ನು ಸಿದ್ಧಪಡಿಸುವ ಮೊದಲು ಕ್ಷಣಕಾಲ ವಿಶ್ರಾಂತಿಯನ್ನು ಪಡೆಯುತ್ತಿರುವನೆಂದು.

(ಮತ್ತೆ ಸರೋವರದಲ್ಲಿ ಅಡಗುವನು)

ಗಾಂಧಾರಿ : ಎಲ್ಲಿಗೆ ಹೋದನು ! ಎಲ್ಲಿ ಮರೆಯಾದನು ! ಪುತ್ರ, ಇನ್ನೊಂದು ಸಾರಿ ಹೇಳು. ಸುಧೆಯಂತೆ ಶೀತಲವಾದ ನಿನ್ನ ವಾಕ್ಯಗಳಿಂದ ಗಾಂಧಾರಿಯ ಸಂತಪ್ತ ಹೃದಯುವು ಶಾಂತವಾಗಲಿ. ಹೇಳು ಇನ್ನೊಂದು ಸಾರಿ. (ನೇಪಥ್ಯದ ಕಡೆ ನೋಡಿ) ವಿದುರ, ಈ ಸ್ಥಳದಲ್ಲಿ ನಿಂತು ಎಂತಹ ಸರ್ವನಾಶಮಾಡುತ್ತಿರುವೆ. ಇದೋ ಶತ್ರುಗಳು ಬರುತ್ತಿರುವರು. ಕುಮಾರನು ಇಲ್ಲಿರುವನೆಂದು ತಿಳಿದರೆ ಅವನ ವಿಶ್ರಾಂತಿಯನ್ನು ಭಂಗ ಮಾಡುವರು.....ಇನ್ನು ನನಗೆ ದುಃಖವಿಲ್ಲ. ಪುತ್ರನು ಹೇಡಿಯಲ್ಲವೆಂದು ಸಂತುಷ್ಟಳಾಗುವೆನು. ಗಾಂಧಾರಿಯ ಎದೆಹಾಲು ವಿಫಲವಾಗಲಿಲ್ಲ. ನಡೆ, ನಡೆ, ಇಲ್ಲಿಂದ ಹೊರಟುಹೋಗುವ.

(ಉಭಯರೂ ಹೋಗುವರು)

(ಬೇರೆ ದಿಕ್ಕಿನಿಂದ ಕೃಷ್ಣ, ಯುಧಿಷ್ಠಿರ ಮತ್ತು ಭೀಮಾರ್ಜುನರು ಬರುವರು)

ಕೃಷ್ಣ : ಭೀಮಸೇನ, ಇದೆಂತಹ ಅಪಮಾನ ! ಈ ಸಾರಿ ದುರ್ಯೋಧನನು ನಿನ್ನನ್ನು ಖಂಡಿತವಾಗಿ ವಂಚಿಸಿದನು.

ಭೀಮ : ನಮ್ಮನ್ನಲ್ಲ, ನಿನ್ನನ್ನು, ವಾಸುದೇವ. ಭೀಮಸೇನನ ಪ್ರತಿಜ್ಞೆಯು ಎಂದಿಗೂ ಭಂಗವಾಗುವುದಿಲ್ಲ.

ಯುಧಿ : ಈಗೇನು ಮಾಡುವುದು ಜನಾರ್ಧನ ?

ಕೃಷ್ಣ : ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಜಲಸ್ತಂಭನದಿಂದ ಅಡಗಿ ಕುಳಿತಿರುವನು. ಕೂಗು ಯುಧಿಷ್ಠಿರ, ಹೊರಗೆ ಬರುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೀಮ : ಒಪ್ಪತಕ್ಕ ಮಾತು. ಆದರೆ ಧರ್ಮರಾಯನ ಬಾಯಿಂದ ಪುರುಷೋಕ್ತಿಗಳು ಬರುವುದಾದರೂ ಹೇಗೆ ? ಅದು ನಿನ್ನಿಂದ ಸಾಧ್ಯವಿಲ್ಲ. ನಾನು ಪ್ರಾರಂಭಿಸುವೆನು. "ದುರ್ಯೋಧನ, ಹನ್ನೊಂದು ಅಕ್ಷೌಹಿಣಿ ಕುರುಸೈನ್ಯವನ್ನು ನಾಶಮಾಡಿದೆ. ಭೀಷ್ಮ, ದ್ರೋಣ, ಕರ್ಣ, ಸೈಂಧವ, ಶಲ್ಯಾದಿ ಮಹಾರಥಿಕರು ನಿನಗಾಗಿ ಪ್ರಾಣಗಳನ್ನು ಬಿಟ್ಟರು. ಶಕುನಿಯಂತಹ ನರಾಧಮನೂ ವೀರನಂತೆ ಯುದ್ಧಮಾಡಿ ರಣರಂಗದಲ್ಲಿ ಮಡಿದನು. ಕೇವಲ ನೀನು, ಹೇಡಿಯಾದ ನೀನು, ಸೋತ ನಾಯಿಯಂತೆ ಓಡಿಬಂದೆ. ಕ್ಷತ್ರಿಯಾಧಮ, ಕುಲಾಂಗಾರ, ಭರತವಂಶದ ಕಲಂಕಸ್ವರೂಪನೆ. ಪ್ರಾಣಭಯದಿಂದ ಸರೋವರದಲ್ಲಿ ಅಡಗಿ ಕುಳಿತಿರುವೆಯಾ ?"

(ದುರ್ಯೋಧನನು ಸರೋವರದಿಂದ ಹೊರಗೆ ಬರುವನು)

ದುರ್ಯೋಧನ : ಸುಮ್ಮನಾಗು, ವೃಕೋಧರ. ವಿರಾಟನ ಅಡುಗೆಯ ಮನೆಯ ಭಟ್ಟಂಗಿ ! ವೀರರ ಹೃದಯವನ್ನು ನೀನು ಹೇಗೆ ತಿಳಿಯಬಲ್ಲೆ..... ಯುಧಿಷ್ಠಿರ, ನಾನು ಪ್ರಾಣಭಯದಿಂದ ಸರೋವರದಲ್ಲಿ ಅಡಗಿಕೊಂಡಿಲ್ಲ. ಪ್ರಮತ್ತ ವಿಕ್ರಮದಿಂದ ಕೊನೆಯ ಸಾರಿ ಕಾದುವ ಮೊದಲು ಕ್ಷಣಕಾಲ ವಿಶ್ರಾಂತಿಯನ್ನು ಬಯಸಿದೆನು.

ಯುಧಿ : ಉತ್ತಮ, ಉತ್ತಮ. ದುರ್ಯೋಧನ.

ದುರ್ಯೋಧನ : ಧರ್ಮರಾಜ, ದುರ್ಯೋಧನನ ಉನ್ನತ ಧ್ವಜದಡಿಯಲ್ಲಿ ಯುದ್ಧಕ್ಕೆ ಹೊರಟ ಹನ್ನೊಂದು ಅಕ್ಷೌಹಿಣಿ ಸೈನ್ಯದಲ್ಲಿ ಈಗ ಉಳಿದಿರುವುದು ನಾನು ಮತ್ತು ಈ ನನ್ನ ಗದೆ. ಪಾಂಡವ ವೀರರೇ, ನಿಮ್ಮನ್ನು ನಾನು ಗದಾಯುದ್ಧಕ್ಕೆ ಕರೆಯುವೆನು. ಒಬ್ಬೊಬ್ಬರಾಗಿ ನಿಮ್ಮೆಲ್ಲರೊಡನೆ ಹೋರಾಡುವೆನು. ಸಾಮರ್ಥ್ಯವುಳ್ಳವರು ಎದುರಿಗೆ ನಿಲ್ಲಲಿ.

ಕೃಷ್ಣ : ಭೀಮಸೇನ, ಇದು ನಿನ್ನ ಯುದ್ಧದ ಆಹ್ವಾನ. ದುರ್ಯೋಧನನಿಗೆ ಏನೆಂದು ಉತ್ತರ ಕೊಡುವೆ ?

ಭೀಮ : ಅದನ್ನು ಕೇಳುವ ಅಗತ್ಯವಿಲ್ಲ, ವಾಸುದೇವ. ನಾನಿಷ್ಟು ದಿನವೂ ಈ ಶುಭ ಮುಹೂರ್ತದ ಸಲುವಾಗಿ ಕಾದಿದ್ದೆನು.

ದುರ್ಯೋಧನ : ನೀನು ಯಾರ ಪಕ್ಷವನ್ನು ವಹಿಸುವೆಯೋ ಅವರಿಗೆ ಜಯವೆಂಬುದನ್ನು ಬಲ್ಲೆ, ಕೃಷ್ಣ. ಆದರೆ ನಾನದಕ್ಕಾಗಿ ದುಃಖಿಸುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನನ್ನ ಇಚ್ಛೆಯು ಕ್ಷಾತ್ರತೇಜದ ಒಂದು ಅಪೂರ್ವ ಆದರ್ಶವನ್ನು ಜಗತ್ತಿಗೆ ತೋರಿಸಿ ಹೋಗಬೇಕೆಂದು. ಭವಿಷ್ಯ ಭಾರತದ ವೀರ ಕ್ಷತ್ರಿಯರ ಹೃದಯದಲ್ಲಿ ದುರ್ಯೋಧನನ ಹೆಸರನ್ನು ಸಾಹಸ ಮತ್ತು ಮಾನದ ವಿಜಯ ದುಂದುಭಿಯಂತೆ ಮೊಳಗಿಸಬೇಕೆಂದು.

ಕೃಷ್ಣ : ನಿನ್ನ ಇಚ್ಛೆ ಪೂರ್ಣವಾಗುವುದು, ವೀರವರ. (ಬಲರಾಮನುಬರುವನು)

ಬಲರಾಮ : ನಿನ್ನ ಇಚ್ಛೆಯು ಪೂರ್ಣವಾಗಲಿಲ್ಲವೆ, ಸಹೋದರ ?

ಕೃಷ್ಣ : ಅಣ್ಣ, ಯಾವಾಗ ಬಂದೆ ! ಕುಶಲವೆ ?

ಯುಧಿ : ಯುಧಿಷ್ಠಿರನು ಪ್ರಣಾಮ ಮಾಡುವನು, ರೇವತೀಪತಿ.

ದುರ್ಯೋಧನ : ಗುರುದೇವ ! ಇಷ್ಟು ದಿನದ ಮೇಲೆ ನಿನ್ನನ್ನು ನೋಡಿದೆನು ! (ಕಣ್ಣೀರು ಹಾಕುವನು)

ಬಲರಾಮ : ದುರ್ಯೋಧನನ ಕಣ್ಣುಗಳಲ್ಲಿ ನೀರು ! ಏನನ್ನು ಮಾಡಿದೆ, ಕೃಷ್ಣ !..........ಒಳ್ಳೆಯದು. ನೀನು ಪಾಂಡವರ ಪಕ್ಷವನ್ನು ವಹಿಸಿ ಸುದರ್ಶನವನ್ನು ಹಿಡಿದು ನಿಲ್ಲು. ನಾನೀ ಹಲಾಯುಧವನ್ನು ಧರಿಸಿ ದುರ್ಯೋಧನನ ಪಾರ್ಶ್ವದಲ್ಲಿ ನಿಲ್ಲುವೆನು. ಆಗ ಈ ಭಾರತ ಯುದ್ಧವು ಮತ್ತೊಂದು ರೂಪು ಧರಿಸುವುದನ್ನು ನೋಡುವೆ.

ಕೃಷ್ಣ : ಅಣ್ಣ, ಪಾಂಡವರು ಯಾವಾಗಲೂ ಯುದ್ಧವನ್ನು ಅಪೇಕ್ಷಿಸಿದವರಲ್ಲ. ನೀನದನ್ನು ಚೆನ್ನಾಗಿ ಬಲ್ಲೆ. ದುರ್ಯೋಧನನ ಸಹಸ್ರ ಅತ್ಯಾಚಾರಗಳನ್ನು ಸಹಿಸಿ, ಅವರು ತಮ್ಮ ಧರ್ಮವನ್ನು ರಕ್ಷಿಸಿಕೊಂಡಿರುವರು. ಅವರು ತಮ್ಮ ವಾಸಕ್ಕಾಗಿ ಐದು ಗ್ರಾಮಗಳನ್ನು ಅಪೇಕ್ಷಿಸಿದರು. ನಾನೇ ಹಸ್ತಿನಾವತಿಗೆ ಸಂಧಾನಕ್ಕೆ ಹೋಗಿದ್ದೆನು. ಸಂಧಿಗೊಪ್ಪದಿದ್ದರೆ ಹೋಗಲಿ, ದುರ್ಯೋಧನನು ರಾಜಧರ್ಮವನ್ನೇ ಮರೆತು ನನ್ನನ್ನು ಸೆರೆಹಿಡಿಯಲು ಪ್ರಯತ್ನಿಸಿದನು. ಈಗಲೂ ಪಾಂಡವರು ಐದು ಗ್ರಾಮಗಳನ್ನು ಹೊಂದಿ ಸಂತುಷ್ಟರಾಗುವರು. ನೀನು ಸಂಧಾನ ಮಾಡು. ಕುರು ಪಾಂಡವರಲ್ಲಿ ಶಾಂತಿಯನ್ನು ಸ್ಥಾಪಿಸು.

ಬಲರಾಮ : ಏನು ಹೇಳುವೆ ದುರ್ಯೋಧನ ?

ದುರ್ಯೋಧನ : ನನ್ನ ಕಣ್ಣುಗಳಲ್ಲೊಂದು ತೊಟ್ಟು ನೀರನ್ನು ನೋಡಿ ಇಷ್ಟೊಂದು ಕಾತರನಾದೆಯ, ಯದುರಾಜ? ದುಃಖದಿಂದ ನಿರಾಶನಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ಕಣ್ಣೀರನ್ನು ಸುರಿಸಲಿಲ್ಲ. ನನ್ನ ಅಪೂರ್ವ ಉದ್ಯಮವನ್ನು, ವಿರಾಟ್ ಆಂದೋಳನವನ್ನು ನಿನಗೆ ತೋರಿಸಲಾರದೆ ಹೋದೆನಲ್ಲಾ ಎಂದು ದುಃಖಿಸಿದೆ. ಏಕೆಂದರೆ ನೀನೆನ್ನ ಗುರು. ವೃಕೋದರ, ಯುದ್ಧ ಮಾಡು. ಒಡೆದ ವಸ್ತುವು ಚೂರ್ಣವಾಗಿ ಹೋಗಲಿ.

ಬಲರಾಮ : ಕೃಷ್ಣ, ನಾನು ತಪ್ಪಾಗಿ ತಿಳಿದೆನು, ಕ್ಷಮಿಸು. ನಿನ್ನ ಕರ್ತವ್ಯವನ್ನು ನೀನು ಮಾಡು. ನಾನು ದ್ವಾರಕಿಗೆ ಹೋಗುವೆನು.

ಕೃಷ್ಣ : ಗದಾಯುದ್ಧವನ್ನು ನೋಡಿಕೊಂಡು ಹೋಗು, ಅಣ್ಣ.

ಬಲರಾಮ : ಹಾಗೆಯೇ ಆಗಲಿ.

ದುರ್ಯೋಧನ : ಭೀಮಸೇನ, ದುರ್ಯೋಧನನನ್ನು ವಧಿಸಬಲ್ಲೆಯಾದರೆ ಸಮುದ್ರ ಪರಿವೇಷ್ಟಿತವಾದ ಧರಣಿಯು ಸಕಲ ಸಂಪದವೂ ನಿನ್ನದಾಗುವುದು.

ಭೀಮ : ದುರ್ಯೋಧನ, ಭೀಮಸೇನನನ್ನು ಸೋಲಿಸಬಲ್ಲೆಯಾದರೆ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವೆ.

ದುರ್ಯೋಧನ : ಯುದ್ಧಮಾಡು, ವೃಕೋದರ. ಇಷ್ಟದೇವನನ್ನು ಸ್ಮರಿಸು.

(ಗದಾಘಾತ. ಭೀಮನ ಕೈಯಿಂದ ಗದೆಯು ಕೆಳಗೆ ಬೀಳುವುದು)

ಬಲರಾಮ : ತಡೆ ದುರ್ಯೋಧನ, ಭೀಮನು ನಿರಸ್ತ್ರನು.

ಭೀಮ : (ಗದೆಯನ್ನು ತೆಗೆದುಕೊಂಡು) ಈಗ ನನ್ನ ಆಘಾತವನ್ನು ಸಹಿಸು, ಕೌರವ.

(ಗಧಾಘಾತ, ದುರ್ಯೋಧನನ ಕೈಯಿಂದ ಗದೆಯು ಕಳಚಿ ಬೀಳುವುದು: ದುರ್ಯೋಧನನು ಪುನಃ ಅದನ್ನು ತೆಗೆದುಕೊಂಡು ಭೀಮನನ್ನು ಹೊಡೆಯುವನು. ಭೀಮನು ಕೆಳಗೆ ಬೀಳುವನು.)

ಯುಧಿ : ಭೀಮನನ್ನು ರಕ್ಷಿಸು ವಾಸುದೇವ.

ಕೃಷ್ಣ : ಸ್ವಲ್ಪಹೊತ್ತು ಸುಮ್ಮನಿರು, ಧರ್ಮರಾಜ.

ದುರ್ಯೋಧನ : ಕ್ಷಣಕಾಲ ವಿಶ್ರಾಂತಿಯನ್ನು ಹೊಂದು, ಭೀಮ.

ಭೀಮ : ವಿಶ್ರಾಂತಿಯು ಅಗತ್ಯವಿಲ್ಲ. ಇದೋ ಸಿದ್ಧನಾಗಿರುವೆನು.

(ದುರ್ಯೋಧನನ ಗದಾಘಾತ, ಪುನಃ ಭೀಮನ ಸೋಲು)

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣ : ಭಾಪು ! ದುರ್ಯೋಧನ !..... ನಿರಾಶನಾಗಬೇಡ ಭೀಮ. ತೊಡೆ ತಟ್ಟಿ ಶೌರ್ಯದಿಂದ ಕಾಳಗಮಾಡು.

ಭೀಮ : (ಎದ್ದು ಗದೆಯನ್ನು ತೆಗೆದುಕೊಂಡು) ಈಗ ನೆನಪಿಗೆ ಬಂದಿತು. ಸಿದ್ಧನಾಗು ಕೌರವ. ಈ ಸಾರಿ ಭೀಮಸೇನನ ಆಘಾತವು ವ್ಯರ್ಥ ವಾಗುವುದಿಲ್ಲ. (ಭೀಮನು ದುರ್ಯೋಧನನ ತೊಡೆಗೆ ಗದೆಯಿಂದ ಹೊಡೆಯುವನು. ದುರ್ಯೋಧನನ ಪತನ)

ದುರ್ಯೋಧನ : ಅತ್ಯಾಚಾರ ! ಅತ್ಯಾಚಾರ ! ಭೀಮನು ಯುದ್ಧ ನಿಯಮವನ್ನು ಅತಿಕ್ರಮಿಸಿದನು.

ಬಲರಾಮ : ಅತ್ಯಾಚಾರ ! ದುರ್ಯೋಧನನು ನನ್ನ ಶಿಷ್ಯನು ; ಅಧರ್ಮ ಯುದ್ಧದಲ್ಲಿ ಬಿದ್ದನು. ಜಾಗ್ರತವಾಗು, ಹಲಾಯುಧನೇ. ಕೃಷ್ಣ ನಿನ್ನ ಸಮ್ಮುಖದಲ್ಲಿ ಭೀಮನ ವಧೆ ಮಾಡುವೆನು.

ಕೃಷ್ಣ : ಈ ವ್ಯರ್ಥ ಕೋಪವೇಕೆ, ಅಣ್ಣ ! ಏಕವಸ್ತ್ರಧಾರಿಣಿಯಾದ ದ್ರೌಪದಿಯನ್ನು ತುಂಬಿದ ರಾಜಸಭೆಯಲ್ಲಿ ಅಪಮಾನಗೊಳಿಸಿ ದುರ್ಯೋಧನನು ತೊಡೆತಟ್ಟಿದಾಗ, ಆ ತೊಡೆಯನ್ನು ಮುರಿಯುವು ದಾಗಿ ಭೀಮನು ಪ್ರತಿಜ್ಞೆಮಾಡಿದ್ದನು. ವೀರ ಕ್ಷತ್ರಿಯನಂತೆ ಇಂದು ಆ ಪ್ರತಿಜ್ಞೆಯನ್ನು ನೆರವೇರಿಸಿದನು. ಪಾಪದ ಪ್ರಾಯಶ್ಚಿತ್ತವಾಯಿತು. ಇದಕ್ಕಾಗಿ ನೀನು ಕೋಪಿಸುವುದು ಉಚಿತವಲ್ಲ, ಅಣ್ಣ.

ಬಲರಾಮ : ಏನೇ ಆದರೂ ಈ ಅಧರ್ಮವು, ಈ ಅತ್ಯಾಚಾರವು ನಿನ್ನ ಜೀವನದ ಕಲಂಕವಾಗಿ ಉಳಿಯುವುದು, ಕೃಷ್ಣ. ಇನ್ನು ನನಗಿಲ್ಲಿ ಒಂದು ಕ್ಷಣವೂ ನಿಲ್ಲುವ ಇಚ್ಛೆಯಿಲ್ಲ. ದುರ್ಯೋಧನ, ನನ್ನ ಪ್ರಿಯ ಶಿಷ್ಯ, ಧನ್ಯನು ನೀನು. ವೀರಸ್ವರ್ಗವನ್ನು ಹೊಂದಿ ಯಶಸ್ವಿಯಾಗು.

(ಹೋಗುವನು)

(ದುರ್ಯೋಧನನು ಮೂರ್ಛೆಯಿಂದೆಚ್ಚರಗೊಳ್ಳುವನು)

ದುರ್ಯೋಧನ : ಯಾರು ನೀನು ? ಯುಧಿಷ್ಠಿರನೇ ? ಕ್ಷತ್ರಿಯ ಧರ್ಮ ವನ್ನು ಪಾಲನಮಾಡಿದೆನು. ಸಸಾಗರ ಪೃಥ್ವಿಯನ್ನು ಲೀಲಾಮಾತ್ರ ದಿಂದ ಶಾಸನ ಮಾಡಿದೆನು. ಅನೇಕ ದಾನಧರ್ಮಗಳನ್ನು, ಯಾಗ ಯಜ್ಞಗಳನ್ನು ಮಾಡಿದೆನು. ಜಗತ್ತಿನ ರಾಜಾಧಿರಾಜರಲ್ಲಿ, ವೀರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮೂಹದಲ್ಲಿ ಅಗ್ರನೆಂದು ಗಣ್ಯನಾದೆನು. ಮುಂದೆ ನನ್ನ ವಿಯೋಗದಿಂದ ವಿಧವೆಯಾದ ಭೂಮಿಯನ್ನು ತೆಗೆದುಕೊಂಡು ನೀನು ರಾಜ್ಯವಾಳು, ಯುಧಿಷ್ಠಿರ. (ಕಣ್ಣುಗಳನ್ನು ಮುಚ್ಚಿಕೊಳ್ಳುವನು)

(ಕೃಷ್ಣನ ಹೊರತಾಗಿ ಉಳಿದವರೆಲ್ಲರೂ ಹೊರಟುಹೋಗುವರು.)

ಕೃಷ್ಣ : ಸುಯೋಧನ, ಕೌರವೇಶ್ವರ !

ದುರ್ಯೋಧನ : (ಎಚ್ಚತ್ತು) ಯಾರು ನೀನು ?–ತಿಳಿಯಿತು, ತಿಳಿಯಿತು. ವಂಚಕಿ, ಮಾಯಾವಿ, ಧೂರ್ತ ಕೃಷ್ಣನು ನೀನು–ನನ್ನ ಸಂಕಟವನ್ನು ನೋಡುವ ಸಲುವಾಗಿ ನಿಂತಿರುವೆಯೋ ? ನಿಲ್ಲು, ನಿಲ್ಲು. ಮರೆಯಬೇಡ, ಕುರುಕ್ಷೇತ್ರದ ಜನ್ಮಮೃತ್ಯುವಿಗೆ, ಸೃಷ್ಟಿ ಸಂಹಾರಕ್ಕೆ ನೀನು ಕಾರಣನು. ಆದರೆ ದುರ್ಯೋಧನನಂತಹ ಒಂದು ಕ್ಷುದ್ರ ಕೀಟದ ವಿನಾಶಕ್ಕಾಗಿ ಇಷ್ಟೊಂದು ಮಹತ್ ಪ್ರಯತ್ನವೇಕೆ, ಕೃಷ್ಣ ?

ಕೃಷ್ಣ : ನೀನು ಕ್ಷುದ್ರನೆ ! ಏಕಮಾತ್ರ ಸಂಕಲ್ಪದಿಂದ ಉಜ್ಜೀವಿತನಾಗಿ ರಣಭೂಮಿಯಲ್ಲಿ ಸರ್ವಸ್ವವನ್ನೂ ತ್ಯಾಗಮಾಡಿದ ವೀರಕ್ಷತ್ರಿಯನು ನೀನು. ಹನ್ನೊಂದು ಅಕ್ಷೌಹಿಣೀ ಕೌರವ ಸೈನ್ಯ, ಭೀಷ್ಮ, ದ್ರೋಣ, ಕರ್ಣಾದಿ ಮಹಾಪುರುಷರು, ನಿನಗಾಗಿ ಯುದ್ಧಮಾಡಿ ಪ್ರಾಣಗಳನ್ನು ತ್ಯಜಿಸಿದರು. ಇಂತಹ ನೀನು ಕ್ಷುದ್ರನಾಗಬಲ್ಲೆಯ, ಸುಯೋಧನ ? ನೀನು ಪಾಂಡವರ ಶತೃವಾದರೂ ನನಗೆ ಪ್ರಿಯನು. ನಿನ್ನನ್ನು ಮಿತ್ರನೆಂದು ಆಲಂಗಿಸಲು ನಾನು ಅಪೇಕ್ಷಿಸಿದೆನು. ಹಸ್ತಿನಾವತಿಯ ರತ್ನಸಿಂಹಾಸನದಲ್ಲಿ ನಿನ್ನೊಡನೆ ಯುಧಿಷ್ಠಿರನೂ ಕುಳಿತುಕೊಳ್ಳಬೇಕೆಂದು ನನ್ನಿಚ್ಛೆಯಾಗಿದ್ದಿತು. ಆದರೆ ನೀನು ಸಂಧಾನಕ್ಕೊಡಂಬಡಲಿಲ್ಲ. ದಾನವ ವಿಜಯಿಯಾದ ಕೃಷ್ಣನು ನಿನ್ನಲ್ಲಿ ಶಾಂತಿ ಭಿಕ್ಷೆಯನ್ನು ಬೇಡಿ ನಿರಾಶನಾಗಿ ಹಿಂದಿರುಗಬೇಕಾಯಿತು. ಕಳೆದು ಹೋದುದಕ್ಕಾಗಿ ನಾನು ನಿಂದಿಸುವುದಿಲ್ಲ, ಪ್ರಿಯ ಬಂಧು. ಈಗ ನೋಡಲಾಗಿ ನನ್ನ ಮಿತ್ರನೆನಿಸಿ, ಪಾಂಡವರ ಬಂಧುವೆನಿಸಿ ನೀನು ಪಡೆಯಬಹುದಾಗಿದ್ದ ಗೌರವಕ್ಕಿಂತ, ಕುರುಕ್ಷೇತ್ರದಲ್ಲಿ ನನ್ನ ಪ್ರತಿಕಕ್ಷಿಯಾಗಿ ನೀನು ಸಂಪಾದಿಸಿದ ಗೌರವವು ಮಹತ್ವದ್ದೆಂದು ಬೋಧೆಯಾಗುವುದು. ಈಗ ನಾನು ತಿಳಿಯುವೆನು, ಕೃಷ್ಣನ ಅವತಾರವು ಗೋಪಿಯರ ಉದ್ಧಾರಕ್ಕಾಗಿ ಅಲ್ಲ, ಕಂಸ ಶಿಶುಪಾಲಾದಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದಾನವರ ವಿನಾಶಾರ್ಥವಾಗಲ್ಲ, ಕುರುಕ್ಷೇತ್ರದ ಮಹಾಯುದ್ಧದ ಕರ್ಮ ಸೂತ್ರವನ್ನು ಕೈಯಲ್ಲಿ ಧರಿಸಿ ಜಗತ್ತಿಗೆ ವಿರಾಟ್ ಆಂದೋಳನದ, ಅಸೀಮ ಸಾಹಸದ, ಅಪೂರ್ವ ಯುದ್ಧದ ಹೊಸ ಆದರ್ಶವೊಂದನ್ನು ತೋರಿಸುವ ಸಲುವಾಗಿ. ನನ್ನ ಅಪೇಕ್ಷೆಗೆ ವಿರುದ್ಧವಾಗಿ, ನನ್ನ ಅವತಾರದ ಈ ಉದ್ದೇಶವನ್ನು ನೀನು ಸಾರ್ಥಕ ಮಾಡಿದೆ. ಅದಕ್ಕಾಗಿ ನಾನು ಕಣ್ಣೀರು ಸುರಿಸುತ್ತಿರುವೆನು,—ಕೃಷ್ಣನ ಸಾಹಸವದನವು ಇಂದು ನಿನಗೋಸ್ಕರ ಮೊದಲನೆಯ ಸಾರಿ ಚಿಂತೆಯಿಂದ ಮ್ಲಾನವಾಗಿ ರುವುದು. ಧನ್ಯನು ನೀನು ಕೌರವೇಶ್ವರ !

ದುರ್ಯೋಧನ : ಇದು ನಿಜವೇ ? ಇಲ್ಲ, ಇಲ್ಲ. ನೀನು ಮಾಯಾವಿ. ನಿನ್ನ ಮಾತನ್ನು ನಾನು ನಂಬುವುದಿಲ್ಲ.

ಕೃಷ್ಣ : ನಂಬು, ದುರ್ಯೋಧನ. ಭಾರತವರ್ಷದ ಚರಿತ್ರಾಕಾಶದಲ್ಲಿ ಭೀಮಾರ್ಜುನ ಯುಧಿಷ್ಠಿರರು ಸಾಮಾನ್ಯ ಗ್ರಹಗಳಂತೆ ಚಲವಿಚಲಿತ ರಾಗಿ ಅನಿಶ್ಚಿತ ಕಾಂತಿಯಿಂದ ಬೆಳಗುವರು. ಆದರೆ ನೀನು ನವ ಜನಾಂಗದ ನವ ಹೃದಯದಲ್ಲಿ ಸ್ವಾಭಿಮಾನದ ಒಂದು ಚಿರ ನೂತನ ಆದರ್ಶವನ್ನು ತಂದಿಟ್ಟು, ಧ್ರುವತಾರೆಯಂತೆ ಅವಿಚಲಿತನಾಗಿ ನಿಶ್ಚಿತ ಕಾಂತಿಯಿಂದ ಬೆಳಗುವೆ.

ದುರ್ಯೋಧನ : ಹಾಗಾದರೆ ನನ್ನ ಜನ್ಮ ಸಾರ್ಥಕವಾಯಿತು ! ಆದರೀ ಪರಾಜಯ.....

ಕೃಷ್ಣ : ನಿಶ್ಚಿಂತನಾಗು, ಕುರುರಾಜ. ಇದು ನಿನ್ನ ಪರಾಜಯವಲ್ಲ, ವಿಜಯ; ಪತನವಲ್ಲ, ಉತ್ಥಾನ.

ದುರ್ಯೋಧನ : ದೇವಿಯ ಪೂಜೆಯು ಸಾಂಗವಾಯಿತು. ಇನ್ನು ನೀನು ಹೋಗು, ವಾಸುದೇವ ! ನಾನು ನಿದ್ರೆ ಮಾಡುವೆನು. ಮತ್ತೆ ನನಗೆ ನಿದ್ರಾಭಂಗವಾದಾಗ ಸ್ವರ್ಗದ ದೇವತೆಗಳು ವಿಜಯಗೀತವನ್ನು ಹಾಡುತ್ತಾ ನನ್ನನ್ನು ಎದುರುಗೊಳ್ಳುವರು.

ಕೃಷ್ಣ : ನಿನ್ನ ಅಭೀಷ್ಟವು ಸಫಲವಾಗಲಿ. (ನಿಷ್ಕ್ರಾಂತ)

ದುರ್ಯೋಧನ : ಹಾ ! ಈಶ್ವರ ! ನರನಾಡಿಗಳಲ್ಲಿ ರಕ್ತವು ಕುದಿಯುತ್ತಿರು ವುದು. ಆದರೆ ನನ್ನ [illegible] ಇನ್ನೂ ಮುಗಿದಿಲ್ಲ. ಆದರೇನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡುವುದು ? ಮೇಲೇಳುವ ಶಕ್ತಿಯಿಲ್ಲ. ಸಸಾಗರ ಪೃಥ್ವಿಯನ್ನು ಶಾಸನ ಮಾಡಿದ ಚಕ್ರವರ್ತಿಯು ನಾನು. ಆದರೀಗ ಸಹಾಯಕ್ಕೆ ಸಮೀಪದಲ್ಲಿ ಯಾರೂ ಇಲ್ಲ.

(ಅಶ್ವತ್ಥಾಮ ಕೃತವರ್ಮಾದಿಗಳು ಪ್ರವೇಶಿಸುವರು)

ಅಶ್ವತ್ಥಾಮ : ಇರುವರು, ಕುರುರಾಜ. ಅಶ್ವತ್ಥಾಮನು ಜೀವಿಸಿರುವನು. ಕೃತವರ್ಮ ಕೃಪಾಚಾರ್ಯರು ಪ್ರಾಣದಿಂದಿರುವರು.

(ದುರ್ಯೋಧನನ ಸೇವೆ ಮಾಡುವರು)

ದುರ್ಯೋಧನ : ಇದೇನು ಕನಸೇ, ದೇವ ! ಸಮಾಧಿಗರ್ಭದಿಂದ ಜೀವಿತ ರಾಗಿ ಬಂದವರಂತೆ ನೀವೆಲ್ಲರೂ ಎಲ್ಲಿಂದ ಬಂದಿರಿ ? ಅಶ್ವತ್ಥಾಮ, ನೀನು ನಿಜವಾಗಿ ಗುರುಪುತ್ರನೇ ? ಹಾಗಿದ್ದರೆ ದುರ್ಯೋಧನನು ಈ ಮಣ್ಣಿನಲ್ಲಿ ಉರುಳಾಡಲೇಕೆ ?

ಅಶ್ವತ್ಥಾಮ : ನನ್ನನ್ನು ಸೇನಾಪತಿಯನ್ನಾಗಿ ಮಾಡು, ಮಹಾರಾಜ. ಕುರು ವಂಶದ ಭಗ್ನಕೀರ್ತಿಯನ್ನು ಪುನಃ ಸಂಘಟಿತವಾಗಿ ಮಾಡುವೆನು. ನಾಳಿನ ಪ್ರಾತಃಕಾಲದೊಳಗಾಗಿ ಪಾಂಡವರ ಛಿನ್ನ ರುಂಡಗಳನ್ನು ನಿನ್ನ ಚರಣತಲದಲ್ಲಿ ತಂದುಹಾಕುವೆನು.

ದುರ್ಯೋಧನ : ಪುನಃ ಯುದ್ಧದ ಮಾತು. ಕ್ಷಣಕಾಲ ಎಲ್ಲವೂ ಮುಗಿಯಿತೆಂದು ಭಾವಿಸಿದ್ದೆನು.....(ಚಿಂತಿಸಿ) ಆಗಕೂಡದೇಕೆ ? ರಣದುಂದುಭಿಯು ಮತ್ತೆ ಜಾಗರಿತವಾಗಲಿ....ಹೋಗು ಕೃತವರ್ಮ ನೀರನ್ನು ತೆಗೆದುಕೊಂಡು ಬಾ. (ಕೃತವರ್ಮನು ಹೋಗುವನು, ಗುರು ಪುತ್ರ, ನೀನು ಪಾಂಡವರನ್ನು ವಧಿಸಬಲ್ಲೆಯಾದರೆ....

ಅಶ್ವತ್ಥಾಮ : ದ್ರೋಣಪುತ್ರನಾದ ಅಶ್ವತ್ಥಾಮನು ಚಿರಂಜೀವಿ. ನನಗೆ ಮರಣದ ಭಯವಿಲ್ಲ, ಮಹಾರಾಜ. ಪಾಂಡವರ ಛಿನ್ನ ರುಂಡಗಳನ್ನು ತಂದು ನಿನಗೊಪ್ಪಿಸುವೆನು. (ಕೃತವರ್ಮನು ನೀರನ್ನು ತರುವನು.)

ದುರ್ಯೋಧನ : ನನ್ನನ್ನು ಎತ್ತಿಹಿಡಿ, ಕೃಪಾಚಾರ್ಯ. ಎಲ್ಲಿ ನೀರು ?— ಕೈತುಂಬ ನೀರು ಹಾಕಿರಿ.—ಅಶ್ವತ್ಥಾಮ, ಇದೋ ನಿನ್ನ ಅಭಿಷೇಕ. ಭಾರತ ಯುದ್ಧದ ಬೆಂಕಿಯನ್ನು ಪುನಃ ಉರಿಮಾಡು.

Sri Vidyabharathi Book Centre, Sringeri

(ಅಶ್ವತ್ಥಾಮನ ತಲೆಯ ಮೇಲೆ ನೀರು ಹಾಕುವನು)

CC-O. In Public Domain. Digitized by eGangotri

ಅಶ್ವತ್ಥಾಮ : ನೋಡು ಕೌರವೇಶ್ವರ, ಭೂಮಿಯು ಅಂಧಃಕಾರದಲ್ಲಿ ಮುಳುಗಿರುವುದು. ಪಾಂಡವರ ವಿಜಯ ಗೌರವವೂ ಅದರಂತೆ ಮುಳುಗುವುದು. ನಾನು ಈ ದಿನ ಮಾಡುವ ಹತ್ಯೆಯಿಂದ ಭೂಮಿಯು ಭಯದಿಂದ ಕಂಪಿತವಾಗುವುದು. ಆಕಾಶದಿಂದ ನಕ್ಷತ್ರಗಳು ಭೂಮಿ ಗುರುಳುವುವು ; ಮತ್ತು ನಾನು ಆ ಪ್ರಳಯದ ಭೀಷಣ ರಕ್ತಾ ಲೋಕದಲ್ಲಿ ಪಾಂಡವರ ಶಿರಗಳನ್ನು ಛೇದಿಸಿ ನಿನ್ನ ಪದಪ್ರಾಂತದಲ್ಲಿ ತಂದು ಹಾಕುವೆನು.

ದುರ್ಯೋಧನ : ಹೋಗು, ವೀರ. ಜಯಶಾಲಿಯಾಗಿ ಹಿಂತಿರುಗು. ನೀನು ಪುನಃ ಬರುವವರೆಗೂ ದುರ್ಯೋಧನನು ಪ್ರಾಣಧಾರಣ ಮಾಡುವನು. (ಅಶ್ವತ್ಥಾಮಾದಿಗಳು ಹೋಗುವರು)

(ರಂಗವು ಅಂಧಕಾರವಾಗುವುದು ; ಪುನಃ ಕ್ರಮವಾಗಿ ಪ್ರಕಾಶಮಯವಾದಾಗ ಗಾಂಧಾರಿಯು ಮೂರ್ಛಿತನಾದ ದುರ್ಯೋಧನನನ್ನು ತೊಡೆಯ ಮೇಲೆ ಮಲಗಿಸಿ ಕೊಂಡು ಶುಶ್ರೂಷೆ ಮಾಡುತ್ತಿರುವಳು)

ದುರ್ಯೋಧನ : (ಸ್ವಲ್ಪ ಹೊತ್ತಿನ ತರುವಾಯ ಎಚ್ಚರಗೊಂಡು) ಪುನಃ ನಿದ್ರಾಭಂಗ ! ನನ್ನ ಸಂತಪ್ತ ಆತ್ಮವು ಭಂಗವಿಲ್ಲದ ಚಿರಶಾಂತಿಯನ್ನು ಹೊಂದಲು ತವಕಿಸುತ್ತಿರುವುದು. ಮಾನವನು ಮುರುಕು ಮನೆಯನ್ನು ತ್ಯಜಿಸುವಂತೆ ಈ ಭಗ್ನ ಕಳೇಬರವನ್ನು ತ್ಯಜಿಸಿ, ಸೃಷ್ಟಿಯ ಅನಂತಾ ಕಾಶದಲ್ಲಿ ಆನಂದದಿಂದ ಅಲೆದಾಡಲಪೇಕ್ಷಿಸುವುದು. ನಾನದನ್ನು ಬಲಾತ್ಕಾರದಿಂದ ಕ್ಷಣಕಾಲ ಬಂಧಿಸಿರುವೆನು. ಅದರ ಸಲುವಾಗಿಯೇ ಇಷ್ಟೊಂದು ಸಂತಾಪ, ಇಷ್ಟೊಂದು ಚಿಂತೆ ಮತ್ತು ಇಷ್ಟೊಂದು ಆತಂಕವೆಂದು ತೋರುವುದು. ದುರ್ಯೋಧನನ ಆತ್ಮಕ್ಕಾವ ಚ್ಯುತಿಯೂ ಇಲ್ಲ....ಸ್ವಾಭಿಮಾನದ ವಜ್ರಕವಚದಿಂದ ಪರಿವೇಷ್ಟಿತ ನಾದ ವೀರ ಕ್ಷತ್ರಿಯನ ಆತ್ಮವು ಅಪಮಾನದ ಹೊರತಾಗಿ ಮತ್ತಾವುದ ರಿಂದಲೂ ವಿಚಲಿತವಾಗುವುದಿಲ್ಲ. ಮಾತೆ, ವಸುಂಧರೆ, ಇಂದು ನಿನ್ನ ಸ್ಪರ್ಶವು ಎಷ್ಟೊಂದು ಕೋಮಲ. ಅನೇಕ ಸಾರಿ ಬರಿಯ ನೆಲದ ಮೇಲೆ ಮಲಗಿರುವೆನು. ಚಿಕ್ಕಂದಿನಲ್ಲಿ ಆಡುತ್ತಾ ಎಷ್ಟೋ ಸಾರಿ ನಿನ್ನ ಮೈಮೇಲೆ ಉರುಳಾಡಿರುವೆನು. ಈ ಕೋಮಲತೆ ಆಗೆಲ್ಲಿ ಹೋಗಿತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಿ ? ತಾಯಿ, ತಾಯಿ, (ಕೈಯಿಂದ ತೊಡೆಗಳನ್ನು ಸ್ಪರ್ಶಿಸಿ) ಏನು! ಏನು ! ಇದು ಕಠಿಣವಾದ ನೆಲವಲ್ಲ. ಯಾರೋ ಹೆಂಗಸಿನ ದೇಹ ! ಯಾರು ? ಯಾರು ? ನೀನೇನು ದ್ರೌಪದಿಯೇ ? ನನ್ನನ್ನು ತೊಡೆಯ ಮೇಲಿಟ್ಟುಕೊಂಡೇನು ಮಾಡುತ್ತಿರುವೆ, ರಾಜಪುತ್ರಿ ? ನೃಸಿಂಹನಂತೆ ನನ್ನ ವಕ್ಷವನ್ನು ಭೇದಿಸುವೆಯಾ ? ನಾನು ಪಾಪಿ. ತುಂಬಿದ ರಾಜ ಸಭೆಯಲ್ಲಿ ನಿನ್ನನ್ನು ಅಪಮಾನಗೊಳಿಸಿದೆನು. ನಿನ್ನ ಮಾತೃತ್ವದ ಗೌರವವನ್ನು ಭಂಗಪಡಿಸಲಿಚ್ಛಿಸಿದೆನು. ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ. ಭೇದಿಸು, ಭೇದಿಸು, ನನ್ನ ವಕ್ಷಸ್ಥಲವನ್ನು ಭೇದಿಸು. ತಾಯಿ, ನನ್ನ ಹೃದಯುದ ಪಾಪಪ್ರವೃತ್ತಿಗಳೆಲ್ಲವನ್ನೂ ಒಂದೊಂದಾಗಿ ಹೊರಗೆ ತೆಗೆದು ಹಾಕು. ಜೀವನದ ಕೊನೆಯ ಮುಹೂರ್ತದಲ್ಲಿ ದುರ್ಯೋಧನನ ಆತ್ಮವು ಪುಟವಿಟ್ಟ ಚಿನ್ನದಂತೆ ಬೆಳಗಲಿ. ಇದೇನು ? ಇಷ್ಟೊಂದು ನೀರು ಎಲ್ಲಿಂದ ಬೀಳುತ್ತಿರುವುದು ? ಅಳುವೆಯಾ, ಪಾಂಚಾಲಿ— (ಮುಖದ ಮೇಲೆ ಬಿದ್ದ ಕಣ್ಣೀರನ್ನೊರೆಸುತ್ತಾ ಚಮಕಿತನಾಗಿ) ಇದು ಕಣ್ಣೀರಲ್ಲ ! ತಪ್ತಲೋಹ ! ನಿನ್ನ ಇಷ್ಟೊಂದು ದುಃಖಕ್ಕೆ ನಾನು ಕಾರಣನಾದೆನೇ ? ಕ್ಷಮಿಸು, ಕ್ಷಮಿಸು, ತಾಯಿ.

(ಮತ್ತೆ ಮೂರ್ಛೆ ಹೋಗುವನು)

ಗಾಂಧಾರಿ : ದುರ್ಯೋಧನ ! ದುರ್ಯೋಧನ ! ಕುಮಾರ ! ನಾನು ದ್ರೌಪದಿಯಲ್ಲ. ನಿನ್ನ ತಾಯಿ. ಇಂದು ನನ್ನ ಕಣ್ಣುಗಳಿಂದ ರಕ್ತವು ಸುರಿಯುತ್ತಿರುವುದು, ಮಗು !

ದುರ್ಯೋಧನ : (ಎದ್ದು) ನೀನು ನನ್ನ ತಾಯಿ !.....ಗಾಂ.....ಧಾ.....ರಿ !

ಗಾಂಧಾರಿ : ಹೌದು, ಪುತ್ರ. ಏಕೆ, ಗುರುತಾಗಲಿಲ್ಲವೆ ?

ದುರ್ಯೋಧನ : ತಾಯಿಯ ಪ್ರೇಮದಲ್ಲಿ ಎಂತಹ ಶಕ್ತಿಯಿರುವುದು ! ಈ ವಿಜನ ಪ್ರದೇಶದಲ್ಲಿ, ಈ ಅಂಧಃಕಾರದ ಮಧ್ಯದಲ್ಲಿ ಮಲಗಿ ನಾನು ಭಾವಿಸಿದೆನು—ಪ್ರಪಂಚವು ನನ್ನನ್ನು ಮರೆಯಿತೆಂದು, ಕುರುಕ್ಷೇತ್ರದ ಈ ಮೂಲೆಯಲ್ಲಿ ನನ್ನನ್ನಾರೂ ಹುಡುಕುವುದಿಲ್ಲವೆಂದು. ಆದರೆ ನೀನು ಬಂದೆ, ತಾಯಿ. ವಿದುರನು ಬರಲಿಲ್ಲ, ನೀನು ಬಂದೆ. ಸಂಜಯನು ಬರಲಿಲ್ಲ, ನೀನು ಬಂದೆ. ಭಾನುಮತಿಯು ಬರಲಿಲ್ಲ, ನೀನು ಬಂದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂಧುಗಳ ಕರ್ತವ್ಯಕ್ಕಿಂತ, ತಂದೆಯ ಅಭಿಮಾನಕ್ಕಿಂತ, ಸತಿಯ ಶೀಲಕ್ಕಿಂತ, ಮಾತೃಹೃದಯದ ಪವಿತ್ರ ಪ್ರೇಮವು ಹೆಚ್ಚು ಶಕ್ತಿಯುಳ್ಳದ್ದೆಂಬುದನ್ನು ತೋರಿಸಿದೆ. ತಾಯಿಯ ಪ್ರೇಮವು ಸ್ವರ್ಗದ ವಸ್ತು. ಅದು ಮರ್ತ್ಯಲೋಕದಲ್ಲಿ ಅಮರತ್ವದ ಬೆಳಗನ್ನು ಬೀರುವುದು.

ಗಾಂಧಾರಿ : ಉದ್ವಿಗ್ನನಾಗಬೇಡ, ಪುತ್ರ. ಪುನಃ ಮೂರ್ಛೆ ಹೋಗುವೆ.

(ಪುನಃ ಮೂರ್ಛೆ, ಪುನಃ ಶುಶ್ರೂಷೆ)

ದುರ್ಯೋಧನ : (ಪುನಃ ಕಣ್ಣು ತೆರೆದು) ಅಮ್ಮ ! ಎಂಥಹ ಸಾಹಸವನ್ನು ಮಾಡಿದೆಯೋ ನೀನು ! ಓ....(ರೋಧನ)

ಗಾಂಧಾರಿ : ಈ ಕಣ್ಣೀರೇಕೆ, ಕುಮಾರ ? ನಿನ್ನನ್ನು ಇಂದ್ರನ ವಜ್ರಾಯುಧಕ್ಕಿಂತ ಕಠಿಣವಾಗೆಂದು ಹರಸಿದೆನು. ದೃಢಸಂಕಲ್ಪದಿಂದ ನಿನ್ನ ವಿಜಯವನ್ನು ಸಂಕಲ್ಪಿಸಿದೆನು. ಆದರೂ ಈ ಪರಾಜಯ ; ತಾಯಿಯ ಆಶೀರ್ವಾದವು ಇಂದು ವ್ಯರ್ಥವಾಯಿತೆ ?

ದುರ್ಯೋಧನ : ವ್ಯರ್ಥವಾಗಲಿಲ್ಲ. ಯಾರಿಗೆ ಸಾಧ್ಯ ಅಷ್ಟೊಂದು ಅತ್ಯಾಚಾರ ! ತಾಯಿಯ ಆಶೀರ್ವಾದವನ್ನು ವ್ಯರ್ಥಮಾಡುವ ಶಕ್ತಿಯು ದೇವತೆಗಳಿಗೂ ಕೂಡ ಇರುವುದಿಲ್ಲ. ನನ್ನ ಮಸ್ತಕವನ್ನು ಕೈಯಿಂದ ಮುಟ್ಟಿನೋಡು, ತಾಯಿ. ಎಂದಿನಂತೆ ಭದ್ರವಾಗಿರುವುದು. ಇದೋ ನನ್ನ ವಿಶಾಲವಾದ ಭುಜಗಳು, ತೋಳುಗಳು, ಈಗಲೂ ಈ ದೃಢ ಮುಷ್ಟಿಯ ಒಂದು ಆಘಾತದಿಂದ ಮದ್ದಾನೆಯನ್ನೆದುರಿಸಬಲ್ಲೆನು. ಕವಚದಿಂದ ಸುರಕ್ಷಿತವಾದ ನನ್ನ ಎದೆ—ಅದನ್ನು ಭೇದಿಸಬಲ್ಲವರಾರು ? ಆದರೆ ನನ್ನ ತೊಡೆ ! ರಾಜಸಭೆಯಲ್ಲಿ ದ್ರೌಪದಿಗೆ ತಟ್ಟಿ ತೋರಿಸಿದ ಈ ನನ್ನ ತೊಡೆ ! ಭೀಮನ ಗದೆಯ ಒಂದೇ ಏಟಿನಿಂದ ಅದು ಭಗ್ನವಾಯಿತು. ಯಾರಿಗೆ ಸಾಧ್ಯ ತಾಯಿಯ ಆಶೀರ್ವಾದವನ್ನು ವ್ಯರ್ಥ ಮಾಡಲು ? ತಾಯಿಯು ಮೋಕ್ಷ, ತಾಯಿಯು ದೇವತೆ. ವಿಶ್ವ ಜಗತ್ತಿನ ನಿವಾಸಿಗಳೇ, ಕೇಳಿರಿ, ನನ್ನ ವಾಕ್ಕನ್ನು. ದೇವತೆಯನ್ನಾದರೂ ವಂಚಿಸಬಹುದು, ತಾಯಿಯನ್ನು ವಂಚಿಸಬೇಡಿರಿ.

(ಅಶ್ವತ್ಥಾಮ ಕೃತವರ್ಮಾದಿಗಳ ಪ್ರವೇಶ)

ಅಶ್ವತ್ಥಾಮ : ಮಹಾರಾಜ, ಮಹಾರಾಜ ! ಎಲ್ಲಿರುವೆ ? ನನ್ನ ಶಪಥ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನೀಡೇರಿಸಿದೆನು, ಪ್ರಭು.

ದುರ್ಯೋಧನ : ಬಾ ಗುರುಪುತ್ರ, ಧ್ವನಿಯನ್ನು ಹಿಡಿದು ಬಾ. ನಾನಿಲ್ಲಿ ಮಲಗಿರುವೆನು, ಏಳುವ ತ್ರಾಣವಿಲ್ಲ.

ಅಶ್ವತ್ಥಾಮ : ಪಂಚಪಾಂಡವರ ಭಿನ್ನ ರುಂಡಗಳನ್ನು ತಂದಿರುವೆನು, ಮಹಾರಾಜ. ನಿನ್ನ ಪ್ರತಿರೋಧವು ಪೂರ್ಣವಾಯಿತು.

ದುರ್ಯೋಧನ : ಇದು ಕುರುಕ್ಷೇತ್ರದ ಅವಸಾನ. ನನ್ನ ಪ್ರತಿಶೋಧದ ಆಸೆಯು ಈ ದಿನ ಮುಗಿಯಿತು. ಎಲ್ಲಿ ಕೊಡು, ಕೊಡು, ಭೀಮನ ರುಂಡವನ್ನು ನನಗೆ ಕೊಡು.

ಅಶ್ವತ್ಥಾಮ : ಎಲ್ಲವನ್ನೂ ತೆಗೆದುಕೊ, ಮಹಾರಾಜ. ಐದು ಜನವೂ ಒಂದೇ ಮನೆಯಲ್ಲಿ ಮಲಗಿದ್ದರು, ಒಂದೇ ಏಟಿಗೆ ಸಂಹಾರಮಾಡಿದೆನು.

ದುರ್ಯೋಧನ : (ಕೆಳಗೆ ಹಾಕುವನು) ಇದೇನು ! ಇದೇನು ! ಇದು ಭೀಮನ ರುಂಡವೇ ? ಅಲ್ಲ, ಅಲ್ಲ. ಸಹಸ್ರ ಗದಾಘಾತದಿಂದಲೂ ಒಡೆಯದ ಭೀಮನ ಮಸ್ತಕವು ಕತ್ತಿಯ ಒಂದೇಟನಿಂದ ಸೀಳುವುದೆಂದರೇನು ? ಅಲ್ಲ, ಅಲ್ಲ. ಇದು ಭೀಮನ ರುಂಡವಲ್ಲ. ಅಶ್ವತ್ಥಾಮ, ಉಳಿದ ತಲೆಗಳನ್ನು ಕೊಡು. (ನೋಡಿ) ಏನು ಮಾಡಿದೆ ಗುರುಪುತ್ರ ! ಇವು ಪಾಂಡುನಂದನರ ತಲೆಗಳಲ್ಲ. ದ್ರೌಪದಿಯ ಮಕ್ಕಳಾದ ಉಪ ಪಾಂಡವರ ತಲೆಗಳು. ಆ ಮಕ್ಕಳನ್ನು ಕೊಂದೆಯ ಪಾಪಿ ! ಭರತ ವಂಶವನ್ನು ನಿರ್ಮೂಲವಾಗಿ ಮಾಡಿದೆಯ ? ಪಿಂಡಪ್ರದಾನಕ್ಕಾಗಿ ಒಬ್ಬರೂ ಉಳಿಯಲಿಲ್ಲವೇ ! ಹಾ ! ಈಶ್ವರ ! ಎಂತಹ ಅನರ್ಥ ಅತ್ಯಾಚಾರವಿದು ! ನನ್ನ ಹೃದಯವು ಒಡೆಯುತ್ತಿರುವುದು, ಒಡೆಯುತ್ತಿರುವುದು..... ತಾಯಿ, ಗಾಂಧಾರಿ.....ಹಾ ! ಈಶ್ವರ ! (ಮೃತ್ಯು)

ಅಶ್ವತ್ಥಾಮ : ದೀಪದ ನಿರ್ವಾಣವಾಯಿತು. ಮಹಾದೇವ ! ಪಾಂಡವರನ್ನು ಉದ್ಧಾರಮಾಡಿದೆ. ಆದರೀ ಶಿಶುಹತ್ಯದ, ಈ ಪಾಪದ ಪ್ರಾಯಶ್ಚಿತ್ತವನ್ನು ನಾನು ಮಾಡಿಕೊಳ್ಳಲೇಬೇಕು. ವಿಧಾತ ! ಚಿರಂಜೀವಿ ಅಶ್ವತ್ಥಾಮನ ಹಣೆಯಲ್ಲಿ ಆತ್ಮಹತ್ಯದ ಘೋರ ಚಿತ್ರವನ್ನು ಬರೆದೆಯಾ ? ಕೃತವರ್ಮ, ಕೃಪಾಚಾರ್ಯ, ಸೂರ್ಯನು ಉದಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಗುತ್ತಿರುವನು. ಜೀವದ ಮೇಲಾಸೆಯಿದ್ದರೆ ನೀವು ಈ ಸ್ಥಾನದಿಂದ ಕೂಡಲೇ ಹೊರಟುಹೋಗಿರಿ.

ಕೃಪಾಚಾರ್ಯ : ನಡೆ ಕೃತವರ್ಮ. (ಹೋಗುವರು)

ಗಾಂಧಾರಿ : ದುರ್ಯೋಧನ ! ದುರ್ಯೋಧನ ! ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ ಕುಮಾರ ? ಏಳು ಪುತ್ರ ! ನನ್ನ ಪ್ರಾಣಾಧಿಕ ! ಕೃಷ್ಣಾರ್ಜುನರು ಯುದ್ಧಕ್ಕೆ ಕರೆಯುತ್ತಿರುವರು, ಗದೆಯನ್ನು ತೆಗೆದುಕೊ. ಭೀಮ ನೊಡನೆ ಯುದ್ಧಮಾಡುವುದಿಲ್ಲವೆ ?.....ಎಲ್ಲಿ ದುರ್ಯೋಧನನು ! ಹಾ ! ಕುಮಾರ ! ಕುಮಾರ ! (ಮೂರ್ಛೆ)

ಅಶ್ವತ್ಥಾಮ : (ಕ್ರಮೇಣ ಸೂರ್ಯೋದಯವಾಗಿ ಬೆಳಕು ಹೆಚ್ಚುವುದು) ಸೂರ್ಯನು ಉದಯಿಸಿದನು. ಕರ್ಮಸಾಕ್ಷಿ, ಭಾಸ್ಕರ ! ಪ್ರಭಾತದ ಕೋಮಲ ಕಿರಣಗಳಿಂದ ಈ ಕುರುಕ್ಷೇತ್ರದ ಗಂಭೀರಾಂಧಃಕಾರವನ್ನು ಹರಣಮಾಡು. ಮಾತೃಪ್ರೇಮದ ಈ ಅಪೂರ್ವ ಆದರ್ಶವನ್ನು ಜಗ ತ್ತಿಗೆ ಬೆಳಗಿಸು.....ದೇವಿ ! ಗಾಂಧಾರಿ ! ಪ್ರೀತಿಯಲ್ಲಿ, ತ್ಯಾಗದಲ್ಲಿ ಧೈರ್ಯದಲ್ಲಿ, ಶಕ್ತಿಯಲ್ಲಿ, ಜಗತ್ತಿನ ತಾಯಿಯರಿಗೆ ಆದರ್ಶಸ್ವರೂಪಳು ನೀನು. ನಾನಿಂದು ನಿನ್ನ ಮಹಿಮೆಯ ಸಮ್ಮುಖದಲ್ಲಿ ಭಯಗ್ರಸ್ತನಾಗಿ ನಿಂತಿರುವೆನು. ನನ್ನ ಅಭಿವಾದನವನ್ನು ಸ್ವೀಕರಿಸು, ಜನನಿ. (ವಂದಿಸುವನು) (ಜವನಿಕಾ)

ದೃಶ್ಯ ೪ — ರಾಜಪ್ರಾಸಾದ

(ಧೃತರಾಷ್ಟ್ರ ಮತ್ತು ವಿದುರ)

ಧೃತರಾಷ್ಟ್ರ : ನನ್ನ ನೂರು ಜನ ಮಕ್ಕಳು ರಣಕ್ಷೇತ್ರದಲ್ಲಿ ಶತ್ರುಖಡ್ಗಕ್ಕೆ ಆಹುತಿಯಾದರು. ತುಂಬಿದ ರಾಜಧಾನಿಯು ಬರಿದಾಯಿತು. ಪತಿ, ಪುತ್ರರನ್ನು ಕಳೆದುಕೊಂಡ ವೀರ ಸ್ತ್ರೀಯರ ಚೀತ್ಕಾರವು ದಶದಿಕ್ಕು ಗಳನ್ನು ಭೇದಿಸುತ್ತಿದೆ. ಆದರೂ ನನ್ನ ಹೃದಯವು ಒಡೆಯಲಿಲ್ಲ. ಅದೇನು ಲೋಹದಿಂದ ನಿರ್ಮಿತವಾಗಿರುವುದೇ, ವಿದುರ ?

ವಿದುರ : ಸಮಾಧಾನ ಹೊಂದು, ರಾಜೇಂದ್ರ. ಯುದ್ಧಕ್ಕೆ ಪ್ರಾರಂಭಿಸಿ ದಾಗಲೇ ಹೀಗಾಗುವ ಸಂಭವವಿತ್ತು.

ಧೃತರಾಷ್ಟ್ರ : ಇಷ್ಟೊಂದು ಅಪರಾಧವನ್ನು ಮಾಡಿ ಈಗ ಪಾಂಡವರು ನನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ದರ್ಶನವನ್ನು ಅಪೇಕ್ಷಿಸುವರಲ್ಲವೆ ? ಹೊಂದುವರು. ಧೃತರಾಷ್ಟ್ರನ ತಪ್ತ ಹೃದಯದ ಆವೇಗವನ್ನು ಅವರಿಗೊಂದು ಸಾರಿ ತೋರಿಸುವೆನು.

ವಿದುರ : ಜಯ ಪರಾಜಯಗಳು ದೈವಾಯತ್ತ. ಅದರಲ್ಲಿ ಪಾಂಡವರ ಅಪರಾಧವೇನೂ ಇಲ್ಲ.

ಧೃತರಾಷ್ಟ್ರ : ಪಾಂಡವರು ! ಅವರ ಹೆಸರೆತ್ತಿದರೆ ನನ್ನ ರಕ್ತವು ಕುದಿಯ ತೊಡಗುವುದು. ಅವರು ಪಾಂಡುನಂದನರಲ್ಲ. ಧೃತರಾಷ್ಟ್ರನ ಜೀವನದ ಶಾಂತಿಯನ್ನು ನಾಶಮಾಡಿದ ಧೂಮಕೇತುಗಳವರು. ಭೀಮ ! ಮೋಸದಿಂದ ನನ್ನ ಪ್ರಿಯ ಸುಯೋಧನನನ್ನು ಕೊಂದ ಪಾಪಿ ! ಅವನೊಂದು ಸಾರಿ ನನ್ನ ಕೈಗೆ ಸಿಕ್ಕಲಿ....

(ಪಂಚಪಾಂಡವರೊಡನೆ ಕೃಷ್ಣನ ಪ್ರವೇಶ)

ಕೃಷ್ಣ : ರಾಜೇಂದ್ರ, ಪಾಂಡವರು ನಿನ್ನ ಚರಣ ದರ್ಶನವನ್ನು ತೆಗೆದು ಕೊಳ್ಳಲು ಬಂದಿರುವರು. ಅವರನ್ನು ಕ್ಷಮಿಸು.

ಧೃತರಾಷ್ಟ್ರ : ಪಾಂಡುಪುತ್ರರು ಬಂದರೇ ! ಬನ್ನಿರಿ, ನನ್ನ ಹತಭಾಗ್ಯ ಪುತ್ರರೇ, ಮುಮೂರ್ಷು ಧೃತರಾಷ್ಟ್ರನ ಹೃದಯದಲ್ಲಿ ಈಗ ದ್ವೇಷ ಕ್ಕೆಡೆಯಿಲ್ಲ. ಯುಧಿಷ್ಠಿರ, ಭೀಮಸೇನ....ಒಬ್ಬೊಬ್ಬರಾಗಿ ನನ್ನನ್ನು ಆಲಂಗಿಸಿರಿ. ಹಾ ! ಎಂತಹ ಜ್ವಾಲೆ !

ಯುಧಿ : ಭೀಮಸೇನ—ಹೋಗು. ಜ್ಯೇಷ್ಠಪಿತನ ಕ್ಷಮೆಯನ್ನು ಬೇಡು.

(ಭೀಮನು ಸಮೀಪಕ್ಕೆ ಹೋಗುವನು)

ಕೃಷ್ಣ : (ತಡೆದು, ಜನಾಂತಿಕ) ಭೀಮ, ಸ್ವಲ್ಪ ಹಾಗೆಯೇ ನಿಲ್ಲು. ನಾನೀ ಗಲೇ ಬರುವೆನು. (ಹೋಗುವನು)

ಧೃತರಾಷ್ಟ್ರ : ಭೀಮಸೇನ, ಎಲ್ಲಿರುವೆ ? ಇನ್ನೂ ಸಮೀಪಕ್ಕೆ ಬಾ. ಮಗೂ ನನ್ನನ್ನು ನೋಡಿ ಭಯವೇ? ನಾನು ಕೇವಲ ವೃದ್ಧ, ಮುಮೂರ್ಷು.

(ಲೋಹಪ್ರತಿಮೆಯನ್ನು ತೆಗೆದುಕೊಂಡು ಕೃಷ್ಣನು ಪುನಃ ಪ್ರವೇಶಿಸುವನು)

ಕೃಷ್ಣ : ಭೀಮನು ನಿನ್ನಲ್ಲಿ ಸರ್ವಾಪರಾಧ ಮಾಡಿರುವನು. ಅದಕ್ಕೋಸ್ಕರ ವಾಗಿಯೇ ಇಷ್ಟೊಂದು ಭಯವೆಂದು ತೋರುವುದು. ಹೋಗು, ಭೀಮ, ನಿನ್ನ ಜ್ಯೇಷ್ಠಪಿತನಿಗೆ ವಂದಿಸು.

(ಲೋಹ ಪ್ರತಿಮೆಯನ್ನು ಮುಂದಿಡುವನು)

Sri Vidyabharathi Book Centre, Sringeri

CC-O. In Public Domain. Digitized by eGangotri

ಧೃತರಾಷ್ಟ್ರ : ಬಾ ಕುಮಾರ, ಸಮೀಪಕ್ಕೆ ಬಾ. ಹೃದಯದಲ್ಲೆಂತಹ ಜ್ವಾಲೆ ! ನಿನ್ನನ್ನೊಂದು ಸಾರಿ ಆಲಂಗಿಸಿಕೊಳ್ಳುವೆನು ಭೀಮ, ನನ್ನ ನೂರು ಜನ ಮಕ್ಕಳನ್ನು ಕೊಂದ ಘಾತುಕಿ !

(ಪ್ರತಿಮೆಯನ್ನು ಬಲವಾಗಿ ತಬ್ಬಿಹಿಡಿಯುವನು)

ಕೃಷ್ಣ : ಧೃತರಾಷ್ಟ್ರ ! ಏನನ್ನು ಮಾಡಿದೆ ! ಭೀಮನು ಸಾಯುವನು.

ಧೃತರಾಷ್ಟ್ರ : ಸಾಯಲಿ, ಅವನ ದೇಹದಿಂದ ಪ್ರಾಣವಾಯುವು ಹಾರಿ ಹೋಗುವವರೆಗೂ ನಾನು ಬಿಡುವುದಿಲ್ಲ. ನಿನಗೆ ಶಕ್ತಿಯಿದ್ದರೆ ರಕ್ಷಿಸಿಕೋ ವಾಸುದೇವ ! (ಪ್ರತಿಮೆಯು ಪುಡಿಪುಡಿಯಾಗುವುದು)

ಕೃಷ್ಣ : ಭೀಮನು ಮೃತನಾದನು !

ಧೃತರಾಷ್ಟ್ರ : ಮೃತನಾದನು ? ಹಾ ! ಎಂತಹ ಅಕಾರ್ಯವಾಯಿತು ! ಕೋಪವಶನಾಗಿ ನಾನೆಂತಹ ಪಾಪವನ್ನು ಮಾಡಿದೆನು ! ಕ್ಷಮಿಸು, ವಾಸುದೇವ ! (ರೋಧನ)

ಕೃಷ್ಣ : ದುಃಖಿಸಬೇಡ, ರಾಜೇಂದ್ರ. ಭೀಮನು ಸುರಕ್ಷಿತನಾಗಿರುವನು. ನೀನು ಕುಪಿತನಾಗಿರುವೆಯೆಂದು ತಿಳಿದು ನಾನು ಲೋಹಪ್ರತಿಮೆಯೊಂದನ್ನು ನಿನ್ನ ಮುಂದಿಟ್ಟೆನು. ನಿನ್ನ ದೃಢಬಂಧನದಿಂದ ಅದು ಚೂರ್ಣವಾಯಿತು. ಕೋಪವನ್ನು ತ್ಯಜಿಸಿ ಪಾಂಡವರನ್ನು ಕ್ಷಮಿಸು ಮಹಾರಾಜ.

ಧೃತರಾಷ್ಟ್ರ : ಅವರನ್ನು ನಾನು ಕ್ಷಮಿಸಿರುವೆನು ಕೃಷ್ಣ.

(ಗಾಂಧಾರಿಯ ಪ್ರವೇಶ)

ಗಾಂಧಾರಿ : ಯಾರು ನೀವು ? ಇಲ್ಲೇಕೆ ಬಂದಿರಿ !.....

ಕೃಷ್ಣ : ಮಹಾರಾಣಿ, ಪಾಂಡವರು ನಿನ್ನ ಕ್ಷಮಾಭಿಕ್ಷೆಯನ್ನು ಬೇಡಲು ಬಂದಿರುವರು. ಅವರನ್ನು ಕ್ಷಮಿಸು, ತಾಯಿ.

ಗಾಂಧಾರಿ : ಅವರನ್ನು ಕ್ಷಮಿಸುವ ಅಗತ್ಯವಿಲ್ಲ, ಕೃಷ್ಣ. ಈ ಯುದ್ಧಕ್ಕೆ ಕಾರಣನು ನೀನು, ನನ್ನ ಪುತ್ರರನ್ನು ವಧಿಸಿದವನು ನೀನು. ಹದಿನೆಂಟು ದಿನಗಳ ಮೊದಲು ನನ್ನ ವೀರ ದುರ್ಯೋಧನನು ಉನ್ನತ ಮಸ್ತಕವನ್ನು ಪಾದದ ಮೇಲಿಟ್ಟು ನನ್ನಾಶೀರ್ವಾದವನ್ನು ಬಯಸಿದನು. ಕಾತರದಿಂದ ಯಾರಿಗೆ ಜಯವಾಗುವುದೆಂದು ಕೇಳಿದನು. ನಾನು ಉಕ್ಕಿಹರಿಯುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಣ್ಣೀರನ್ನು ತಡೆದು, ನಿನ್ನ ನಾಮವನ್ನು ನುಡಿಯುತ್ತಾ "ಯಾರಲ್ಲಿ ಧರ್ಮವಿರುವುದೋ ಅವರಿಗೆ ಜಯಲಾಭ" ವಾಗುವುದೆಂದು ಹೇಳಿದೆನು.

ಕೃಷ್ಣ : ತಾಯಿಯ ನುಡಿಯು ವಿಧಾತನ ವಾಣಿಯಂತೆ. ಹುಟ್ಟು ಸಾವಿನಂತೆ ಧರ್ಮಕರ್ಮಗಳೂ ನಿಯಮಾಧೀನ. ಆ ನಿಯಮವನ್ನು ತಪ್ಪಿಸುವುದು ಯಾರಿಗೂ ಸಾಧ್ಯವಿಲ್ಲ. ಅವನು ಮಾನವನಾಗಲಿ, ದೇವತೆಯಾಗಲಿ ಆದಕ್ಕಾಗಿ ಅಳುವುದರಿಂದಾಗುವುದೇನು, ಮಹಾರಾಣಿ ?

ಗಾಂಧಾರಿ : ಅಳುವುದು ! ಅಳುವುದು ! ವಾಸುದೇವ, ನನ್ನ ನೂರು ಜನ ಮಕ್ಕಳು ಸತ್ತರು. ಅವರ ಸಲುವಾಗಿ ಅತ್ತು ಅತ್ತು ನನ್ನ ಕಣ್ಣೀರಿನ ಕಾಲುವೆಯು ಬತ್ತಿಹೋಗಿರುವುದು, ಪ್ರಭು. ಪುನಃ ಅದನ್ನು ತುಂಬಿಸುವ ಶಕ್ತಿಯಿಲ್ಲ ನನಗೆ ! ಕಣ್ಣೀರಿನಿಂದ ಸಮಗ್ರ ಪೃಥ್ವಿಯನ್ನು ತೋಯಿಸಬೇಕೆಂದು ಆಸೆಯಾಗುವುದು. ಆರ್ಯಾವರ್ತದ ನದನದಿಗಳಲ್ಲಿ ನನ್ನ ಅಶ್ರು ಜಲವನ್ನು ಹರಿಸಬೇಕೆಂದು ಇಚ್ಛಿಸುವೆನು. ಕಣ್ಣೀರಿನ ಮಹಾಸಾಗರವನ್ನು ಸೃಷ್ಟಿಸಿ ನಿನ್ನ ಕೀರ್ತಿಯನ್ನು ಮುಳುಗಿಸಬೇಕೆಂದು ನನ್ನ ಅಪೇಕ್ಷೆ. ಆದರೆ ಶಕ್ತಿಯಿಲ್ಲ. ಏನು ಮಾಡಲಿ !.... ಕೇಳು, ವಾಸುದೇವ..... ಕುರುಕ್ಷೇತ್ರದ ಮೂಲೆ ಮೂಲೆಗಳಲ್ಲಿಯೂ ಎಂತಹ ಆರ್ತಧ್ವನಿಯೆದ್ದಿರುವುದು ! ಇಷ್ಟೊಂದು ಜನ ವೀರಾಂಗನೆಯರ ಅಭಿಶಾಪದಿಂದ ನೀನು ಉದ್ಧಾರವಾಗುವುದಿಲ್ಲ, ಕುರುವಂಶದ ನಾಶಕ್ಕೆ ಕಾರಣವಾದ ಜ್ಞಾತಿವೈರವು ಬಂಧುಬಾಂಧವರ ಸಮೇತವಾಗಿ ನಿನ್ನನ್ನೂ ನಾಶಮಾಡುವುದು. (ಹೋಗುವರು)

ಕೃಷ್ಣ : ರಾಜಮಾತೆ, ನಿನ್ನ ವಾಣಿಯು ಅಭಿಶಾಪವಲ್ಲ, ಆಶೀರ್ವಾದ. ಯಾದವರು ಯಾವ ಉದ್ದೇಶದಿಂದ ಜಗತ್ತಿನಲ್ಲಿ ಸೃಷ್ಟಿಸಲ್ಪಟ್ಟರೋ ಅದು ಮುಗಿಯಿತು, ತಾಯಿ. ನಿನ್ನ ವಾಣಿಯಂತೆ ಅವರ ನಾಶಕ್ಕೆ ನಾನೇ ಕಾರಣನಾಗುವೆನು. ಭೂಭಾರವನ್ನು ಹರಿಸಲು ಲೋಕದಲ್ಲಿ ಅವತರಿಸಿದೆನು. ಆ ಕಾರ್ಯವನ್ನು ಪೂರೈಸುವೆನು.

ಪ ಟ ಪ ರಿ ವ ರ್ತ ನೆ

ಯುಧಿಷ್ಠಿರನ ರಾಜ್ಯಾಭಿಷೇಕ

— ಮುಗಿದುದು —

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಶಿಷ್ಟ

ಹಾಡುಗಳು

(ಪಾರ್ಶ್ವದಲ್ಲಿರುವ ಅಂಕಿಗಳು ಪುಟವನ್ನು ಸೂಚಿಸುತ್ತವೆ)

ಸೂತ್ರಧಾರ

ಗಿರಿವರತನಯಾರ್ಧಾಂಗ ವಿಭೂಷ,
ಪಾಲಯ ಪರಮೇಶ ;
ದುರಿತಭಂಜನ, ದ್ಯುನದೀ ರಂಜನ,
ಮಾರವೈರಿ, ಮುನಿ ಮಾನಸ ವಾಸ,
ಈಶ, ಶುಭಕರ,
ಪಾಲಯ ಪರಶಿವ, ಸುವಿಮಲಭಾವ,
ಲೀಲಾರೂಪ, ಪ್ರಶಮಿತತಾಪ,
ಫಾಲವಿಲೋಚನ, ಪಾಪವಿಮೋಚನ,
ನೀಲಸುಕಂಧರ, ಕಲುಷವಿದೂರ,
ಶೂಲಪಾಣಿ, ದಮಿತತ್ರಿಪುರ.

ಗೋಪ ಬಾಲಿಕೆಯರು (೫)

ಶ್ರೀ ಗೋಪಾಲ, ಜೈ ವಿಮಲ,
ನಗಧರ, ಶುಭಕರ, ಜೈ, ಮಧುಮುರಹರ ;
ಅಗಣಿತ ಗುಣಯುತ,
ಮನುಮುನಿಭಾವಿತ,
ಭೃಗುತನಯಾರ್ಚಿತಸದಯಾ, ಯದುವರ,
ನೀಲಜಲಧ ನಿಭತನುರುಚಿರಾ,
ಜಲಜಭವಾರ್ಚಿತ, ನತ ಸುರಪತಿಮುಖ,

Sri Vidyabharathi Book Centre, Sringeri

CC-O. In Public Domain. Digitized by eGangotri

ದಳಿತದನುಜಚಯ,
ಪ್ರಶಮಿತಭಯ,
ಬಲಯುತ ಜೈ, ಯದುಪತಿ ಜೈ, ಜನನುತ ಜೈ !

ಭೋಗಿಶಯನ, ಸರಸಿಜನಯನ,
ನಿಗಮನುತವಿಭವ, ಭವಹರ ಕೇಶವ,

ಖಗಪತಿವಾಹನ
ಮಧುರವಚನ,
ಅಘಹರ ಜೈ, ಯದುವರ ಜೈ, ಶುಭಕರ ಜೈ !

ರುಕ್ಮಿಣಿ (೫)

ದೀನಾವನಶೀಲಾ,
ಗೋಪೀಲೋಲಾ, ವನಮಾಲಾ, ಪೊರೆ.

ದೀನಾರ್ಥಿಪಾಲಾ ನಿಖಿಲ
ಮುನಿಜನ ಪೂಜ್ಯನೆ, ಭುವನ ಸೂತ್ರಧಾರಿ.

ಅರ್ಜುನ (೬)

ಯೋಗನಿದ್ರೆಯಲ್ಲಿಹನು
ಯೋಗಿಜನ ಬೋಧಕನು
ಭೋಗಿಶಯನ ಕೃಪಾಳು ಪ್ರಾಣಸಖನು.

ಪೋಗೆ ನಾನವನ ಬಳಿ
ಯೋಗನಿಷ್ಠೆಯೊಳಿರಲು
ಯೋಗಿವರನೀಕ್ಷಿಪನು ಕಣ್ಣುತೆರೆದು

Sri Vidyabharathi Book Centre, Sringeri

CC-O. In Public Domain. Digitized by eGangotri

ಹರಿಯು ನಿದ್ರೆಯೊಳಿರಲು
ಧರೆಯೆಲ್ಲ ನಿದ್ರಿಪುದು
ಹರಿಯೇಳೆ ಎಚ್ಚರವು ಸಕಲಭುವಿಗೆ.

ಹರಿಯೆ ರವಿಯೆನಿಸುತೆ
ಹರಿಸುವನು ಕತ್ತಲೆಯ
ಹರಿಯು ಕಣ್ತೆರೆಯೆ ಬೆಳಗುವುದು ಜಗವು.

ಉದಿಸೆ ರವಿ ಕಮಲಗಳು
ಮುದದೊಳರಳುವ ತೆರದೆ
ಉದಯಿಸಿರೆ ಗೋಕುಲದ ಕೃಷ್ಣ ರವಿಯು !

ಉದಿಸೆ ರವಿ ಮಾನವರು
ಸದಮಲಾತ್ಮಜ್ಞಾನ
ಕೊದಗುವರು ಭವಬಂಧ ಸಡಿಲವಹುದು.

ಕೃಷ್ಣ—ರುಕ್ಮಿಣಿ (೧೧)

ರುಕ್ಮಿಣಿ : ತರವೆ ಶಾಂತಿಘಾತ, ನಾಥಾ, ಲೋಕ ಪೂಜಿತಾ ?
ಪ್ರೇಮಮೂರ್ತಿಯೆಂಬ ನಿನ್ನ ನಾಮವಿಂದು ವಿಫಲವಾಯ್ತು
ಸಮರದಿಂದ ಪ್ರಾಣಹಾನಿ ಸರ್ವಹಾರಿಣಿ !

ಕೃಷ್ಣ : ಭಯವಿದೇಕೆ ಶಾಂತೇ, ಕಾಂತೆ, ಪ್ರೇಮಪೂರಿತೇ,
ಸಾಮದಾನಭೇದವೆಲ್ಲ, ಕೋಮಲಾಂಗಿ, ವಿಫಲವಾಯ್ತು ;
ಸಮರದಂಡವಿಂದು ಧರಣೀಪಾಪಹಾರಿಣಿ.

ರುಕ್ಮಿಣಿ : ಕಾವುದೈ ದಯಾ ನಿಧಾನ, ಪಾವನಾತ್ಮ ಭಕ್ತಾಧೀನ ;
ಲೋಕಕಿತ್ತು ಶಾಂತಿದಾನ, ಕಾಯೊ, ಮೋಹನಾ.

ಕೃಷ್ಣ : ಧರ್ಮರಾಜ್ಯ ಸ್ಥಾಪನೆಗೆ, ಧರ್ಮಯುದ್ಧ ವಿಂದೊದಗೆ
ಕರ್ಮಭೂಮಿ ಭಾರತವು ಧನ್ಯವಾದುದೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಕುನಿ (೧೩)

ಧಗಧಗನೆದ್ದಿದೆ ದ್ವೇಷಜ್ವಾಲೆ
ದಹಿಸುತ್ತಿದೆ ಲೋಕಗಳ ಕರಾಳೆ
ಹರಡಿದೆ ದಾವಾನಲವೆಲ್ಲೆಲ್ಲು
ಉಳಿವುದೆಂತು ಈ ಕುರವಂಶಜರು !
ಸೋಲಿಸಿ ನಮ್ಮನು ಕುರುಪತಿ ತಂದನು
ಹಸ್ತಿನಾವತಿಯಲಿ ಸೆರೆಯೊಳಗಿಟ್ಟನು,
ಅಣ್ಣ ತಮ್ಮದಿರು ನೂರ್ವರು ನಾವು
ನಮಗೊದಗಿತು ಸೆರೆಮನೆಯೊಳೆ ಸಾವು
ನೂರ್ವರೊಳೊಬ್ಬನೆ ಉಳದಿಹೆನೀಗ,
ತೀರಿಸಲನುಜರ ಸಾಲವ ಬೇಗ
ಹೆಮ್ಮರವಾಗುವುದೆನ್ನಯ ಸೇಡು
ಸ್ಮಶಾನವೆನಿಪುದು ಕೌರವನಾಡು !

ಕೌರವ ಸಭೆಯಲ್ಲಿ ವೈತಾಳಿಕರು (೧೬)

ವಿಜಯಿಸೌ, ಭೂಪಾ, ರಾಜಾನ್ವಯದೀಪಾ !
ಅಜಯರೆಂದೆನಿಸುವೀ ಸಹಜರಿಂದೆ ಸೊಗಯಿಸುತೆ
ತ್ರಿಜಗದೇಕ ವೀರನೆನಿಸಿ, ತಳೆ ಯಶವನು ನಿರತಾ.

ಭುಜಬಲವಿಖ್ಯಾತಾ, ನೃಪಕುಲ ನಮಿತಾ ವಿನುತ
ತ್ರೈಲೋಕಶೋಭಾಕರ, ರಿಪುಭೀಕರ,
ಪಾಲಿತಾಶೇಷ ದರಾಧೀಶ್ವರ, ಕುರುಭಾಸ್ಕರ.

ದಲಿತ ಸಕಲ ರಿಪುಕುಲಬಲ
ಕಲಿತ ಕೀರ್ತಿಸುಚರಿತಾ,
Sri Vidyabharathi Book Centre, Sringeri
ಇಳೆಯೊಳಧಿಕನೆನಿಸಿ ನಿರತ, ಮೆರೆಯೈ ; ಚಕ್ರೇಶ್ವರ.

CC-O. In Public Domain. Digitized by eGangotri

ನರ್ತಕಿಯರು (೧೬)

(ರಾಜಸಭೆಯಲ್ಲಿ ಕೃಷ್ಣನ ಪ್ರವೇಶಕ್ಕೆ ಮೊದಲು)

ಹತ್ತಿಸುವೆವು ದೀಪಗಳನು,
ಕೌರವಸಭೆ ಬೆಳಗಲಿ

ಘಮುಘಮಿಸುವ ಹೂ ಚೆಲ್ಲಿದ
ಪಥದೊಳತಿಥಿ ನಡೆಯಲಿ.

ಬೃಂದಾವನದಂದಗಾರ್ತಿ
ಗೊಲ್ಲತಿಯರ ಪ್ರೇಮಗುರು,

ನಂದಗೋಪನೊಲುಮೆಯ ನಿಧಿ,
ಭಕ್ತಜನರ ಕಲ್ಪತರು.

ಬರುವನು ಮುರಹರನಿಂದೀ ಸಭೆಗೆ
ತರುವನು ಬಲ ಸಂಮೋದವ ನಮಗೆ.

ಮನದತಿಶಯ ಭಾವಗಳನು
ಮೆರೆಸುತೆ ಕುಣಿವೆವು ನಾವು,

ರಾಧಿಕಾರಹಸ್ಯಪತಿಯ
ಕಣ್ದಣಿಯೆ ನೋಡುವೆವು.

ದ್ರೌಪದಿ (೩೩)

ಜ್ವಲಿಸುವುದನುವನತಾ, ನಿಜಾಂತ,
ಕಲುಷಿತಮನದಾ ವ್ಯಾಕುಲಭಾವಾ,
ತಾಳಲಾರೆನಹ, [illegible]!

Sri Vidyabharathi Book Centre, Sringeri

CC-O. In Public Domain. Digitized by eGangotri

ಐವರ ಕಾಂತೆ ಎನಿಸಿರೆ ಚಿಂತೆ,
ತಳೆದೆ ಪರಿಭವಾ, ಸವೆಸಿದೆ ಜೀವಾ,
ಸರ್ವೇಶಾ, ಕೊಡು ಚಿರವಿಭವ.

ದ್ರೌಪದಿ—ಭೀಮಸೇನ (೩೪)

ದ್ರೌಪದಿ : ಸಾಕಿನ್ನು ನಿಮ್ಮ ಸಹವಾಸ,–ನೀವೈವ
ರಿದ್ದೇನು ತಪ್ಪಲಿಲ್ಲೆನಗೆ ವನವಾಸ.
ಭೀಮ : ಏನಾಯ್ತು ಹೇಳ, ಪಾಂಚಾಲಿ,–ನಿನನೊಲಿಸೆ
ನಾನಿಲ್ಲವೆ ಜಗದೊಳಧಿಕ ಬಲಶಾಲಿ
ದ್ರೌಪದಿ : ಒಲೆಗಿಕ್ಕು ನಿನ್ನ ಶೌರ್ಯವನು–ಮರೆತೆಯೋ
ಕುರುಸಭೆಯೊಳೆನಗಾದ ಭಂಗವೆಲ್ಲವನು ?
ಭೀಮ : ದ್ಯೂತದಿ ಧರ್ಮಜನು ನಿನ್ನ–ಸೋತಿರಲು
ನಾಮಾಡಲೇನಿಹುದು ಪೇಳೆನ್ನ ಚಿನ್ನ.
ದ್ರೌಪದಿ : ಅಣ್ಣನಾಜ್ಞೆಯೆ ನಿಮ್ಮ ಧರ್ಮ–ಅದರಿಂದೆ
ನಿಮಗಾಯ್ತು ವನವಾಸ ಪರಸೇವೆ ಕರ್ಮ.

ಕರ್ಣ (೪೩)

ನಮೋ ನಮಸ್ತೇಸ್ತು ಸದಾ ವಿಭಾವಸೇ
ಸರ್ವಾತ್ಮನೇ ಸಪ್ತಹಯಾಯ ಭಾವವೇ ॥
ಅನಂತಶಕ್ತಿರ್ಮಣಿ ಭೂಷಣೇನ
ದಧಸ್ವ ಭುಕ್ತಿಂ ಮಮ ಮುಕ್ತಿಮವ್ಯಯಾಂ ।
ಜಗದಾದಿ ಮಹಾಶೂನ್ಯದೊಳೆಲ್ಲೆಡೆ
ಘನಿಸಿದ ಕತ್ತಲೆ ಹರಡಿರಲು,
ತೇಜೋರೂಪದೆ ಅವತರಿಸುತೆ ನೀಂ
ಬೆಳಗಿದೆ ಲೋಕ ಆಲೋಕವನು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನಿಂದಾದುದು ದೃಶ್ಯಪ್ರಪಂಚವು
ನೀನಿಹೆ ಅದರೊಳು ಬೆಳಕಾಗಿ,
ನೀನೆ ಗಗನದಾ ಶಾಶ್ವತ ದೀಪವು
ನಿನ್ನಿಂದಾದುದು ಹಗಲಿರುಳು
ನಭದೆ ತಾರಕೆಗಳೆಷ್ಟಿದ್ದರೇನು
ನೀನೇ ಲೋಕಕೆ ಕಾಂತಿದಾತ,
ಆದಿತ್ಯನೆ ಬಾ, ನಮ್ಮ ತಿಳಿವಿನೊಳು
ಬೆಳಗಲಿ ನಿನ್ನಯ ಜ್ಯೋತಿ ಅನಂತ.

ಕುಂತಿ (೪೩)

ಕರುಳಿನ ಕರೆ ಕರೆಯುತ್ತಿದೆ
ನನ್ನ ಬಳಿಗೆ ನಿನ್ನನು,
ಮರುದನಿ ಕೊಡೆಯೇಕೆ ಮಗನೆ,
ಮರೆತೆಯೊ ನೀನೆನ್ನನು ?
ತವನಿಧಿ ದೊರಕಿರಲೆದೆಯೊಳ್
ತಳೆಯದೆ ನಾನಜ್ಞಳು
ತೆರದನೀಗ ನಿಂತಿದೆ ಅದು
ಭೂಮವಾಗಿ ಎದುರೊಳು.

ಶೂನ್ಯದಿಂದ ಜಗಕೆ ಬಂದು
ಶೂನ್ಯವಾಗಿ ಬೆಳೆದು ಮತ್ತೆ
ಶೂನ್ಯಕೆ ಕೈಚಾಚಿದಂತೆ
ನಗುವಿಗೆಡೆಯು ಎನ್ನ ಚರಿತೆ.

ಗಾಂಧಾರಿ (೪೪)

ಪ್ರಳಯಕೆ ಮೊದಲೇ ದಶದಿಶೆ ಕಂಪಿಸಿ
ಮೊಳಗಿತು ಶೋಕದ ಹಾಹಾಕಾರ!

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂದೇನಹುದೋ ಕಾಣರಾರು,
ದೇವತೆಗಳಿಗಿದು ಧಿಕ್ಕಾರ !
ಧರ್ಮನೀತಿ ಮಾನವತೆ ಅಳಿದರೆ
ಹಿಂಸೆಯು ಆಳ್ವಿಕೆ ಎಲ್ಲೆಡೆ ನಡೆದಿರೆ,
ಯುದ್ಧ ದೇವತೆಗೆ ಹಬ್ಬದೌತಣವು
ನಾಗರಿಕತೆಗದೆ ವಿಧ್ವಂಸ !
ನೂರು ಮಕ್ಕಳನು ಹಡೆದ ತಾಯಿನಾ
ಮನದೊಳಗುಂಟೇ ಆನಂದ !
ನೂರುದುಃಖಗಳ ಪಡೆದವೊಲಿರುವೆನು,
ಬೆಳೆಯೆ ದಾಯಾದದ ಉನ್ಮಾದ !

ಕೃಷ್ಣ (೫೬)

ವಿಜಯಾ, ಜವದೊಳೀಕ್ಷಿಸೈ, ಮೆರೆವೀ
ರಣಭುವಿಯು ಪರಿಯು
ಮಹಾಭೀಕರ, ನಿಭರ ಯಧ್ವಜ
ಸಹಸ್ರಕೃಪಾಣ ಭಯಂಕರ,
ಮಹಾರಥಿಕ ಬಹುಪದಾತಿ ಪರಿವೃತ,
ಮಹೋಗ್ರಾರಿ ಭಟ ಸಮಾಕ್ರಾಂತ !

ಅಹಿತ ನಿವಹಯುತ,
ತುರುಗಗಜಸಹಿತ ವಿಭವಮುದಿತಾ.
ತುಹಿನರೋಚಿ ಕುಲಮಹಾಬ್ಧಿ
ನಿಖಿಲ ನೃಪಭರಿತ, ಕುರುವಿಷಯ ಪರಿಕಲಿತ.

ಶಿಖಂಡಿ (೬೩)

ಅಂತಿಂಥ ಹೆಣ್ಣು ನಾನಲ್ಲ, ಲೋಕದೊ
ಳೆನ್ನ ಸಮಾನರು ಬೇರಾರೂ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡೆ ಶರೀರ ಪುರುಷಾಕಾರ
ವೀರನಂತೆ ವಸ್ತ್ರಾಲಂಕಾರ
ಮನದೆ ಹೆಣ್ಣಿನರೀತಿ ಪ್ರೇಮ ಪರಾಭೂತಿ
ವೃದ್ಧ ಭೀಷ್ಮನಿಗಾದೆ ಉಪಹಾರ.
ಬ್ರಹ್ಮಚರ್ಯದೆ ಧರ್ಮಸೂಕ್ಷ್ಮ
ಅರಿತೆನ್ನ ತೊರೆದನು ಕಡುಗಲಿ ಭೀಷ್ಮ,
ನಾಶವಾದುದು ಮೋಹ, ಕೊಟ್ಟೆನಗ್ನಿಗೆ ದೇಹ,
ಮರಳಿ ಹುಟ್ಟಿದೆ ದ್ವೇಷಸಾಧನೆಯೆ ಧರ್ಮ.
ಕಣ್ಣಿನಲ್ಲಿ ಚಂಚಲತೆ ಕರದೆ ಕೋದಂಡ,
ತುಟಿಯಲ್ಲಿ ಜೇನಿರಲು ಮನದೆ ವಿಷವು
ಪ್ರೇಮ ದ್ವೇಷಗಳೊಂದೆ ಪಾತ್ರೆಯಲಿ ಕುದಿಯುತಿದೆ
ಕಿಚ್ಚನುದರದೆ ತಳೆದ ಕಡಲತೆರದೆ.

ಭೀಮ—ಅಭಿಮನ್ಯು (೭೧)

ಅಭಿಮನ್ಯು : ವೀರಧನಂಜಯನೆನ್ನತಂದೆಯೆನೆ
ಭಯವೇನೆಂಬುದನರಿಯೆ,
ದ್ರೋಣನ ಚಕ್ರವ್ಯೂಹವ ಭೇದಿಸಿ
ವೀರಾಗ್ರಣಿನಾಂ ಮೆರೆವೆ.

ಭೀಮ : ರುದ್ರನ ಮೆಚ್ಚಿಸಿ ಪಾಶುಪತಾಸ್ತ್ರವ
ಪಡೆದ ವೀರವರನಣುಗನು ನೀನು
ಶೌರ್ಯದಲಿ ಮೆರೆಯಲಿ ರಣಭುವಿ
ಹೂಮಳೆಗರೆಯಲಿ ಸುರಗಣವು.

ಅಭಿಮನ್ಯು : ಕೌರವ ವೀರರ ಹೃದಯವ ಭೇದಿಪು
ದೆನ್ನಧನುಷ್ಟಂಕಾರರವ,
ವೈರಿಗಳೆದೆಗಳ ನಡುಗಿಪುದೆನ್ನಯ
ವಿಜಯದ [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತರೆ ಮತ್ತು ಸಖಿಯರು (೭೨)

ತಂಗಾಳಿತಂದ ನರುಗಂಪು
ಯಾವ ಹೂವಿನದೆಂದು ತಿಳಿದಿಹೆವು ನಾವು,
ಅದುವೆ ಬನವಸೆ ನಾಡ ಹೂವುಗಳ ರಾಣಿ,
ಮಲ್ಲಿಗೆಯು ಮೃದು ಗಂಧ,
ಕೊಡುವುದೆಮಗಾನಂದ
ಮಧರಾತ್ರಿಗೊಲವನನುಗೊಳಿಪ ಕಟ್ಟಾಣಿ !
ಪಾರ್ವತಿ ಹೆಜ್ಜೆ ಗುರುತಿರುವ
ಹಿಮಶೈಲದಿಂದೆ ಹಿಮಬಿಂದುಗಳ ತಂದು
ಮಾಡಿದನು ಮಲ್ಲಿಗೆಯ ಮಮತೆಯಿಂ ವಿಧಿಯು ;
ರತಿಮದನರೊಂದಾಗಿ
ಸುಖಸಾಗರಗಳ ತೂಗಿ
ಅದರೊಡಲೊಲೊಟ್ಟಿದರು ಮೋಹ ಸುರಭಿಯನು.
ಪರಶಿವನನರ್ಚಿಸಲು ನಾವು,
ತಂದಹೂವೊಂದೊಂದು ಭಕ್ತಿರಸಬಿಂದು ;
ಕರುನಾಡ ಸಿರಿದೇವಿಗೊಪ್ಪಿದರ್ಘ್ಯಬಲಿ.
ನರ್ಮ್ಮೊಡತಿ, ಅವಳಪತಿ,
–ಇಬ್ಬರೂ ಮದನರತಿ–
ಒಡಗೂಡೆ ಸೊಗಯಿಸಲಿ ಆನಂದ ಕೇಳಿ

ಉತ್ತರೆ (೭೬)

ಸುಮೋಹರೂಪಾ, ಸುಗುಣ,
ಸುರಭಿಯುತ ಚಾರು
ಸುಮಗಳಿಂದ ಪೂಜೆಗೈವೆನಿನ್ನನಾಂ
ಪ್ರಮುದಿತಕೈರವ ಕುರುವಕಾಶೋಕ,
ಕಮ್ಮನ್ನೆಯ [illegible]

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಮರನಿಭ ತನರುಚಿ ಸುಂದರ, ನಿನ್ನಯ
ಚರಣಸೇವೆಯುಗ್ಧೈದು ಪಾವನೆಯೆನಿಸಿದೆ.
ಕರುಣಿಸಿತೆನ್ನೊಳು ಪ್ರೇಮಭಿಕ್ಷೆಯ ನೀಡು,
ಸರಸೀರುಹಾಕ್ಷ, ಭಾರತಾನ್ವಯಚಂದ.

ಉತ್ತರೆ—ಅಭಿಮನ್ಯು (೭೬

ಉತ್ತರೆ : ಸಾಕೀವಿನೋದ, ಸರೋಜಾನನಾ
ನಾಂಬಲ್ಲೆನ್ನೈ ನಿನ್ನ ಪ್ರೇಮಾರ್ಜನ,
ಏಕಾಂಗಿಯಾಗಿ ಕಾಂತೆಯ ನೀಗಿ
ಪೋಗಲ್ಕದೇಂ ನೀತಿಯೋ ಕಾಣೆನಾ !

ಅಭಿಮನ್ಯು : ನೀರಜನೇತ್ರೆ, ವೃಥಾ ಕೋಪವೇ ?
ಆನಂದವ ಬೀರೆ ನಾಂ ಬೇಡುವೆ.
ಕಾರುಣ್ಯಶೀಲೆ, ಕೋಮಲೆ ಬಾಲೆ,
ಸಂಗ್ರಾಮಕೆಂತಾಹ ನೀಂ ಪೋಗುವೆ !

ಉತ್ತರೆ : ನಾರಿಯ ಕೋಪ, ತಾಳಿರೆ ರೂಪ,
ಶರಸಂಧಾನದೊಳೆನ್ನ ಚಾತುರ್ಯ ತೋರಿ,
ವೀರಸತಿಯಂತೀಗ ಶೋಭಿಪೆ.

ಮಾಧವಿ–ಮೋಹಿನಿ (೭೮)

ಮದನಂಗೆ ವೃಡನಿಂದೆ ಆಯ್ತು ಬಲು ಹಾನಿ
ಅದರೊಳೇ ಅಮರತ್ವ ಹುಡುಕು ನೀ, ಮಾನೀ,
ಆ ಭೂಮ ಪ್ರೇಮಮಯ ಸಂಮಿಳನ ದಾಹ
ಹರಿಯಿಸಲಿ ಜ್ವಲದರ್ಜಿ ಉತ್ಸಪ್ರವಾಹ !
ಪುಳಕಿಸಿರೆ ಮಿಳನದಾನಂದ ಬಹು ಪ್ರಖರ,
ವಿರಹವೇದನೆ ಕಳೆ[illegible],

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಗಿಸಿ ಪ್ರಳಯದ ದೀರ್ಘ ನಿದ್ರೆಯನ್ನು
ವೀರತ್ವದಿಂ ಆತನು ಪಡೆಯೆ ಮತ್ತೆ ತನು, ಏಳು ಪುಷ್ಪಧನು !

ಮಾಧವಿ, ಮೋಹಿನಿ ಮತ್ತು ಸಖಿಯರು (೮೨)

(ಅಭಿಮನ್ಯು ಹೋಗುತ್ತಿದ್ದಂತೆ)

ನಿನ್ನ ನವಶಂಖವಿದೆ । ಮೊಳಗುತಿದೆ ನಭದಲ್ಲಿ
ನುಡಿಸುತಿದೆ ಜಾಗರಣ ಗೀತ ।
ಅರುಣರುಚಿ ಆಸನದೆ, ಮರೆಯ ತವಪದ ಕಮಲ,
ಅರಳುವುದು ಹೃದಯ ಕಜಾಂತ
ಕತ್ತಲಿಂದತ್ತತ್ತ
ಬೆಳಕು ಹರಡಿರೆ ಸುತ್ತ
ಕಳೆದದನು ಕರುಣೆಯಿಂ ತೋರು ಶುಭಹಸ್ತ !

ಮಾಧವಿ (೮೯)

(ಉತ್ತರೆ ನಿದ್ರಿಸುತ್ತಿದ್ದಂತೆ ಮಾಧವಿ ಹಾಡುವಳು)

ಆಕಾಶದೊಳಗೊಂದು ದಿವ್ಯಾಸನ,
ಅಲ್ಲಿಹುದು ನಿನ್ನವನ ಸಿಂಹಾಸನ,
ವಿರಹಿಣಿಯೆನ್ನಯ ಹೃದಯಾಂಗಣದಲಿ,
ಮೆಲುನುಡಿಗೊಡುತಿದೆ ಆಶಾಗಾನ
ಎಲೆಎಲೆಯಲ್ಲಿ, ಹಸಿರಲ್ಲಿ, ಹೂವಲ್ಲಿ,
ಎಲ್ಲೆಲ್ಲು ಹೊಸಬಾಳು, ಹೊಸತು ಬರಹ !
ಚಂಪಕಾಶೋಕೆ ಅಶ್ವತ್ಥ ಪುನ್ನಾಗದ
ಬನದಲಿ ಚಿಗುರಿದೆ ಮೋಹ !

Sri Vidyabharathi Book Centre, Sringeri

CC-O. In Public Domain. Digitized by eGangotri

ವೈತಾಳಿಕರು (೯೧)

(ಅಭಿಮನ್ಯುವಿನ ಮೃತ್ಯು ವಾರ್ತೆಯನ್ನು ತಂದ ದೂತರು
ಪ್ರವೇಶಿಸುತ್ತಿದ್ದಂತೆ ನೇಪಥ್ಯದಲ್ಲಿ)

ಎಲ್ಲ ದೋಷಗಳ ಸುಡುವುದು
ನಿನ್ನ ಕ್ರೋಧದಾಹ !

ಹೇ ಭೈರವ, ಶಕ್ತಿ ನೀಡು ; ಭಕ್ತರೊಳಿಡು ಸ್ನೇಹ !
ಮೌಢ್ಯವಿರಲಿ, ಕ್ಷುದ್ರವಿರಲಿ,
ದೂರಮಾಡು, ಮಹಾರುದ್ರ !

ಮೃತ್ಯುವ ಕಡೆಗಣಿಪುದೆಮ್ಮ ಜೀವಮಹೋತ್ಸಾಹ !
ದುಃಖ ಜಲಧಿ ಮಥನದೊಳುದಿ—
ಸಿತ್ತು ಜೀವದಮೃತ

ಭೀತಿಶಂಕೆ ಮರಣಗಳಿಗೆ ರಕ್ಷಣೆ ಅದು ಸತತ,
ನಿನ್ನ ರೌದ್ರ ತೇಜದಿಂದೆ
ವಿಶ್ವವೆಲ್ಲ ತಳಮಳಿಸಿರೆ
ನದಿಯ ತೆರದೆ ಹರಿವುದು ಮನ, ತ್ಯಾಗಭಾವ ಭರಿತ !

ಉತ್ತರೆ (೯೩)

ಪ್ರಾಣಪತಿ, ನಿನ್ನನಾಂ ಕಾಣಲೆಂತು !
ತನುವೆ ನೀಗುತೆ ಚಿತಾನಲದೆ, ನಿನ್ನಂಘ್ರಿಯ ಸೇರಲೆಂತು !
ಕಂಗಳಲಿ ಪ್ರೇಮಾಶ್ರು, ತುಂಬಿರೆ,
ಅಂಗದೋಳ್ ನವಕಂಪನವೇರೆ,
ವಿಪುಲವು ಹಾ ! ಪತಿ, ನಿನ್ನನಾಂ ಕಾಣಲೆಂತು !

Sri Vidyabharathi Book Centre, Sringeri

CC-O. In Public Domain. Digitized by eGangotri

ತಾವರೆ ದಿನನಾಥನ ಕಾಣದೆ,
ತೀವಿದ ದುಃಖ ತೋರೆ ಮನದೆ,
ವಿಪುಲವು ಹಾ ! ಪತಿ ನಿನ್ನನಾಂ ಕಾಣಲೆಂತು !

ವೈತಾಳಿಕರು (೯೮)

(ದೃಶ್ಯದ ಕೊನೆಯಲ್ಲಿ)

ವಾಯುರನಿಲ ಮಥೇದಂ ಭಸ್ಮಾಂತಂ ಶರೀರಂ
ಓಂ ಕೃತೋ ಸ್ಮರ, ಕೃತಂ ಸ್ಮರ !
ಕೃತೋ ಸ್ಮರ, ಕೃತಂ ಸ್ಮರ !
ಅಗ್ನೇ ನಯ ಸುಪಥಾ ರಾಯೇ ಅಸ್ಮಾತ್
ವಿಶ್ವಾನಿ ದೇವ ವಯುನಾನಿ ವಿದ್ವಾನ್
ಯುಯೋಧ್ಯಸ್ಮಜ್ಜು ಹು ರಾಣಮೇನೋ
ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ ॥

ವೈತಾಳಿಕರು (೧೦೭)

(ವಿದುರ, ಗಾಂಧಾರಿ ಪ್ರವೇಶಿಸುತ್ತಿದ್ದಂತೆ ನೇಪಥ್ಯದಲ್ಲಿ)

ಏಳು ! ಏಳು ! ಮಹಾದೇವ ! ಏಳು !
ಅಲಂಘ್ಯ ನಿಯಮ ಪಥದೆ ಭ್ರಮಿಸಿ
ಬಳಲಿರುವೆವು ನಾವು.
ಹಾಡು, ದೇವ, ಬಾಳಿನ ಕೊನೆಗೀತವನು,
ಕೊಡುವುದೆಮಗೆ ನೂತನ ತನುಗಳನು,
ಪಡೆವೆವು ನವಜೀವನದೊಸಗೆಯನು !

Sri Vidyabharathi Book Centre, Sringeri

CC-O. In Public Domain. Digitized by eGangotri

—ಎಚ್ಚೆತ್ತನು ಮಹಾದೇವ ! ರುದ್ರ !
ಮೂರು ಕಾಲು, ಮೂರುಕಂಗಳೊಂದಾಗಿರೆ ರೌದ್ರ
ತಿರುಗಿತು ಕಣ್ ದಿಗ್ ದಿಗಂತರ !

ಪ್ರಳಯೋಗ್ರ ಪಿನಾಕವನ್ನು ಕರದೆ ತಳೆಯೆ ಶೂಲಿ,
ಚರಣ ತಳದೆ ಕಡೆದಿದ್ದುದು ವಿಶ್ವ, ತೊಳಲಿ ಬಳಲಿ,
ಎಲ್ಲ ಜಗದ ಆದಿ ಅಂತ್ಯ ಥರಥರಥರ ನಡುಗಿ
ನಿಂತಿರ್ದುದು ತಲೆಬಾಗಿ !

ಶೂನ್ಯಗಗನದಿಂ ಕೇಳಿತು ಘರ್ಜನೆ ಅಲೆಅಲೆಯಾಗಿ
ಬಂಧಮುಕ್ತ ವಿರಾಟಾ ವಿಶ್ವ ಕೋಲಾಹಲವೊಂದಾಗಿ
ಧಗಧಗದಳ್ಳುರಿ ದಹಿಸಿರೆ ಉದಿಸಿತೊಂದು ಮಹಾನಲ
ವಿಶ್ವದುಗ್ರ ಚಿತಾನಲ !

— ಮಂಗಳಾಚರಣ —

Sri Vidyabharathi Book Centre, Sringeri

CC-O. In Public Domain. Digitized by eGangotri

'ಕುರುಕ್ಷೇತ್ರ' ನಾಟಕ ಗುಬ್ಬಿ ಕಂಪನಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಅವರೆಗೆ ಆಡಿದ ಉಳಿದೆಲ್ಲ ನಾಟಕಗಳಿಂದ ಇದು ಭಿನ್ನವಾದದ್ದು. ಈ ನಾಟಕದಂತೆ - ಈವರೆವಿಗೆ ಗುಬ್ಬಿ ಕಂಪೆನಿಯ ಯಾವ ನಾಟಕವೂ ನಡೆದಿಲ್ಲ. ಇದು ಕರ್ನಾಟಕ, ಆಂಧ್ರ, ಬೊಂಬಾಯಿ ಮೊದಲಾದ ಪ್ರದೇಶಗಳಲ್ಲಿ ನಡೆದು ಜಯಭೇರಿ ಹೊಡೆಯಿತು, ಒಂದೊಂದು ದೃಷ್ಟಿಯಿಂದಲೂ ಹೊಸತನ ಸಾರಿದ ನಾಟಕ 'ಕುರು-ಕ್ಷೇತ್ರ' ರಂಗಕ್ಕೆ ಬಂದಮೇಲೆ ಬುಧವಾರ, ಶನಿವಾರ, ಭಾನುವಾರಗಳಲ್ಲಿ ವಾರಕ್ಕೆ ಮೂರು ನಾಟಕಗಳನ್ನು ಅಭಿನಯಿಸುತ್ತಿದ್ದ ಹಿಂದಿನ ಪದ್ಧತಿಯನ್ನು ಬಿಟ್ಟು ಪ್ರತಿದಿನ ಸಂಜೆ ಅಭಿನಯಿಸುವ ಹೊಸ ಪದ್ಧತಿ ಪ್ರಚಾರಕ್ಕೆ ಬಂದಿತು. ಭಾವಪೂರ್ಣವೂ, ಬುದ್ಧಿಪ್ರಚೋದಕವೂ ಆಗಿದ್ದ ಉಜ್ವಲ ಸಂಭಾಷಣೆಗಳು ಭಾರತ ಯುದ್ಧದ ದೀರ್ಘಕತೆಯನ್ನು ಸಂಗ್ರಹವಾಗಿಯೂ ಅರ್ಥವತ್ತಾಗಿಯೂ ನಿರೂಪಿಸುವುದರಲ್ಲಿ ಸಫಲತೆ, ಈ ನಾಟಕಕ್ಕಾಗಿ ರಚಿತವಾಗಿದ್ದ ವೈಭವಪೂರ್ಣ ಸಜ್ಜಿಕೆ ನಟನಟಿಯರ ಭಾವಪೂರ್ಣ ಅಭಿನಯ-ಇವೇ ನಾಟಕದ ಜನಪ್ರಿಯತೆಯ ಕಾರಣಗಳು. ಅದುವರೆಗೆ ರಂಗದ ಮೇಲೆ ಕಾಮಮೋಹಕನಾದ ತರುಣ ಲಂಪಟನಂತೆ ಚಿತ್ರಿಸಲ್ಪಡುತ್ತಿದ್ದ ಶ್ರೀಕೃಷ್ಣ "ಕುರುಕ್ಷೇತ್ರ"ದಲ್ಲಿ ಮೊದಲನೆಯ ಸಾರಿ ಸಮರ್ಥನಾದ ರಾಜಕಾರಣಿಯಾಗಿ, ಯೋಗಿ ಶ್ರೇಷ್ಠನಾಗಿ ಪ್ರೇಕ್ಷಕರ ಮುಂದೆ ನಿಲ್ಲುತ್ತಾನೆ. ಗೀತಾಬೋಧೆ ನಾಟಕದ ಪ್ರಮುಖ ದೃಶ್ಯ. ವಿಮರ್ಶಕರ ಅಭಿಪ್ರಾಯದಂತೆ ಗೀತಾಭೋದೆಯ ಹಿನ್ನೆಲೆಯಾಗಿಯೇ ನಾಟಕ ರಚಿತವಾಗಿದೆ,

ಡಾ॥ ಸಿಂದುಹಳ್ಳಿ ಅನಂತಮೂರ್ತಿ

ಗುಬ್ಬಿ ಕಂಪನಿ : ಪುಟ 132-3

Sri Vidyabharathi Book Centre, Sringeri

CC-O. In Public Domain. Digitized by eGangotri



ಸಮಕಾಲೀನ ನಾಟಕಕಾರರಾದ ಬಿ. ಪುಟ್ಟಸ್ವಾಮಯ್ಯನವರು ಪೌರಾಣಿಕ ಕಥಾವಸ್ತುವಿನಲ್ಲಿ ಆಧುನಿಕ ವಿಚಾರಗಳನ್ನು ತಂದ್ದುಕೊಳ್ಳುವ ಕಣ್ಣುಳ್ಳವರು. ಅವರ ಕೃತಿಗಳಲ್ಲಿನ ರಂಗಕೌಶಲ, ದೃಶ್ಯ ಯೋಜನೆ, ಸಹಜ ಗಾಂಭೀರ್ಯ ಸಂಭಾಷಣೆಗಳಿಂದಾಗಿ ಕುರುಕ್ಷೇತ್ರ 'ದಶಾವತಾರ' ಸತೀ ತುಲಸಿ ಮೊದಲಾದ ಪೌರಾಣಿಕ ನಾಟಕಗಳು ಕನ್ನಡ ರಂಗ ಭೂಮಿಯ ಮಹಾ ನಾಟಕಗಳೆನಿಸಿಕೊಂಡವು. ಅವರ ಕೃತಿಗಳಿಂದಾಗಿ ಗುಬ್ಬಿ ಕಂಪೆನಿ ತನ್ನ ಮುನ್ನಡೆಯಲ್ಲಿ ಮೂರು ಮೈಲಿಗಲ್ಲುಗಳನ್ನು ಮುಟ್ಟುವಂತಾಯಿತು. ಕನ್ನಡ ರಂಗದ ಶಕ್ತಿ ತೇಜಸ್ಸುಗಳು ವೃದ್ಧಿಯಾದವು.

ಡಾ॥ ಎಚ್. ಕೆ. ರಂಗನಾಥ್
ಕರ್ನಾಟಕ ರಂಗಭೂಮಿ-1980

Kurukshetra Sri Vidyabharathi Book Centre, Sringeri ಬೆಲೆ ರೂ. 8-00